## Discussion Under Rule - 59

*re : Levy Policy of the Government*

† ಶ್ರೀ ಡಿ. ದೇವರಾಜ ಅರಸ್ (ಹುಣಸೂರ್).--- ೧೯೭೯ನೇ ಇಸವಿ ಮಾರ್ಚ್ ಮತ್ತು ನವೆಂಬರ್ ತಿಂಗಳಲ್ಲಿ ಈ ೨ ತಾಲ್ಲೂಕಿನ ಗೆಜೆಟ್ ನೋಟಿಫಿಕೇಷನ್‌ಗಳನ್ನು ಏನು ಹೊರಡಿಸಿತು, ಅದು ನಮ್ಮ ಸರ್ಕಾರದ ಆಹಾರ ಧಾನ್ಯ ಸಂಗ್ರಹಣೆಯ ನೀತಿಗೆ ಸಂಬಂಧಪಟ್ಟಿದ್ದು. ಇದಕ್ಕಿಂತ ಹಿಂದೆ ೧೯೭೮ನೇ ಅಕ್ಟೋಬರ್ ೨೮ನೇ ತಾರೀಖಿನ ಸಂಗ್ರಹಣಾ ನೀತಿಗೆ ಸಂಬಂಧಪಟ್ಟ ಆರ್ಡರ್ ಒಂದು ನನ್ನ ಮುಂದಿದೆ. ಸರ್ಕಾರದವರು ಧಾನ್ಯ ಸಂಗ್ರಹಣಾ ನೀತಿಯನ್ನು ಬದಲಾವಣೆ ಮಾಡಿ ಈ ವರ್ಷ ಅಂದರೆ ೧೯೭೯-೮೦ಕ್ಕೆ ಒಂದು ಹೊಸ ನೀತಿಯನ್ನು ಜಾರಿಗೆ ತಂದಿದೆ. ಹಳೆಯ ನೀತಿ ಏನಿತ್ತು, ಹೊಸ ನೀತಿ ಏನಿದೆ ಎಂಬುದರ ಬಗ್ಗೆ ಸರ್ಕಾರ ವಿವರಣೆ ಕೊಡುತ್ತಾ ಒಂದು ಎಕರೆಗೆ ಇಂತಿಷ್ಟು ಲೆವಿ ಬತ್ತವನ್ನು ಕೊಡಬೇಕೆಂದು ಏನು ಕಾನೂನು ಇತ್ತು ಅದನ್ನು ಬದಲಾಯಿಸಿದ್ದಾರೆ. ಇದಕ್ಕೆ ಮೂಲ ಕಾರಣ ಏನೆಂದರೆ, ರೈತರು ಈ ಹಿಂದೆ ಇದ್ದಂಥ ಹಳೆಯ ಪದ್ಧತಿಯಿಂದ ಬಹಳವಾಗಿ ನೊಂದಿದ್ದರು, ಅವರಿಗೆ ತುಂಬಾ ಕಿರುಕುಳವಾಯಿತು. ಈ ಕಿರುಕುಳವನ್ನು ತಪ್ಪಿಸುವ ದೃಷ್ಟಿಯಿಂದ ಈ ಬದಲಾವಣೆ ಮುಖ್ಯವಾದುದೆಂದು ಸರ್ಕಾರದವರು ಹೇಳಿದ್ದಾರೆ ನನಗೆ ಜ್ಞಾಪಕವಿರುವಂತೆ ಹಿಂದಿನ ಪದ್ಧತಿಯಲ್ಲಿ ಒಳ್ಳೆಯ ಬೆಳೆ ಬಂದರೆ ಎಕರೆಗೆ ಇಂತಿಷ್ಟು ಲೆವಿ ಕೊಡಬೇಕೆಂದಿತ್ತು. ಆದರೆ ಅದರ ಪ್ರಕಾರ ಧಾನ್ಯ ಸಂಗ್ರಹಣೆ ಮಾಡುವುದಕ್ಕೆ ಸಾಧ್ಯವಾಗಲಿಲ್ಲವೆಂದು ಅವರ ತಿಳುವಳಿಕೆಗೆ ಬಂದಿತಂತೆ. ಆದ್ದರಿಂದ ಈ ಬದಲಾವಣೆಯಾದ ಹೊಸ ಪದ್ಧತಿಯ ಪ್ರಕಾರ ಇವರು ಏನು ಗುರಿಯನ್ನಿಟ್ಟುಕೊಂಡಿದ್ದಾರೆ ಅದನ್ನು ಮುಟ್ಟುವುದಕ್ಕೆ ಸಾಧ್ಯವಾಗುತ್ತದಂತೆ. ೨ ಲಕ್ಷ ಟನ್ ಅಕ್ಕಿಯನ್ನು ಸಂಗ್ರಹಿಸುವುದು ಇವರ ಗುರಿ. ಇದನ್ನು ತೆಗೆದುಕೊಳ್ಳುವುದಕ್ಕೆ ಹೊಸ ಪದ್ಧತಿಯಿಂದ ಸಾಧ್ಯ ಎಂಬುದು ಒಂದು ರೀತಿಯ ವಾದ.

೪-೩೦ ಪಿ. ಎಂ.

ಇದರಿಂದ ರೈತರಿಗೆ ಹಿಂದೆ ಆಗಿದ್ದಂತ ಕಿರುಕುಳವನ್ನು ತಪ್ಪಿಸುತ್ತಿದ್ದೇವೆ ಎನ್ನುವುದು ಇನ್ನೊಂದು. ಮತ್ತೆ ನಾವು ಓಪನ್ ಮಾರ್ಕೆಟ್‌ನಲ್ಲಿ ಕೊಂಡುಕೊಳ್ಳುವುದರಿಂದ ರೈತರಿಗೆ ಬತ್ತದ ಧಾರಣೆ ಬಿದ್ದು ಹೋಗದ ಹಾಗೆ ನೋಡಿಕೊಳ್ಳುತ್ತೇವೆ ಎನ್ನುವುದು ಮತ್ತೊಂದು. ಈ ಎಲ್ಲ ಘನ ಉದ್ದೇಶವನ್ನು ಇಟ್ಟುಕೊಂಡು ಹೊಸ ಪದ್ಧತಿಯನ್ನು ಜಾರಿಗೆ ತಂದಿರಿ ಇದನ್ನು ತಂದಿರತಕ್ಕಂಥ ಸಂದರ್ಭದಲ್ಲಿ ಸಂಬಂಧಪಟ್ಟ ಆಹಾರ ಮಂತ್ರಿಗಳು ಇದರ ಬಗ್ಗೆ ವಿವರಣೆ ಹೇಳಿದ್ದಾರೆ. ಈ ಹೊಸ ಪದ್ಧತಿಯಲ್ಲಿ ಏನೇನು ಗುಣಗಳು ಇದಾವೆ ಎನ್ನುವ ವಿಚಾರದಲ್ಲಿ ಒಂದು ಹೇಳಿಕೆಯು ಪತ್ರಿಕೆಯಲ್ಲಿ ಬಂದಿರುವುದನ್ನು ಈ ಸಭೆಯ ಗಮನಕ್ಕೆ ತರಲು ಇಷ್ಟಪಡುತ್ತೇನೆ. ಇದು ಒಂದು ಉತ್ತರ ರೂಪದಲ್ಲಿ ಹೇಳಿಕೆ ಬಂದಿದೆ.

> "MINISTER DUBS RYOTS' CHARGE FRIVOLOUS" Bangalore Dec. 10... Food Minister Manik Rao Patil today refuted the charges levelled against him regarding the Government procurement policy by the Karnataka Rajya Rytha Sangha and dubbed them as "frivolous".

ರೈತ ಸಂಘ ಎಂದು ಹೇಳಿ ಅದರಲ್ಲಿ ಏನು ಗುಣಗಳು ಇವೆ ಅದರ ಬಗ್ಗೆ ಕೆಲವು ವಿಚಾರಗಳನ್ನು ಮಾತನಾಡುತ್ತೇನೆ. ಹೊಸ ಪಾಲಿಸಿ ಅದರ ಗುಣಗಳು ಏನೆಂದರೆ "Compelling farmers to sell paddy under distress sale does not arise" "It is only a fraction of the requirement, The Government gets regular allocation from the Centre, which constitutes a major portion reqeired for public distribution system". ಸುಮಾರು ೧೪೦೦, ೧೨೦೦ ಮಾಡಿದ್ದೀರಿ. ಇದು ಕೊಂಡುಕೊಳ್ಳತಕ್ಕಂಥ ಪಾಯಿಂಟ್ ಎಂದು ಹೇಳತಕ್ಕಂಥದ್ದು ಎಂದು ಲೆಕ್ಕದಲ್ಲಿ ಇದೆ. ಆಮೇಲೆ

---

† Indicates that remarks or speeches have not been revised by the member concerned.

> The criticism that the open market prices were likely to be brought down by traders and millers was not "tenable" as the price factor was not determined by a small section of traders or millers but by various other factors, especially demand and supply, he said. The charges of harassment of ryots under the present levy policy were totally baseless and not understandable.

We are only extracting paddy from traders and millers and not accepting any levy from ryots. He said adding "It is left to the wisdom of the Rytha Sangha whether we are pro-traders or pro-farmers". ಇದು ೧೧ನೇ ತಾರೀಖು. ೧೨ನೇ ತಾರೀಖು ೮೧ನೇ ಇಸವಿಯಲ್ಲಿ, ಬಂದಿರತಕ್ಕಂಥ ಒಂದು ವಿಷಯ. ಮಾನ್ಯ ಮಂತ್ರಿಗಳ ಹೇಳಿಕೆ ಅಂದರೆ ಅವರ ದೃಷ್ಟಿಯಲ್ಲಿ ನಾವು ಮೊದಲು ಹೇಳಿದ ಹಾಗೆ ಆಗಿನ ಪದ್ಧತಿ ಏನು ಇತ್ತು, ಆದರಿಂದ ಏನೋ ಸೂಕ್ಷ್ಮವಾಗಿ ಹೊಸ ಪದ್ಧತಿಯಿಂದ ರೈತರಿಗೆ ಅನುಕೂಲವಾಗುತ್ತದೆ ಹಳೆ ಪದ್ಧತಿಯಿಂದ, ಎಕರೆವಾರು ನಾವು ಲೆವಿ ತೆಗೆದುಕೊಂಡು ಕಿರುಕುಳ ಕೊಟ್ಟುಬಿಟ್ಟರು, ಆದ್ದರಿಂದ ನಾವು ಅದನ್ನು ಬದಲಿಸಿದ್ದೇವೆ, ರೈತರನ್ನು ನಾವು ಲೆವಿ ಕೊಡಿ ಎಂದು ಕೇಳುತ್ತಿಲ್ಲ ಅವರು ಕೊಡಬೇಕಾಗಿಯೂ ಇಲ್ಲ. ನಾವು ಕೇಳುತ್ತಿರುವುದು ಮಿಲ್ ಮಾಲೀಕರನ್ನು ಮಿಲ್ ಪಾಯಿಂಟ್‌ನಿಂದ ಟ್ರೇಡರ್ಸ್‌ನಿಂದ, ಬಿಸಿನೆಸ್ ಮನ್ ಅವರುಗಳಿಂದ ನಾವು ತೆಗೆದುಕೊಳ್ಳುತ್ತಿದ್ದೇವೆ. ಮತ್ತೆ ನಮ್ಮ ದೇಶದಿಂದ ಹೊರಗಡೆಗೆ ಬತ್ತವನ್ನು ಸಾಗಾಟಮಾಡುವವರು ಯಾರು ಇದ್ದಾರೆ ಅವರಿಂದ ೨೦ ಪರ್ಸೆಂಟ್ ಅಂದರೆ ೧೦೦ ಕ್ವಿಂಟಾಲ್ ಬತ್ತ ಸಾಗಿಸುತ್ತಿದ್ದಾರೆ ಅದರಲ್ಲಿ ೨೦ ಪರ್ಸೆಂಟ್ ಸರೆಂಡರ್ ಮಾಡಬೇಕೆಂದು ಕೇಳುತ್ತಿದ್ದೀರಿ. ಮಿಲ್‌ನಲ್ಲಿ ೧೦೦ ಕ್ವಿಂಟಾಲ್ ಬತ್ತವನ್ನು ಮಿಲ್ ಮಾಡುವುದಾದರೆ ಅವರು ಅರ್ಧಭಾಗ ಅಂದರೆ ೫೦ ಪರ್ಸೆಂಟ್ ಸರ್ಕಾರಕ್ಕೆ ಕೊಡಬೇಕು. ಟ್ರೇಡರ್ಸ್ ಆಗಲಿ ಯಾರಾದರು ಆಗಲಿ ಲೈಸೆನ್ಸ್‌ಗಳನ್ನು ಯಾರು ಪಡೆಯುತ್ತಾರೋ ಬತ್ತ ಕೊಳ್ಳುವವರು, ವ್ಯಾಪಾರ ಮಾಡುವವರು ಇವರು ೫೦ ಭಾಗ ಕೊಡಬೇಕು. ಇದು ನಿಮ್ಮ ಸರ್ಕಾರದವರ ಉದ್ದೇಶ. ಈ ಉದ್ದೇಶ ಬಹಳ ಒಳ್ಳೆಯ ಉದ್ದೇಶವಾಗಿದೆ. ಏತಕ್ಕೆಂದರೆ ಶ್ರೀಮಾನ್ ಶ್ರೀಕಂಠಯ್ಯನವರು ಮಧ್ಯಾಹ್ನ ಸ್ಟೇಟ್‌ಮೆಂಟ್ ಮಾಡುತ್ತಾ ಹೇಳಿದರು, ಹಿಂದಿನ ಸರ್ಕಾರ ರೈತರ ಬಗ್ಗೆ ಅವರಿಗೆ ಏನು ಕಳಕಳಿ ಇರಲಿಲ್ಲ. ನಾವು ಎಲ್ಲ ಬಹಳ ಕಳಕಳಿ ಇಂದ ಮಾಡುತ್ತಿದ್ದೇವೆ. ಆದ್ದರಿಂದ ಎಲ್ಲ ತೆಗೆದು ಹಾಕಿ ಬಿಟ್ಟಿದ್ದೇವೆ, ಬೆಟರ್‌ಮೆಂಟ್ ಲೆವಿ ಪದ್ಧತಿಯನ್ನು ತೆಗೆದ ಬಿಟ್ಟಿದ್ದೇವೆ ಎಂದು ಹೇಳಿದ್ದಾರೆ, ಅವರ ಮೇಲೆ ಕಳಕಳಿ ಇದ್ದರೆ ಬಹಳ ಸಂತೋಷ. ಕಳಕಳಿ ಇದ್ದುದರಿಂದಲೇ ಈ ಹೊಸ ಪದ್ಧತಿಯನ್ನು ತಂದಿರುವುದು. ಅದನ್ನು ನಾವು ಡಿಸ್‌ಮಿಸ್ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ನಿಮಗೆ ಕಳಕಳಿ ಇದೆ ಎಂದು ಒಂದು ರೀತಿಯಲ್ಲಿ ಒಪ್ಪಿಕೊಂಡರೆ ಇದರಿಂದ ಏನು ಕಿರುಕುಳ ಆಗುತ್ತದೆ, ಆಗುವುದಿಲ್ಲ ಎನ್ನುವ ವಿಚಾರ ಗೊತ್ತಾಯಿತೋ ಇಲ್ಲವೋ ಎನ್ನುವುದು ನನಗಂತೂ ಅನುಮಾನ. ನಾನು ಏತಕ್ಕೆ ಏಕಾಏಕಿ ಅಪರ್ಟ್‌ಮಾಡುತ್ತಿದ್ದೇನೆ ಎಂದರೆ ನಿಮಗೆ ಕಳಕಳಿ ಇದೆ ಎಂದು ನಾನು ಅದನ್ನು ಡಿಸ್‌ಪ್ಯೂಟ್ ಮಾಡುವುದಕ್ಕೆ ಹೋಗುವುದಿಲ್ಲ. ನಮಗಿಂತ ಹೆಚ್ಚಾಗಿದೆ. ಆದರೆ ಒಂದು ಮಾತು ಇದೆ. "The taste of pudding is in the eating." ಸ್ವಾಮಿ ನಮ್ಮಲ್ಲಿ ಕನ್ನಡದಲ್ಲಿ ಒಂದು ಮಾತನ್ನು ಹೇಳುತ್ತಾರೆ. "ಅಳಿಯನ ಕುರುಡು ಬೆಳಗಾದಮೇಲೆ ಗೊತ್ತಾಗುತ್ತದೆ" ಎಂದು ಈಗ ನಮ್ಮ ಅಭಿಪ್ರಾಯದಂತೆ ತೊಂದರೆ ಏನು ಇದೆ, ಅನುಕೂಲ ಏನು ಆಗುತ್ತದೆ ಎನ್ನತಕ್ಕಂಥದ್ದು ಎಲ್ಲ ಅಳಿಯ ಕುರುಡು ಬೆಳಗಾದಮೇಲೆಯೇ ಗೊತ್ತಾಗುವುದು. ಈ ಹೊಸ ಪದ್ಧತಿಯನ್ನು ಜಾರಿಗೆ ತರುವಾಗ ತಾವು ಒಂದು ಎಚ್ಚರಿಕೆಯನ್ನು ಕೊಟ್ಟಿರಿ. ಪತ್ರಗಳ ಮುಖಾಂತರ ಬಂದಿದೆ. ನಾವು ಮಾಡಿರುವುದು ಸರಿಯಾಗಿದೆ. ಹಿಂದೆ ರೈತರಿಗೆ ಇದ್ದಂಥ ತೊಂದರೆಯನ್ನು ತಪ್ಪಿಸಿ ಹೊಸ ಪದ್ಧತಿಯನ್ನು ಜಾರಿಗೆ ತಂದು ನ್ಯಾಯ ಮಾಡುತ್ತೇವೆಂದು ಕಡ್ಡಾಯವಾಗಿ ಹೇಳಿಬಿಟ್ಟಿರಿ. ಬಹಳ ಸಂತೋಷ. ಕೆಲವಾರು ತಿಂಗಳು ಕಳೆದ ಮೇಲೆ ಏನು ಆಯಿತು. "ಊರಿಗೆ ಬಂದರೆ ನೀರಿಗೆ ಬರಲೇಬೇಕು" ಎನ್ನುವುದು ಗಾದೆ ಇದೆ. ನಾಳೆ ರಾಯರು ನೀರಿಗೆ ಬರುತ್ತಾರೆ. ಅವಾಗ ನೋಡೋಣ. ನಿಮ್ಮ ಹೊಸ ಪದ್ಧತಿ ಎಷ್ಟರ ಮಟ್ಟಿಗೆ

ಫಲಕಾರಿಯಾಗುತ್ತದೆ ರೈತರಿಗೆ ಅನುಕೂಲವಾಗುತ್ತದೆ ಎನ್ನುವುದು ಗೊತ್ತಾಗುತ್ತದೆ. ಇನ್ನೇನು ಸೀಸನ್ ಕಳೆದುಬರುತ್ತಿದೆ. ಬತ್ತ ಕೊಯಿಲು ಆಗಿದೆ. ಎಷ್ಟೆಷ್ಟು ದಾನ್ಯ ಸಂಗ್ರಹಣೆ ಮಾಡಿದ್ದೀರಿ, ಎನ್ನುವುದು ಗೊತ್ತಾಗುತ್ತದೆ. ಈಗ ನನ್ನ ಹತ್ತಿರ ಲೆಕ್ಕವಿಲ್ಲ. ನಿಮ್ಮ ಹತ್ತಿರ ಇದ್ದರೆ ಕೊಡಿ, ಕೊಟ್ಟರೆ ಸಂತೋಷ. ಅದು ಒಂದು ಕಡೆ ಇರಲಿ. ಈಗ ರೈತರಿಗೆ ಅನಾನುಕೂಲವಾಗುವುದಿಲ್ಲವೆಂದು ಹೇಳಿದರಲ್ಲ ಇದು ಮೊದಲನೆಯ ಪಾಯಿಂಟ್. ರೈತರಿಗೆ ಅನಾನುಕೂಲವೆಂದರೆ ಯಾವ ರೀತಿ ಅನಾನುಕೂಲ. ಲೆವಿ ಪದ್ಧತಿಯಲ್ಲಿ ತಾವು ಹಿಂದೆ ಇದ್ದ ಪದ್ಧತಿಯಲ್ಲಿ ಸ್ವಾಮಿ ಇದಕ್ಕೆ ಸ್ವಲ್ಪ ಹಿನ್ನೆಲೆ ಹೇಳದೆ ಹೋದರೆ ತಪ್ಪಾಗುತ್ತದೆ. ಹಿಂದಿನ ಪದ್ಧತಿಯಲ್ಲಿ ಏನು ಡಿಫೆಕ್ಟ್ ಆಯಿತು ಎನ್ನುವುದನ್ನು ತಿಳಿಸುವುದಾದರೆ ಬಹಳ ಸಂತೋಷ. ದಯವಿಟ್ಟು ಸ್ವಲ್ಪ ಇದನ್ನು ಹೇಳುವುದಕ್ಕೆ ಅವಕಾಶ ಕೊಡಬೇಕು. ಹಿಂದೆ ಇದ್ದ ಪದ್ಧತಿಯಲ್ಲಿ first category – less than ½ acre but not more than one acre, second category – holding for ½ acre less than ½ acre, third category – holding one acre and more ಮೊದಲನೇ ಎರಡು ಕ್ಯಾಟಗರೀಸ್ less than ½ acre or more than ½ acre and less than one acre ಇದಕ್ಕೆ ಯಾರು ಲೆವಿ ಕೊಡಬೇಕಾಗಿರಲಿಲ್ಲ. ಹಿಂದೆ ಇದ್ದಂಥ ಲೆವಿ ಪದ್ಧತಿ ಪ್ರಕಾರ ಏನೂ ಕೊಡಬೇಕಾಗಿರಲಿಲ್ಲ. ಮೊದಲನೆ ಒಂದು ಎಕರೆಗೆ ಏನು ಕೊಡಬೇಕಾಗಿರಲಿಲ್ಲ. ೨ನೇ ಎಕರೆಗೆ ಅಂದರೆ ೨ ರಿಂದ ೫ ಎಕರೆವರೆಗೆ ಎರಡೂವರೆ ಕ್ವಿಂಟಾಲ್‌ನಂತೆ ಒಂದು ಎಕರೆಗೆ ೫ ಎಕರೆಯಲ್ಲಿ ಒಂದು ಎಕರೆ ಬಿಟ್ಟು ೪ ಎಕರೆಗೆ ಅಂದರೆ ೪ x ೨ = ೮ ನಾಲ್ಕರೆ ೨ ಅಂದರೆ ಹತ್ತು ಕ್ವಿಂಟಾಲ್ ಬತ್ತವನ್ನು ಕೊಡಬೇಕಾಗಿತ್ತು. ಅದು ಆದಮೇಲೆ for the next 11 acres, ೧೦ ಎಕರೆ ಎಂದು ಇಟ್ಟುಕೊಳ್ಳೋಣ 5 quintals per acre ೧೦ ಎಕರೆ ಇದ್ದು ಅದು ನೀರಾವರಿಯಾಗಿದ್ದರೆ ಇದು ಹಳೆಯ ಪದ್ಧತಿ ಇತ್ತು. ೧೨ ಎಕರೆ ಮೇಲ್ಪಟ್ಟು ಇರುವವರು ಬಹಳ ಕಡಿಮೆ. ಅದು ಲೆಕ್ಕವಿದೆ ಕೊಡುತ್ತಾರೆ. ಇದು ನಿರಾವರಿಯಾಗತಕ್ಕ ಪ್ರದೇಶದಲ್ಲಿ ೧೦ ಎಕರೆ ಮೇಲ್ಪಟ್ಟು ಇದ್ದರೆ ಏಳೂವರೆ ಕ್ವಿಂಟಾಲ್ ಲೆವಿ ಕೊಡುತ್ತಾರೆ. Total holdings – under ಘಟಪ್ರಭಾ, ಮಲಪ್ರಭಾ, ಕೃಷ್ಣರಾಜಸಾಗರ ಪ್ರಾಜೆಕ್ಟ್‌ಗಳಲ್ಲಿ ಮತ್ತು ಮಂಗಳ ಜಲಾಶಯ ಇಲ್ಲಿ ಈ ರೀತಿಯಾಗಿ ಲೆವಿ ಕೊಡಬೇಕೆಂದು ಇತ್ತು. ನಮ್ಮ ರಾಜ್ಯದಲ್ಲಿ ನೀರಾವರಿಯಾಗತಕ್ಕದ್ದು ಕ್ಯಾನಾಲ್ ಇರಿಗೇಷನ್ ಮತ್ತು ಮಳೆಯಿಂದ ಆಗತಕ್ಕದ್ದು ಮಲೆನಾಡು ಭಾಗದಲ್ಲಿ ಶಿವಮೊಗ್ಗ, ದಾರವಾಡದ ಕೆಲವು ತಾಲ್ಲೂಕುಗಳು, ಬೆಳಗಾಂ ಜಿಲ್ಲೆಯ ಕೆಲವು ತಾಲ್ಲೂಕುಗಳು, ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಮಳೆಯಿಂದ ಬತ್ತ ಬೆಳೆಯುವವರು ಲೆವಿಯನ್ನು ಕೊಡಲಿಕ್ಕೆ ಚೇಂಜ್ ಮಾಡಿದ್ದೇವೆ. ಖಾಯಂ ನೀರಾವರಿ ಇರುವವರಿಗೆ ಬೇರೆ, ಮಲೆನಾಡು ಭಾಗದಲ್ಲಿ ಮಳೆಯ ಆಶ್ರಯದಿಂದ ಬತ್ತ ಬೆಳೆಯತಕ್ಕವರಿಗೆ for the next one acre—

for holding one acra and more – no
for the holding of less than one acre – no
for the next one acre – no
for the next 5 acres upto 7 acres – One Quintal per acre

(Mr. Speaker in the Chair)

೨ ಎಕರೆ ಬಿಟ್ಟ ಹಾಗೆ ಆಯಿತು. ಮಲೆನಾಡು ಏರಿಯಾದಲ್ಲಿ ೧ ಎಕರೆಗೆ ೧ ಕ್ವಿಂಟಾಲ್ ಕೊಡಬೇಕೆಂದು ಮಾಡಿದ್ದೇವೆ. ೫ ಎಕರೆ ಇದ್ದು ಅವರಲ್ಲಿ ೨ ಎಕರೆ ಬಿಟ್ಟರೆ ಉಳಿದ ೩ ಎಕರೆಗೆ ಕೊಡಬೇಕೆಂದು ಮಾಡಿದ್ದೇವೆ. ೧೨ ಕ್ವಿಂಟಾಲ್ ಬೆಳೆದರೆ ಮಲೆನಾಡು ಏರಿಯಾಗಳಲ್ಲಿ ೮–೧೦ ಕ್ವಿಂಟಾಲ್ ಬೆಳೆಯುವುದೇ ಕಷ್ಟ, ಇದು ಕೂಡ ತೊಂದರೆಯಾಯಿತೆಂಬೂ ಅವರ ಭಾವನೆ. ಭವಿಷ್ಯ ತಿಳಿದುಕೊಂಡಿರುವವರು ನೀವು ನಮಗೇನು ಗೊತ್ತಿದೆ ಭವಿಷ್ಯ. ರೈತರಿಗೆ ಕಿರುಕುಳ ತಪ್ಪಿಸುವುದಕ್ಕೋಸ್ಕರ ನಾವು ಈ ರೀತಿ ಮಾಡಿದ್ದೋ ಅದನ್ನು ನೀವು ತಪ್ಪಾಗಿ ತಿಳಿದುಕೊಂಡು ನೀವು ಮಾಡಿರುವ ಪದ್ಧತಿಯ ಪ್ರಕಾರ ಮಳೆ ನೀರಿನಿಂದ ಬೆಳೆಯುವವನು ಒಂದೇ ನೀರಾವರಿ ಸೌಲಭ್ಯದಿಂದ ಬೆಳೆಯುವವನು ಒಂದೇ ಇಬ್ಬರನ್ನು ಒಂದೇ ತಕ್ಕಡಿಯಲ್ಲಿ ಹಾಕಿದ್ದೀರಿ. ರೈತರಿಂದ ತೆಗೆದುಕೊಳ್ಳುವುದಿಲ್ಲ ಮಿಲ್ಲಿನವರಿಂದ ತೆಗೆದುಕೊಳ್ಳುತ್ತೇವೆಂದು ಹೇಳಿದರು. ನಮ್ಮ ದೇಶದಲ್ಲಿ ಹಿಂದೆ ಬತ್ತವನ್ನು ಕುಟ್ಟಿಕೊಂಡು ಅಕ್ಕಿಯನ್ನು ಮಾಡತಕ್ಕ ಕಾಲವೊಂದಿತ್ತು, ರಾಗಿಯನ್ನು ಸಹ ಅವರೇ ಬೀಸಿಕೊಳ್ಳುತ್ತಿದ್ದರು. ಈಗ ರಾಗಿಕಲ್ಲು ಇಲ್ಲ,

ಬತ್ತದ ಒನಕೆಯೂ ಇಲ್ಲ ಬತ್ತ ಕುಟ್ಟೋ ಒಳ್ಳು ಇಲ್ಲ. ೫ ಎಚ್. ಪಿ. ಫ್ಲೋರ್ ಮಿಲ್‌ಗಳು ಹಳ್ಳಿಗಳಲ್ಲಿ ಆಗಿವೆ. ಸಣ್ಣಪುಟ್ಟ ಜನರು ಜೋಳ ಹಿಟ್ಟು ಮಾಡುವವರು, ೧೦ ಸೇರು ಬತ್ತವನ್ನು ಕೂಲಿ ಮಾಡಿ ತಂದರೆ ಅದನ್ನು ಹಲ್ಲರ್ ಮಿಲ್‌ಗಳಿಗೆ ತೆಗೆದುಕೊಂಡು ಹೋಗಿ ಅಕ್ಕಿ ಮಾಡಿಸುತ್ತಾರೆ. ಕೆ. ಆರ್. ನಗರದಲ್ಲಿ ಸುಮಾರು ೭೦ ರೈಸ್ ಮಿಲ್‌ಗಳಿವೆ. ಅದೇ ರೀತಿ ಟಿ. ನರಸೀಪುರ, ಭದ್ರಾವತಿ, ಶಿವಮೊಗ್ಗ, ಗಂಗಾವತಿ ಇಂತಹ ಕಡೆಗಳಲ್ಲಿ ಕೂಡ ಬೇಕಾದಷ್ಟು ಮಿಲ್‌ಗಳು ಬರುತ್ತಿವೆ. ಇದು ಎಲ್ಲರಿಗೂ ಗೊತ್ತಿರುವ ವಿಚಾರ. ಈಗ ಬತ್ತವನ್ನು ಜನ ಏತಕ್ಕೆ ವ್ಯಾಪಾರ ಮಾಡುತ್ತೀಲ್ಲ, ಅಕ್ಕಿಯನ್ನು ಹೊರಗಡೆ ಕಳುಹಿಸಬೇಕಾದರೆ ಎಲ್ಲಾ ಕೂಡ ಮಿಲ್‌ನ ಮುಖಾಂತರ ಹೋಗಬೇಕು. ಅದಕ್ಕೆ ಮಿಲ್‌ನವರ ಹತ್ತಿರ ವಸೂಲ್ಮಾಡುವುದಕ್ಕೆ ಹೊರಟರು. ಇವರು ಏನು ಹೇಳಿದರು ನಾವು ರೈತರಿಂದ ಬತ್ತ ತೆಗೆದುಕೊಳ್ಳುವುದಿಲ್ಲ ಮಿಲ್‌ನವರ ಹತ್ತಿರ ತೆಗೆದುಕೊಳ್ಳುತ್ತೇವೆಂದು ಹೇಳಿಕೊಂಡರು. ಬತ್ತವನ್ನು ರೈತರು ಬೆಳೆಯುತ್ತಾರೆ ಮಿಲ್‌ನವರು ಮಿಲ್ ಮಾಡುತ್ತಾನೆ. ಇವರು ಮಿಲ್‌ನ ಮುಖಾಂತರ ತೆಗೆದುಕೊಳ್ಳಬೇಕೆಂದು ಹೊರಟರು ಅವರಲ್ಲಿ ಎರಡು ವರ್ಗ ಇದೆ. ಒಂದು ವರ್ಗದವರು ಮಿಲ್‌ಗಳನ್ನು ಮುಚ್ಚಿದ್ದಾರೆ. ಇನ್ನೊಂದು ವರ್ಗ ನಾವು ಲೆವಿ ಕೊಡಬೇಕು ಜಾಸ್ತಿ ಕೊಡಿ ಎಂದು ರೈತರಿಂದ ದಃಡ್ಡು ಜಾಸ್ತಿ ವಸೂಲಿ ಮಾಡುತ್ತಿದ್ದಾರೆ. ದುಡ್ಡು ಜಾಸ್ತಿ ಕೊಡದಿದ್ದರೆ ೫೦ ಭಾಗ ಲೆವಿ ಕೊಡಿ ಎಂದು ವಸೂಲಿ ಮಾಡುತ್ತಾರೆ. ಮಿಲ್‌ನವರಿಂದಲೂ ಇವರು ವಸೂಲಿ ಮಾಡುವುದಕ್ಕೆ ಸಾಧ್ಯವಿಲ್ಲ. ಹಿಂದಿನಿಂದ ಬೆಳೆದುಕೊಂಡು ಬಂದಿರುವ ಚಾಳಿ ಕೆಲವರಲ್ಲಿ ಇದೆ. ಕೆಲವು ಧನಗಳು ಹಿಂಡಿನಿಂದ ತಪ್ಪಿಸಿಕೊಂಡು ಹೋಗಿ ಬೆಳೆ ಮೇಯ್ದು ಪುನಃ ಬಂದು ಗುಂಪಿನಲ್ಲಿ ಸೇರಿಕೊಂಡು ಬಿಡುತ್ತವೆ. ಆ ರೀತಿ ಕೆಲವು ಮಿಲ್ಲಿನ ಮಾಲೀಕರು ನಿಮ್ಮ ಕಾನೂನನ್ನು ಯಾವ ರೀತಿಯಲ್ಲಿ ಮೇಯಬೇಕೋ ಅವರಿಗೆ ಗೊತ್ತಿದೆ ಮಿಲ್ಲಿನಲ್ಲಿ ಎಷ್ಟು ಕ್ವಿಂಟಾಲ್ ಬತ್ತವನ್ನು ಅಕ್ಕಿ ಮಾಡಲಾಗಿದೆ ಎನ್ನುವುದನ್ನು ಗೊತ್ತಾಗದ ಹಾಗೆ, ಮೀಟರ್‌ಗಳಿಗೆ ಮ್ಯಾಗ್ನೇಟ್ ಇಟ್ಟುಕೊಂಡು ಅವರು ಏನು ಮಾಡಬೇಕೋ ಆ ರೀತಿ ಮಾಡುವುದನ್ನು ಅವರು ಕಂಡುಕೊಂಡಿದ್ದಾರೆ.

ಶ್ರೀ ಜೆ. ಎಚ್. ಪಟೇಲ್.—ಹಿಂಡಿನಿಂದ ತಪ್ಪಿಸಿಕೊಂಡು ಮೇಯ್ದ ದನ, ಕಟ್ಟಿದ ದನಗಳು ನಿಂತ ಹಾಗೆ ನಿಂತಿರುತ್ತವೆ.

ಶ್ರೀ ಡಿ. ದೇವರಾಜ ಅರಸ್.— ಮಿಲ್‌ನವರು ಕೆಲವರು ಮಾತ್ರ ನಿಮಗೇಷ್ಟು ಕೊಡಬೇಕೋ ಅಷ್ಟನ್ನು ಕೊಟ್ಟುಬಿಡುತ್ತಾರೆ. ಸರ್ಕಾರ ಏನು ಮಾಡುತ್ತಿದೆ ಹೆಚ್ಚಿಗೆ ಬತ್ತವನ್ನು ಮಿಲ್ ಮಾಡಿಸತಕ್ಕವರು ಅನ್‌ಅಫೀಸಿಯಲ್ಲಾಗಿ ನಿಮಗೆ ಗೊತ್ತಿದೆ ಎಲ್ಲಿ ಎಷ್ಟೆಷ್ಟು ಕೊಡಬೇಕೆಂದು ಹೇಳಿದ್ದೀರಿ. ಅವರು ಎಷ್ಟು ಕೊಡುತ್ತಾರೆ, ನಿಮ್ಮ ವ್ಯವಹಾರ ನೀವು ಎಷ್ಟಾದರೂ ತೆಗೆದುಕೊಳ್ಳಿ. ಸರ್ಕಾರಿ ಆರ್ಡರಿನಲ್ಲಿ ಒಂದು ಕ್ವಿಂಟಾಲ್ ಬತ್ತ ಮಿಲ್ ಮಾಡಬೇಕಾದರೆ ೨ ರೂಪಾಯಿ ಚಾರ್ಜ್ ಎಂದು ತಾವು ಫಿಕ್ಸ್ ಮಾಡಿರುವ ಪ್ರಕಾರ ನವೆಂಬರ್ ೧೯೮೧ನೇ ಇಸವಿಯಲ್ಲಿ Page 4, Schedule of Raw rice—cost of Paddy Fine variety Rs. 120, Medium Rs. 118/-, Coarse Rs. 115/- and Hulling charges Rs. 2/- per qunital.

ಇವೊತ್ತು ಯಾವ ಮಿಲ್‌ಗಳಲ್ಲಿಯೂ ೨ ರೂಪಾಯಿಗಳಿಗೆ ಮಿಲ್ ಮಾಡುತ್ತಿಲ್ಲ. ೧೫ ರಿಂದ ೧೮ ರೂಪಾಯಿಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಇರತಕ್ಕಂಥ ಶರಸ್ತ್ರವಾಂಶವನ್ನು ನಾನು ಸಭೆಯ ಗಮನಕ್ಕೆ ತರುತ್ತಿದ್ದೇನೆ. ಒಂದೂವರೆ ರೂಪಾಯಿ ಇದ್ದುದನ್ನು ಇತ್ತೀಚಿಗೆ ಎರಡು ರೂ. ಗಳಿಗೆ ಸರ್ಕಾರ ಹೆಚ್ಚು ಮಾಡಿತು. ಆದರೆ ಈ ದರಕ್ಕೆ ಯಾರೂ ಮಿಲ್ ಮಾಡಿ ಕೊಡುತ್ತಿಲ್ಲ. ಎಲ್ಲೋ ಕೆಲವು ಕಡೆಗಳಲ್ಲಿ ದಾಕ್ಷಿಣ್ಯಕ್ಕೆ ೮–೧೦ ರೂಪಾಯಿಗಳಿಗೆ ಮಾಡಿಕೊಡುತ್ತಿರಬಹುದು. ಆದರೆ ಮಿಕ್ಕಂತೆ ೧೫ ರಿಂದ ೧೮ ರೂ. ಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಜಾಸ್ತಿ ಏನಾದರು ಮಾತನಾಡಿದರೆ ತೀಟೆ ಇದ್ದರೆ ಇಷ್ಟು ಕೊಟ್ಟು ಮಿಲ್ ಮಾಡಿಸಿಕೋ, ಇಲ್ಲದಿದ್ದರೆ ಹೋಗುಎಂದು ಹೇಳುತ್ತಿದ್ದಾರೆ. ಯಾರಾದರು ಮಿಲ್‌ಗೆ ಭತ್ತ ತಂದರೆ, ಮಿಲ್‌ನವರು ಸರ್ಕಾರದ ಆಜ್ಞೆ ಪ್ರಕಾರ ೫೦ ಪರ್ಸೆಂಟ್ ಲೆವಿಕೊಡು ಇಲ್ಲದಿದ್ದರೆ ೧೫ರೂ. ಕೊಟ್ಟು ಮಿಲ್ ಮಾಡಿಸಿಕೊಂಡು ಹೋಗು ಎಂದು ಹೇಳುತ್ತಿದ್ದಾರೆ. ಒಟ್ಟಿನಲ್ಲಿ ರೈತರು ಒಂದು ಕಡೆ ಲೆವಿ ಕೊಡಬೇಕು ಮತ್ತೊಂದು ಕಡೆ ಹೆಚ್ಚಿನ ದರ ಕೊಟ್ಟು ಮಿಲ್ ಮಾಡಿಸಬೇಕಾಗಿದೆ.

ಇನ್ನು ರೈತರು ಭತ್ತವನ್ನು ಮಿಲ್ ಮಾಡಿಸಲು ಪರ್ಮಿಟ್‌ನ್ನು ಅವರ ಮನೆ ಬಾಗಿಲಿಗೆ ತೆಗೆದು ಕೊಂಡು ಹೋಗಿ ಕೊಡಲಾಗುತ್ತದೆಂದು ಸರ್ಕಾರದವರು ಹೇಳಿದ್ದಾರೆ. ಈ ರೀತಿ ಪರ್ಮಿಟ್ ಪಡೆದು ಒಬ್ಬ ರೈತ ತಿಂಗಳಿಗೆ ೩ ಕ್ವಿಂಟಾಲ್ ಭತ್ತವನ್ನು ಸ್ವಂತ ಉಪಯೋಗಕ್ಕೆ ಅಕ್ಕಿ ಮಾಡಿಸಿಕೊಳ್ಳಬಹುದು. ಈ ಲೆಕ್ಕದಲ್ಲಿ ಒಂದು ವರ್ಷಕ್ಕೆ ೩೬ ಕ್ವಿಂಟಾಲ್ ಆಗುತ್ತದೆ. ಒಂದು ರೀತಿಯಲ್ಲಿ ಇದು ಸರಿ ಇರಬಹುದು ಆದರೆ ಈ ೩ ಕ್ವಿಂಟಾಲ್ ಭತ್ತವನ್ನು ಮಿಲ್ ಮಾಡಿಸಲು ಯಾರಿಂದ ಲೈಸನ್ ಪಡೆಯಬೇಕು ? ರೈತನ ಮನೆ ಬಾಗಿಲಿಗೆ ಲೈಸನ್ಸ್‌ನ್ನು ತೆಗೆದುಕೊಂಡು ಹೋಗಿ ಕೊಡುವಂತೆ ವಿಲೇಜ್ ಅಕೌಂಟೆಂಟ್‌ಗೆ ಆಜ್ಞೆ ಮಾಡಿದ್ದೇವೆಂದು ಮಾನ್ಯ ಆಹಾರ ಖಾತೆಯ ಮಂತ್ರಿಗಳು ಹೇಳಿದ್ದಾರೆ ಈ ವಿಚಾರ ತಾ|| ೨೬-೧೧-೧೯೮೧ ರಂದು ಡೆಕ್ಕನ್-ಹೆರಾಲ್ಡ್ ಪತ್ರಿಕೆಯಲ್ಲಿ ಬಂದಿದೆ. "Levy permits for Ryots at doorsteps" ಎನ್ನುವ ಶೀರ್ಷಿಕೆಯಲ್ಲಿ ಬಂದಿದೆ. ಇದು ನೋಡಲು ಎಷ್ಟು ಆಕರ್ಷಣೀಯವಾಗಿದೆ. ಇದರ ಪ್ರಕಾರ ಎಷ್ಟು ಜನ ರೈತರ ಮನೆ ಬಾಗಿಲಿಗೆ ಪರ್ಮಿಟ್ ಕಳಿಸಿಕೊಟ್ಟಿದ್ದೀರಿ ? ಮನೆ ಬಾಗಿಲಿಗೆ ಬೇಡ, ಎಷ್ಟು ಜನ ರೈತರ ಕೈಗೆ ಪರ್ಮಿಟ್ ಕೊಡಿಸಿದ್ದೀರಿ ? ಈ ವಿಧಾನದಿಂದ ಎಷ್ಟೊಂದು ಅನಾಹುತವಾಗಿದೆ ಎಂಬುದು ತಮಗೇನಾದರು ಗೊತ್ತಿದೆಯೇ ? ಇವರು ಹೇಳಿರುವ ಪ್ರಕಾರ ಪರ್ಮಿಟ್‌ನ್ನು ವಿಲೇಜ್ ಆಕೌಂಟ್‌ಂಟೆ ಕೊಡುತ್ತಿಲ್ಲ. ಪರ್ಮಿಟ್ ಬೇಕೆಂದು ಯಾರಾದರು ಅರ್ಜಿ ಹಾಕಿಕೊಂಡರೆ, ಅದನ್ನು ವಿಲೇಜ್ ಅಕೌಂಟೆಂಟ್ ತಹಶೀಲ್‌ದಾರರಿಗೆ ಕಳುಹಿಸಿ ಕೊಡುತ್ತಾನೆ. ನಂತರ ತಹಶೀಲ್‌ದಾರರ ಕಛೇರಿಯಲ್ಲಿ ಲೈಸನ್ಸ್ ಪಡೆಯಬೇಕಾದರೆ ಶೇಕ್‌ದಾರರು ಮೊದಲ್ಗೊಂಡು ಸಂಬಂಧಪಟ್ಟ ಎಲ್ಲರಿಗೂ ಶಾಕಾಯುಲವಣಾಯ ಬೀಳಬೇಕು. ಏನಾದರು ಕಾಂಗ್ರೆಸ್ (ಐ) ಕಡೆಯವರಾದರೆ ಇಲ್ಲವೇ ಏನಾದರು ಇನ್‌ಫ್ಲೂಯನ್ಸ್ ಇದ್ದರೆ ಇಲ್ಲವೇ ಜಬರ್‌ದಸ್ತಿ ಮಾಡಿದರೆ ಪರ್ಮಿಟ್ ಬೇಗ ಸಿಗಬಹುದು ಅಲ್ಲಿನ ಅಧಿಕಾರಿಗಳ ಮೇಲೆ ಪ್ರಭಾವ ಬೀರುವಂತಹ ಶಕ್ತಿ ಇದ್ದರೆ. ಹಣದ ಬಲ ಏನಾದರು ಇದ್ದರೆ, ರಾಜಕೀಯ ಸಂಬಂಧ ಏನಾದರು ಇದ್ದರೆ ೩-೪ ದಿವಸಗಳಲ್ಲಿಯೇ ಪರ್ಮಿಟ್ ಸಿಗಬಹುದು ಇಲ್ಲದಿದ್ದರೆ ಬಹಳ ದಿವಸಗಳ ಕಾಲ ಕಾಯಬೇಕಾಗುತ್ತದೆ. ಒಟ್ಟಿನಲ್ಲಿ ಇವರ ಹೇಳಿಕೆ ಪ್ರಕಾರ ರೈತರ ಮನೆ ಬಾಗಿಲಿಗೆ ಪರ್ಮಿಟ್ ಹೋಗುತ್ತಿಲ್ಲ. ಮಾನ್ಯ ಮಂತ್ರಿಗಳು ಹೇಳಿರುವ ಪ್ರಕಾರ ನಡೆಯುತ್ತಿಲ್ಲ. ಲಂಚರುಷವತ್ತು ಇಲ್ಲದೆ ಯಾವ ಕೆಲಸವೂ ಆಗುತ್ತಿಲ್ಲ. ನನಗೆ ತಿಳಿದು ಬಂದಿರುವ ಪ್ರಕಾರ ಲೆವಿ ವಿಚಾರದಲ್ಲಿ ಸರ್ಕಾರದ ಒಂದು ಗುರಿ ಇನ್ನೂ ಮುಟ್ಟದಿರುವ ಕಾರಣದಿಂದ ತಹಶೀಲ್‌ದಾರರು ಲೆವಿ ಕೊಡಬೇಕೆಂದು ಪರ್ಮಿಟ್ ಕೊಡುವುದಕ್ಕೆ ಮುಂಚೆ ಕೇಳುತ್ತಾರೆ. ಅನಂತರ ರೈತರು ಮಿಲ್ ಮಾಡಿಸಲು ಹೋದಾಗ ಕೂಡ ಲೆವಿ ಕೊಡುವಂತೆ ಮಿಲ್‌ನವರು ಮನವಿ ಮಾಡಿಕೊಂಡಿರುವುದು ಉಂಟು. ಹೀಗೆ ಎರಡೂ ಕಡೆಗಳಲ್ಲಿ ಲೆವಿ ಕೊಡಬೇಕಾಗಿ ಬಂದು ರೈತರು ಒದ್ದಾಡುತ್ತಿದ್ದಾರೆ. ಇವರೇ ಮಾಡಿರುವ ಆರ್ಡರ್ ಪ್ರಕಾರ ಮಿಲ್‌ನ್‌ವರು ೫೦ ಪರ್ಸೆಂಟ್ ಲೆವಿಕೊಡುವುದಕ್ಕೆ ಸಾಧ್ಯವಾಗಿಲ್ಲ ಇದೇ ಕಾರಣದಿಂದ ಸರ್ಕಾರದಿಂದ ಹೊರಟಿರುವ ಆರ್ಡರ್‌ನ್ನು ಬಹಿರಂಗವಾಗಿ ಬದಲಾವಣೆ ಮಾಡದಿದ್ದರೂ ಸಹ ಬಾಯಿ ಮಾತಿನಲ್ಲಿ ಇಷ್ಟಾದರೂ ಲೆವಿ ಕೊಡಿ ಎಂದು ಹೇಳಿದ್ದಾರೆ. ಒಟ್ಟಿನಲ್ಲಿ ಇವರ ಒಂದು ಆರ್ಡರ್ ಪ್ರಕಾರ ರೈತರಿಗೆ ಅನಾನುಕೂಲವಾಗಿದೆ.

ಇನ್ನು ನಮ್ಮ ರಾಜ್ಯದಲ್ಲಿ ೧೯೭೦-೭೧ರ ಸೆನ್‌ಸಸ್ ಪ್ರಕಾರ Total operational agricultural holdings 35.51 lakhs acres ಇದೆ. ನಾನು ಲೈಬ್ರರಿಯಲ್ಲಿ ಕೇಳಿದಾಗ ಇತ್ತೀಚಿನ ವಿವರಗಳು ಸಿಗಲಿಲ್ಲ. ೧೯೭೦-೭೧ರ ಸೆನ್‌ಸಸ್ ಪ್ರಕಾರ ಅರ್ಧ ಎಕರೆಯಿಂದ ಹಿಡಿದು ೫ ಎಕರೆಯವರೆಗೆ ಇರುವಂತಹ ನೀರಾವರಿಯ ಹಿಡುವಳಿ ಲೆಕ್ಕದ ಪ್ರಕಾರ ೩೬ ಲಕ್ಷ ಏರೆ ಇದೆ. ೧೯೮೧ನೇ ಇಸವಿವರೆಗೆ ಇನ್ನೂ ೫ ಲಕ್ಷ ಎಕರೆ ಜಮೀನನ್ನು ಇದಕ್ಕೆ ಸೇರಿಸಿದರೂ ಸಹ ಇದು ಸುಮಾರು ೪೦ ಲಕ್ಷ ಎಕರೆ ಆಗಬಹುದು. ನೀರಾವರಿ ಮತ್ತು ನೀರಾವರಿ ಆಗದ ಜಮೀನಿನ ಲೆಕ್ಕ ಒಟ್ಟು ತೆಗೆದುಕೊಂಡರೆ ೨ ಕೋಟಿ ೯೦ ಲಕ್ಷ ಎಕರೆಯಾಗುತ್ತದೆ, ಹೆಕ್ಟೇರ್ ಲೆಕ್ಕದಲ್ಲಿ ಇದು ೧೧೩.೬೭ ಲಕ್ಷ ಆಗುತ್ತದೆ. ಸರ್ಕಾರದವರು ಅಧಿಕೃತವಾಗಿ ಈ ಬಗ್ಗೆ ಇತ್ತೀಚಿನ ವಿವರಗಳನ್ನು ಒದಗಿಸುವವರೆಗೆ ನಾನು ೧೯೭೦-೭೧ರ ಸೆನ್‌ಸಸ್‌ನ್ನೇ ಆಧಾರವಾಗಿಟ್ಟುಕೊಂಡು ಹೇಳಬೇಕಾಗುತ್ತದೆ. ಆದ್ದರಿಂದ ಸರಿಯಾದ ಅಂಕಿ ಅಂಶಗಳನ್ನು ಕೊಟ್ಟರೆ ನನಗೆ ಸಂತೋಷ. ಈ ೨ ಕೋಟಿ ೯೦ ಲಕ್ಷ ಎಕರೆಗಳ ಪೈಕಿ ಮೇಜರ್, ಮೀಡಿಯಂ ಹಾಗೂ ಮೈನರ್ ಟ್ಯಾಂಕ್‌ಗಳ ಮೂಲಕ ನೀರಾವರಿ ಆಗತಕ್ಕಂಥ ಜಮೀನು ೬೦ ಲಕ್ಷ ಎಕರೆ ಇರಬಹುದು ಇದರಲ್ಲಿ ಸ್ವಲ್ಪ ಭಾಗದ ಜಮೀನಿನಲ್ಲಿ ಕಬ್ಬನ್ನು ಬೆಳೆಯುವವರೂ ಸಹ ಇದ್ದಾರೆ.

೫-೨೦ ಪಿ. ಎಂ.

ನಾನು ಭತ್ತಕ್ಕೆ ಸೀಮಿತವಾಗಿರತಕ್ಕಂಥಾ ೩೫-೩೬ ಲಕ್ಷ ಎಕರೆ ಏನು ಇದೆ ಆ ವಿಚಾರದಲ್ಲಿ ಮಾತನಾಡುತ್ತೇನೆ. ಇದರಿಂದ ಯಾವ ರೈತರಿಗೆ ಅನುಕೂಲವಾಗುತ್ತದೆ, ಯಾವ ರೈತರಿಗೆ ಅನಾನುಕೂಲವಾಗುತ್ತದೆ ಅನ್ನುವುದನ್ನು ಸರ್ಕಾರ ಇನ್ನೂ ಲಾಲಿಸಿಲ್ಲ, ತಾವು ಇದನ್ನು ಬಹಳ ಆಳವಾಗಿ ಅಭ್ಯಾಸ ಮಾಡಿದರೆ ಉತ್ತಮ ಎಂದು ನನಗೆ ಅನಿಸುತ್ತದೆ. ಬಹುಶಃ ತಾವು ಇದನ್ನು ಆಳವಾಗಿ ಅಭ್ಯಾಸ ಮಾಡಿರಲಿಕ್ಕಿಲ್ಲ. ಮಾಡಿದ್ದರೆ ಉತ್ತಮ ಒಂದುವೇಳೆ ತಾವು ಇದನ್ನು ಆಳವಾಗಿ ಅಭ್ಯಾಸ ಮಾಡದೇ ಹೋಗಿದ್ದರೆ ದಯವಿಟ್ಟು ನಾನು ಹೇಳುವುದನ್ನಾದರೂ ಸ್ವಲ್ಪ ಲಾಲಿಸಿ ಕೇಳಿ. Statistical Outlay of Karnataka 1977-78 ಏನು ಇದೆ ಇದರಲ್ಲಿ Area under Principle crop 1970-74, 77-78 ಅಂತ ಏನ್ನು ಇದೆ ಅದರಲ್ಲಿ ಫುಡಗ್ರೈನ್ಸ್ ಅಂತ ಕೊಟ್ಟು. ಅದರಲ್ಲಿ ರೈಸ್ ಅನ್ನುವ ಒಂದು ಕಲಂ ಕೊಟ್ಟಿದ್ದಾರೆ. ಅದರಲ್ಲಿ 1096 followed hy three zerdoes ಅಂದರೆ that is 10,96,000 Hectares under Rice cultivation ಆಗುತ್ತದೆ. ಅದನ್ನು if you convert this in to acres, it will come to 20 to 35 lakhs Acres under rice cultivation, ಇಷ್ಟೂ ಕೂಡ ರೈಸ್ ಬೆಳೆಯತಕ್ಕಂಥಾ ಪ್ರದೇಶ. ಇದರಲ್ಲಿ ಭೂಮಿ ಯಾರ್ಯಾರಿಗೆ ಎಷ್ಟೆಷ್ಟು ಇರುತ್ತದೆ ಅನ್ನುವುದನ್ನು ತಾವು ಲೆಕ್ಕ ಹಾಕಿ ನೋಡಬೇಕು. ಇದರಲ್ಲಿ ೪ ಹೆಕ್ಟಾರ್ಸ್‌ಗೆ ಕಮ್ಮಿ ಇರತಕ್ಕಂಥಾವರೂ ಇದ್ದಾರೆ, ಅಂದರೆ ನಿಮ್ಮ ಲೆಕ್ಕಾಚಾರದ ಪ್ರಕಾರ ೪ ಹೆಕ್ಟಾರ್ ಅಂದರೆ ೧೦ ಎಕರೆಯಾಗಬಹುದು. ಇದರಲ್ಲಿ ಅರ್ಧ ಎಕರೆಯವರೂ ಸೇರುತ್ತಾರೆ. ಆದುದರಿಂದ ೧ ಎಕರೆ, ೨ ಎಕರೆ, ೩ ಎಕರೆ, ೪ ಎಕರೆ ಹೀಗೆ ೧೦ ಎಕರೆಯವರೆಗೂ ತೆಗೆದುಕೊಂಡರೆ ಅಂಥಾವರು ೨೮ ಲಕ್ಷ ಹೋಲ್ಡಿಂಗ್ಸ್‌ನವರೆಗೆ ಬರಬಹುದು. ಇತ್ತೀಚೆಗಿ ಲ್ಯಾಂಡ್ ರೀಫಾರಂಸ್ ಪ್ರಕಾರ ಇನ್ನೂ ಸ್ವಲ್ಪ ಹೆಚ್ಚಿರಬಹುದು, ಅಂದರೆ ೩೫ ಲಕ್ಷ ಹೋಲ್ಡಿಂಗ್ಸ್ ನವರೆಗೂ ಬರಬಹುದು ಇದರಲ್ಲಿ ಡ್ರೈ, ವೆಟ್ ಎಲ್ಲಾ ಸೇರಿರುತ್ತದೆ. ಸಣ್ಣವರು ದೊಡ್ಡವರು ಇವರೆಲ್ಲರನ್ನೂ ಲೆಕ್ಕಕ್ಕೆ ತೆಗೆದುಕೊಂಡರೆ ಟೋಟಲ್ ಹೋಲ್ಡಿಂಗ್ಸ್ ೭೦ ಲಕ್ಷಕ್ಕೆ ಬರುತ್ತದೆ. ತಮಗೆ ಬಿಡಿಸಿ ಹೇಳಬೇಕಾದರೆ ೧೦ ಎಕರೆ ಮೇಲ್ಪಟ್ಟು ಇರುವವರು ೨೫ ರಿಂದ ೩೦ ಲಕ್ಷ ಇರುತ್ತಾರೆ, ನಾನು ಮೊದಲೇ ಹೇಳಿದ ಹಾಗೆ ಸ್ಮಾಲ್ ಹೋಲ್ಡಿಂಗ್ಸ್‌ನವರು ೨೮ ಲಕ್ಷ ಆಗುತ್ತಾರೆ. ಅದರಲ್ಲಿ ಸಣ್ಣಪುಟ್ಟ ಕ್ಯಾಟಗರಿಗೇ ಸೇರಿದವರೂ ಇದ್ದಾರೆ. ಇದಲ್ಲದೆ ಇನ್ನೂ ೮-೧೦ ಲಕ್ಷ ಹೋಲ್ಡರ್ಸ್ ಮೇಜರ್ ಕಲ್ಟಿವೇಷನ್ ಕೆಳಗೆ ಇದ್ದಾರೆ. ತಮ್ಮ ಗಮನಕ್ಕೆ ತರಬೇಕಾದರೆ ಧಾರವಾಡ, ಗಂಗಾವತಿ, ರಾಯಚೂರು ಈ ಪ್ರದೇಶದಲ್ಲಿ ದೊಡ್ಡ ದೊಡ್ಡ ಜಮೀನ್ದಾರರು ಏನು ಇದ್ದರು ಅವರೂ ಸಹ ಈಗಿನ ಲ್ಯಾಂಡ್ ರೀಫಾರಂಸ್ ಆಕ್ಟ್ ಪ್ರಕಾರ ೧೦ ಎಕರೆ ಮೇಲ್ಪಟ್ಟು ಇಟ್ಟುಕೊಳ್ಳುವ ಹಾಗಿಲ್ಲ, ಆದರೂ ಕೂಡ ಅವರು ಅದಕ್ಕಿಂತ ಹೆಚ್ಚಿಗೆ ಇದ್ದರೆ ಬೇರೆ ಬೇರೆಯವರ ಹೆಸರಿನಲ್ಲಿ ಇಟ್ಟುಕೊಂಡಿದ್ದಾರೋ ಎನ್ನುವುದು ನನಗೆ ಗೊತ್ತಿಲ್ಲ ಆದರೆ Majority of these peorle who grow Paddy have come under middle level and lower level farmers. ನಿಮಗೆ ಪಾಯಿಂಟ್ ಔಟ್ ಮಾಡುವುದಕ್ಕೆ ನಾನು ಈ ಅಂಕಿಅಂಶ ತಮ್ಮ ಮುಂದೆ ಹೇಳುತ್ತಿದ್ದೇನೆ. Majority of the people who are small and marginal farmers. ಮಾನ್ಯ ಆಹಾರ ಮಂತ್ರಿಗಳು ಈ ವಿಷಯವನ್ನು ಚೆನ್ನಾಗಿ ಅರ್ಥ ಮಾಡಿಕೊಂಡರೆ ಸಾಕು. ನಾನು ಹೇಳುವುದನ್ನು ಹೇಳುತ್ತೇನೆ, ನೀವು ಕೇಳಿದರೆ ಕೇಳಬಹುದು ಅದು ನಿಮಗೆ ಸಂಬಂಧಪಟ್ಟದ್ದು. ನೀವು ಇದನ್ನು ಅರ್ಥಮಾಡಿಕೊಂಡು ನಿಮ್ಮ ಮನಸ್ಸನ್ನು ಬದಲಾಯಿಸದೇ ಹೋದರೆ ಅದರ ಕಷ್ಟವನ್ನು ರೈತ ಅನುಭವಿಸುತ್ತಾನೆ. ನಂತರ ನೀವು ಯಾವುದನ್ನು ಅನುಭವಿಸಬೇಕೋ ಅದನ್ನು ಅನುಭವಿಸುತ್ತೀರಿ. ತಮಗೆ ಹೇಳಬೇಕಾದರೆ ನಮ್ಮಲ್ಲಿ ಬಹುತೇಕ ಮಂದಿ ಸರ್‌ಪ್ಲಸ್ ಹೋಲ್ಡರ್ಸ್ ಇಲ್ಲ. ಆಲ್ ಇಂಡಿಯಾ ಫಿಗರ್ಸ್ ತೆಗೆದುಕೊಂಡರೆ ನಮ್ಮ ಕರ್ನಾಟಕದಲ್ಲಿ ೧೦-೧೫ ಪರ್ಸೆಂಟ್ ಸಿಗಬಹುದು. Among the farmers who have lands under irrigation ನಲ್ಲಿ ೧೫ ಭಾಗ ಇಟ್ಟುಕೊಳ್ಳೋಣ ನಾನು ಈ ಫಿಗರ್ಸ್‌ನ್ನು ಸ್ವಲ್ಪ ಲಿಬರಲ್ ಆಗಿಯೇ ಹೇಳುತ್ತಿದ್ದೇನೆ. ಇದರಲ್ಲಿ ಹೆಚ್ಚಾಗಿ ಭತ್ತ ಬೆಳೆಯುವವರೇ ಜಾಸ್ತಿ. ಈ ಮಾರ್ಜಿನಲ್ ಫಾರ್ಮರ್ಸ್ ಏನು ಇದ್ದಾರೆ ಅವರು ತಮ್ಮ ಮನೆಗೆ ಊಟಕ್ಕೋಸ್ಕರವಾಗಿ ೩-೪ ಕ್ವಿಂಟಾಲ್ ಭತ್ತವನ್ನು ತೆಗೆದುಕೊಂಡು ಹೋಗುವುದಕ್ಕೆ ಹೆಚ್ಚಿಗೆ ಭತ್ತವನ್ನು ಬೆಳೆಯುತ್ತಾರೆ ಆದರಲ್ಲಿ ೩ ತಿಂಗಳು ಬೆಳೆಯುವ ಭತ್ತ, ೬ ತಿಂಗಳು ಬೆಳೆಯುವ ಭತ್ತ ಅಂತ ಇದೆ. ಅದನ್ನು ಯಾರು ಬೇಕಾದರೂ ಬೆಳೆಯಬಹುದು; ಈಪೊತ್ತಿನ

ದಿವಸ ತಾವು ರೈತರಿಂದ ಲೆವಿ ರೂಪವಾಗಿ ೧-೧½ ಲಕ್ಷ ಕ್ವಿಂಟಾಲ್ ಅಷ್ಟು ಭತ್ತವನ್ನು ಏನು ವಸೂಲ್ಮಾಡಿದ್ದೀರಿ, ಯಾರಿಂದ ವಸೂಲ್ಮಾಡಿದ್ದೀರಿ ಎಂದರೆ ಸಣ್ಣ ಪುಟ್ಟ ರೈತರಿಂದ ಮಾತ್ರ ವಸೂಲ್ಮಾಡಿದ್ದಾರೇ ವಿನಾ ದೊಡ್ಡ ದೊಡ್ಡ ರೈತರಿಂದ ವಸೂಲ್ಮಾಡಿಲ್ಲ, ಅವರು ಕೊಟ್ಟೂ ಇಲ್ಲ. ಸರಪ್ಲಸ್ ಹೋಲ್ಡರ್ಸ್ ಫಾರ್ಮರ್ಸ್ ಏನು ಇದ್ದಾರೆ ೧೦೦-೧೫೦-೨೦೦ ಕ್ವಿಂಟಾಲ್ ಭತ್ತ ಬೆಳೆದಿರ ತಕ್ಕಂಥಾ ರೈತರು ಏನು ಇದ್ದಾರೆ ಅವರು ತಮಗೆ ಮೂರು ಕಾಳೂ ಭತ್ತವನ್ನು ಕೊಟ್ಟಿಲ್ಲ. ಬೇಕಾದರೆ ನಾನು ಅದನ್ನು ಪ್ರೂ ಮಾಡಿ ತೋರಿಸುತ್ತೇನೆ. ಅಲ್ಲದೆ ತಾವು ಈ ಬಗ್ಗೆ ಏನೂ ಸಾಧಿಸಿಲ್ಲ ಎಂದು ಹೇಳುತ್ತೇನೆ. ನೀವು ಅದರ ಬಗ್ಗೆ ಏನು ಸಾಧಿಸಿದ್ದೀರಿ ಅನ್ನುವುದನ್ನು ನನಗೆ ತೋರಿಸಿ ಬಿಟ್ಟರೆ ನಾನು ನಿಮಗೆ ಶರಣಾಗುತ್ತೇನೆ.

SRI Y. RAMAKRISHNA.—Is it scientific analysis ?

SRI D. DEVRAJ URS.—Mine is scientific. You prove that it is not scientific. If you have statistics, I am going to assert that it is scientific. I know the village condition. ಸರಪ್ಲಸ್ ಹೋಲ್ಡರ್ಸ್ ಫಾರ್ಮರ್ ಏನು ಇದ್ದಾರೆ ಅವರೂ ಯಾರೂ ನಿಮಗೆ ಲೆವಿ ಕೊಡುವುದಿಲ್ಲ. ಅವರೇನು ಹುಚ್ಚರೇನು ? ಏತಕೆ ಅವರು ಕೊಡುವುದಿಲ್ಲ ಎಂದರೆ ಇನ್ನು ೩ ತಿಂಗಳು ಕಾದರೆ ಅದಕ್ಕೆ ರೇಟು ೨೦೦ ರೂಪಾಯಿ ಸಿಕ್ಕುತ್ತದೆ. ಅವರು ೨೦೦ ರೂಪಾಯಿಗೆ ಮಾರಿಕೊಳ್ಳುತ್ತಾರೆ? ಆವಾಗ ಇದರಿಂದ ಪರಿಣಾಮ ಏನಾಗುತ್ತದೆ ಯೋಚನೆ ಮಾಡಿ. ನಾನು ಈ ಮಾತನ್ನು ಇನ್‌ಡೈರೆಕ್ಟ್ ಹೇಳುತ್ತಿದ್ದೇನೆ ಪರಿಸ್ಥಿತಿ ಏನಾಗಬಹುದು ಎಂದು. ಅವರು ತಮ್ಮ ಇನ್ನೋಸೆಂಟಿ ತಿಳಿದುಕೊಂಡಿದ್ದಾರೆ. ಅವರು ಏನು ಹೇಳುತ್ತಿದ್ದಾರೆ ಎಂದರೆ ಅವರ ಟಾರ್ಗೆಟ್ ರೀಚ್ ಆದಮೇಲೆ ಇದನ್ನು ಬಿಟ್ಟು ಬಿಡುತ್ತಾರೆ, ಅಂದರೆ ಲೆವಿ ತೆಗೆದು ಬಿಡುತ್ತಾರೆ, ಆದಾಗ ಹೆಚ್ಚು ಬೆಲೆ ಬರುತ್ತದೆ, ಮಾರಿಕೊಳ್ಳಬಹುದು ಎಂದು ತಿಳಿದುಕೊಂಡಿದ್ದಾರೆ. ಉದಾಹರಣೆಗೆ ನಾನು ಒಬ್ಬ ರೈತ ಎಂದು ಇಟ್ಟುಕೊಳ್ಳಿ, ನನ್ನ ಹತ್ತಿರ ೧೦೦ ಕ್ವಿಂಟಾಲ್ ಭತ್ತ ಇದೆ ಎಂದು ಇಟ್ಟು ಕೊಳ್ಳಿ. ನನಗೆ ಈಗಲೇ ದುಡ್ಡಿಗೆ ದರಿದ್ರ ಏನೂ ಇಲ್ಲ, ಆದುದರಿಂದ ನಾನು ಈಗಲೇ ಮಾರುವುದಿಲ್ಲ. ಮುಂದೆ ಒಳ್ಳೇರೇಟ್ ಬಂದಾಗ ಮಾರುತ್ತೇನೆ. ಅಲ್ಲಿಗೆ ನಾನು ನಿಮಗೆ ಲೆವಿ ಕೊಟ್ಟ ಹಾಗಾಯಿತೇ ? ನಿಮಗೆ ಲೆವಿ ಬಂದಿರುವುದು ಹೇಗ ಎಂದರೆ ಪಾಪ ಆ ಬಡವ ಇದ್ದಾನಲ್ಲ ಅವನಿಗೆ ತೊಂದರೆ ಕೊಟ್ಟು ವಸೂಲ್ಮಾಡಿದ್ದೀರಿ. ಅವನು ಗದ್ದೆಯಿಂದ ಭತ್ತ ತೆಗೆದುಕೊಂಡು ಬಂದಾಗ ಆ ಗೇಟ್ ಹಾಕುವುದು. ಮಧ್ಯೆ ತಡೆದು ವಸೂಲ್ಮಾಡುವುದು ಮಧ್ಯೆ ಏನಾದರೂ ಅವನು ದುಡ್ಡು ಕೊಟ್ಟರೆ ಬಿಟ್ಟುಬಿಡುತ್ತಾರೆ, ಇಲ್ಲದೇ ಹೋದರೆ ವಸೂಲ್ಮಾಡುತ್ತಾರೆ. ಇಷ್ಟೇ ಅಲ್ಲ ಅವನು ಅಕ್ಕಿ ಮಾಡಿಸುವುದಕ್ಕೆ ಮಿಲ್‌ಗೂ ತೆಗೆದುಕೊಂಡು ಹೋಗಬಾರದು, ತೆಗೆದುಕೊಂಡು ಹೋದರೆ ಅಲ್ಲಿ ವಸೂಲ್ಮಾಡುತ್ತಾರೆ, ಮತ್ತು ತಾಲ್ಲೂಕಿನಿಂದ ತಾಲ್ಲೋಕಿಗೆ ತೆಗೆದುಕೊಂಡು ಹೋದರೆ ಅದಕೆ ರಿಸ್ಟ್ರಿಕಷನ್ ಬೇರೆ, ಅವನು ಇಂತಿಷ್ಟು ಕೊಡಬೇಕೆಂದು ಇದೆ. ನಂತರವಿಲ್‌ನಲ್ಲಿ ಯಾರು ಲೆವಿ ಕೊಟ್ಟಿರುತ್ತಾರೊ ಅವರಿಗೆ ಮಾತ್ರ ಮಿಲ್ ಮಾಡುವುದು. ಅಲ್ಲಿ ವಸೂಲಿ, ಹೀಗೆ ಮಾಡಿ ನೀವು ಲೆವಿಯನ್ನು ವಸೂಲ್ಮಾಡಿದ್ದೀರಿ. ಆ ಬಡವರಿಗೆ ಇಲ್ಲದೇ ಇದ್ದ ತೊಂದರೆಗಳನ್ನು ಕೊಟ್ಟು ಲೆವಿ ವಸೂಲ್ಮಾಡಿದ್ದೀರಿ. ಈಗ ನಮ್ಮ ಶಾಸಕರಾದ ಜೆ. ಹೆಚ್ ಪಟೇಲರನ್ನೇ ತೆಗೆದುಕೊಳ್ಳಿ, ಅವರು ೨೦೦ ಕ್ವಿಂಟಾಲ್ ಭತ್ತ ಬೆಳೆದರೆ ಅವರಿಂದ ಲೆವಿ ತೆಗೆದುಕೊಳ್ಳುವುದಕ್ಕೆ ತಮಗೆ ಧೈರ್ಯ ಇದೆಯೋ ? ಯಾವ ಶಾಸಕರೇ ಇರಲಿ ಅವರಿಂದ ಲೆವಿ ವಸೂಲ್ಮಾಡುವುದಕ್ಕೆ ತಮಗೆ ಧೈರ್ಯ ಇದೆಯೋ ಎಂದು ಕೇಳುತ್ತೇನೆ ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಅದು ಮೊದಲಿನಿಂದಲೂ ನಡೆದುಕೊಂಡು ಬಂದಿದೆ, ಈಗಲ್ಲ.

ಶ್ರೀ ಡಿ. ದೇವರಾಜ ಅರಸ್.—ನಾನು ಹೇಳುತ್ತೇನೆ, ಯಾರೂ ಕೊಡುವುದಿಲ್ಲ. ಹಾಗೆ ಬಿಟ್ಟು ಕೊಂಡು ಬಂದಿದ್ದೀರೀ ಒಂದಲ್ಲ ಒಂದು ದಿವಸ ತಮಗೇ ಇದರ ಅರಿವಾಗುತ್ತದೆ. ಡ್ರೈ ಮತ್ತು ವೆಟ್ ಎಲ್ಲಾ ಸೇರಿ ಸ್ಮಾಲ್ ಮತ್ತು ಮಾರ್ಜಿನಲ್ ಫಾರ್ಮರ್ಸ್‌ಗೆ ಸೇರಿದ ಹಾಗೆ ೩೦-೪೦ ಲಕ್ಷ ಎಕರೆ ಭೂಮಿ ಇದೆ. ಅದರಲ್ಲಿ ಸುಮಾರು ೧೦-೧೨ ಲಕ್ಷ ಎಕರೆಯಲ್ಲಿ ಭತ್ತ ಬೆಳೆಯಬಹುದು ಅಥವಾ ಇನ್ನೂ ಸ್ವಲ್ಪ ಜಾಸ್ತಿ ಇರಬಹುದು. ಇದರಲ್ಲಿ ಸರ್ಕಾರಕ್ಕೆ ಲೆವಿ ರೂಪಕವಾಗಿ ಭತ್ತ ಬಂದಿರುವುದು ಯಾವ ರೂಪವಾಗಿ ಬಂದಿದೆ ಎಂದ ಮಿಲ್ ಮುಖಾಂತರವಾಗಿ, ಟ್ರೇಡರ್ಸ್ ಮುಖಾಂತರವಾಗಿ ಮತ್ತು ಯಾರು ಯಾರಿಗೆ ಹಿಂಸೆ ಕೊಡುತ್ತಿದ್ದರೋ ಅವರ ಮುಖಾಂತರವಾಗಿ ಇದರಲ್ಲಿ ಒಂದೆರಡು ಸಣ್ಣಪುಟ್ಟ ರೈತರೂ

ಇದ್ದಾರೆ ಅವರ ಮುಖಾಂತರ ತಮಗೆ ಲೆವಿ ಬಂದಿದೆ ನಮ್ಮಲ್ಲಿ ದೊಡ್ಡ ದೊಡ್ಡ ರೈತರು ೧೦೦, ೧೫೦, ೨೦೦ ಕ್ವಿಂಟಾಲ್ ಭತ್ತ ಬೆಳೆಯತಕ್ಕಂಥಾ ರೈತರು ಏನು ಇದ್ದಾರೋ ಅವರು ಯಾರೂ ಕೊಟ್ಟಿಲ್ಲಾ. ಕಾರಣ ಏನು ? ಅವರಿಗೆ ಮುಂದೆ ಹೆಚ್ಚಿನ ರೇಟು ಬರುತ್ತದೆ ಆವಾಗ ಮಾರಿ ಕೊಳ್ಳೋಣ ಅನ್ನುವ ಉದ್ದೇಶ ಒಂದು, ಎರಡನೇಯದು ಅವರಿಗೆ ಈಗಲೇ ದುಡ್ಡಿಗೆ ದರಿದ್ರ ಏನೂ ಇಲ್ಲ ಹೋಲ್ಡಿಂಗ್ ಕೆಪಾಸಿಟಿ ಇದೆ. ಇಂಥಾ ಹೋಲ್ಡಿಂಗ್ ಕೆಪಾಸಿಟಿ ಇರುವವರೂ ಯಾರೂ ಕೊಟ್ಟಿಲ್ಲ. ಮುಂದೆ ರೇಟು ೧೭೫–೧೮೦–೨೦೦ ರೂಪಾಯಿ ಆಗುತ್ತದೆ, ಒಳ್ಳೆ ಬೆಲೆ ಸಿಗುತ್ತದೆ ಎಂದು ಕಾಯುತ್ತಿದ್ದಾರೆ. ನೀವು ತಿಳಿದುಕೊಂಡಿರುವುದು ಆ ರೈತರಿಗೆ ಸಪೋರ್ಟ್ ಪ್ರೈಸ್ ನಾವು ಕೊಡುತ್ತಿದ್ದೇವೆ ಎಂದು ನೀವು ಹೇಳು ವಂಥಾದ್ದನ್ನೂ ಸಹ ನಾನು ಒಪ್ಪಿಕೊಳ್ಳುತ್ತೇನೆ, ಮೊದಲು ಸಪೋರ್ಟ್ ಪ್ರೈಸ್ ಮಾರ್ಕೆಟ್ ಪ್ರೈಸ್‌ಗಿಂತ ಜಾಸ್ತಿ ಇದ್ದುದು ನಿಜ, ಇಲ್ಲ ಎಂದು ಹೇಳುವುದಿಲ್ಲ. ಅದನ್ನು ಅವರೂ ಒಪ್ಪಿಕೊಳ್ಳುತ್ತಾರೆ. ಇಂದು ಮಾರ್ಕೆಟ್ ಪ್ರೈಸನ್ನು ನೀವೇನು ೧೨೫ ಎಂದು ಮಾಡಿದ್ದೀರಿ ಅದರಲ್ಲೇ ಕೆಲವರು ಕೊಂಡು ಕೊಂಡಿದ್ದಾರೆ. ಇನ್ನು ಕೆಲವರು ಅದಕ್ಕಿಂತ ಕಡಿಮೆಯಾಗಿ ಕೊಂಡುಕೊಂಡಿದ್ದಾರೆ. ರೈತರನ್ನು ಅವರು ಹೆದರಿಸಿದ್ದಾರೆ. ೧೨೫ ರೂ. ಕೊಡುವುದಕ್ಕಾಗುವುದಿಲ್ಲ, ಕಡಿಮೆಗೆ ಕೊಟ್ಟರೆ ಕೊಡು, ಇಲ್ಲದಿದ್ದರೆ ಮಿಲ್ ಮಾಡುವುದಿಲ್ಲ ಎಂದು ಹೇಳಿದ್ದಾರೆ. ಆಮೇಲೆ ತೂಕದಲ್ಲಿ ವ್ಯತ್ಯಾಸ ಮಾಡಿದ್ದಾರೆ. ಕ್ವಿಂಟಾಲ್ ಲೆಕ್ಕದಲ್ಲಿ ತೂಗುವುದನ್ನು ಬಿಟ್ಟುಬಿಟ್ಟಿದ್ದಾರೆ. ಕೆಲವರು ಕೊಳಗ ಅಂತ ಇಟ್ಟುಕೊಂಡಿರುತ್ತಾರೆ. ಮಾನ್ಯ ಅಧ್ಯಕ್ಷರೇ, ತಾವೂ ಅದನ್ನು ನೋಡಿದ್ದೀರಿ. ಹಳೆಯ ಕೊಳಗದಲ್ಲಿ ಕೆಲವರು ಅಳೆಯುತ್ತಿದ್ದಾರೆ. ಇದರಲ್ಲಿ ದಬಾಯಿಸಿ ಅಳೆಯುವುದು ಒಂದು ಲೆಕ್ಕ, ಈಗಲೂ ಕೆಲವರು ಇದನ್ನು ಇಟ್ಟಿದ್ದಾರೆ. ಈ ವರ್ಷ ಕೆಲವು ಕಡೆ ಈ ಕೊಳಗದಲ್ಲೇ ಅಳೆಸಿದ್ದಾರೆ. ಹತ್ತೂವರೆ ಸೇರಿನ ಕೊಳಗದಲ್ಲಿ ಹಾಕಿಕೊಂಡು ಅಳೆಯುತ್ತಾರೆ. ಇದರಲ್ಲಿ ಭಾರಿ ಮೋಸ ಮಾಡಿದ್ದಾರೆ. ಇದು ಏತಕ್ಕೆ ಆಗಿದೆ ಎಂದರೆ–ಅವರಿಗೆ ಮಿಲ್‌ಗೆ ಹೋಗುವುದಕ್ಕೆ ಹೆದರಿಕೆ, ಇಲ್ಲೇ ಬಂದಷ್ಟು ಬರಲಿ, ತೆಗೆದುಕೊಂಡು ಬಿಡೋಣ ಎಂದು ಹೇಳಿ ಅವರು ಅಲ್ಲಿಗೆ ಹೋಗಿದ್ದಾರೆ. ಅದೂ ಅಲ್ಲದೆ ಅಳತೆ ಮಾಡುವವರು 'ಇಲ್ಲೇ ೧೦ ರೂ. ಜಾಸ್ತಿ ಕೊಡುತ್ತೇವೆ' ಅಂತ ಹೇಳುತ್ತಾರೆ. ರೈತರು ಅವರಲ್ಲಿಗೆ ಹೋಗುತ್ತಾರೆ. ಪಾಪ ಆ ರೈತರಿಗೆ ೧೫–೨೦ ರೂಪಾಯಿಗಳ ಭತ್ತ ಹೋಗುವುದು ಅವರಿಗೆ ಗೊತ್ತಿಲ್ಲ. ಅವತ್ತಿಗೆ ಅವರಿಗೆ ಹೊಟ್ಟೆಗಾಗಿ ದುಡ್ಡು ಬೇಕು ಅಷ್ಟೆ–ಅವರು ಅಲ್ಲೇ ಮಾರಾಟ ಮಾಡುತ್ತಾರೆ, ಇಂತಹ ಜನ ಕೂಡ ಇದ್ದಾರೆ. ನೀವು ಯಾವ ಜನರಿಗೆ 'ನಿಮ್ಮನ್ನು ಈ ಹಿಂಸೆಯಿಂದ ತಪ್ಪಿಸುತ್ತೇವೆ' ಅಂತ ಹೇಳಿದಿರೋ ಆ ಜನರಿಗೆ ಈ ಲೆವಿಯಿಂದ ಹೀಗಾಯಿತು. ಈ ಲೆವಿಯಿಂದ ನಮ್ಮಂತಹವರು ತಪ್ಪಿಸಿಕೊಂಡಹಾಗೆ ಆಯಿತು. ಇನ್ನೊಂದು ರೀತಿಯಲ್ಲಿ ಈ ಚಿತ್ರಹಿಂಸೆಗೆ ಒಳಗಾದಂಥವರು ಈ ಸಾಧಾರಣ ರೈತರು. ಅವರ ಕಷ್ಟ ಇಲ್ಲಿಯವರೆಗೆ ಬಂತು. ಈ ಲೆವಿ ಪದ್ಧತಿಯಿಂದ ನಾವು ರೈತರಿಗೆ ಕಿರುಕುಳವನ್ನು ತಪ್ಪಿಸಿಬಿಟ್ಟೋ ಹಾಗೆ ಮಾಡಿದೆವು, ಹೀಗೆ ಮಾಡಿದೆವು ಎಂದು ಅದರಲ್ಲಿ ಹೇಳಿದ್ದೀರಿ. ಆದರೆ ಇವತ್ತಿನ ಪರಿಸ್ಥಿತಿ ಏನಾಗಿದೆ ಎಂದರೆ ಯಾರು ಸರ್ಪಸ್ ಹೋಲ್ಡರ್ಸ್ ಇದ್ದಾರೆ ಅವರೆಲ್ಲಾ ಇವತ್ತು ತಪ್ಪಿಸಿಕೊಂಡಿದ್ದಾರೆ ಅವರೆಲ್ಲಾ ಅವರ ಮನೆಯಲ್ಲಿ ಭತ್ತವನ್ನು ಮಡಗಿಕೊಂಡಿದ್ದಾರೆ. ಆಮೇಲೆ ಕೆಲವರು ಕೆಲವು ಕಡೆಗಳಿಗೆ ಹೋಗಿ ನಿಮ್ಮ ಮನೆಯಲ್ಲಿರುವ ಭತ್ತದ ಬಗ್ಗೆ ಡಿಕ್ಲರೇಷನ್ ಕೊಡಿ' ಎಂದು ಕೇಳುವುದಕ್ಕೆ ಹೊರಟಿದ್ದಾರೆ ಹಾಗೆ ಕೇಳುವುದಕ್ಕೆ ಅವರಿಗೇನು ಅಧಿಕಾರ? ಹಾಗಂತ ಯಾವ ಆರ್ಡರ್ ಇದೆ? ತೆಗೆಯಿರಿ ನೋಡೋಣ. ನಾನು ಏತಕ್ಕೆ ಕೊಡಲಿ ಡಿಕ್ಲರೇಷನ್? ನಾನು ಲೆವಿ ಕೊಡುವ ಹಾಗೆ ಇಲ್ಲ, ಡಿಕ್ಲರೇಷನ್ ಕೊಡುವ ಹಾಗೆ ಇಲ್ಲ, ಇವತ್ತು ನೀವು ಕಾನೂನು ಮಾಡಿರುವ ಪ್ರಕಾರ, ಲೆವಿ ಏತಕ್ಕೆ ಕೊಡಬೇಕು? ನೀವು ಲೆವಿಯನ್ನು ತೆಗೆದುಹಾಕಿದ್ದೀರಿ. ಇವತ್ತಿನದಿವಸ ಗೊತ್ತಿಲ್ಲದವರಿಗೆ 'ನೀವು ಲೆವಿ ಕೊಡಿ' ಎಂದು ಕೇಳಿ ಹಿಂಸೆ ಮಾಡತಕ್ಕಂಥಾದ್ದು ಕೂಡ ನನ್ನ ಗಮನಕ್ಕೆ ಬಂದಿದೆ. ಲೆವಿಯನ್ನು ಕೇಳುವುದಕ್ಕೆ ನಿಮಗೆ ಅಧಿಕಾರವಿಲ್ಲ. ನಾನು ಡಿಕ್ಲರೇಷನ್ ಕೊಡುವುದಿಲ್ಲ, ಏನು ಮಾಡುತ್ತೀರಿ? ಎಸ್ಸೆನ್‌ಷಿಯಲ್ ಕಮೋಡಿಟೀಸ್ ಆಕ್ಟ್ ಏನಿದೆ ಅದನ್ನು ಜಾರಿಗೆ ತಂದು ಪ್ರತಿಯೊಬ್ಬನೂ ಕೂಡ–ವ್ಯಾಪಾರ ಮಾಡ ತಕ್ಕಂಥವನು ರೈತ–ಎಲ್ಲರೂ ಡಿಕ್ಲರೇಷನ್ ಕೊಡಬೇಕು ಎಂದು ಒಂದು ಆರ್ಡರ್ ಹೊರಡಿಸಿ. ಹಾಗೆ ಹೊರಡಿಸಿದಮೇಲೆ ನಾವು ಕೊಡುತ್ತೇವೋ ಅಥವಾ ಬಿಡುತ್ತೇವೋ ನೋಡೋಣ ಅಥವಾ ಯಾರಾದರೂ ಕೊಡುತ್ತಾರೋ ಬಿಡುತ್ತಾರೋ ನೋಡೋಣ. ಅದಿಲ್ಲದೇ ನೀವು ನಮ್ಮನ್ನು ಡಿಕ್ಲರೇಷನ್ ಕೇಳುವುದಕ್ಕೆ ಅಧಿಕಾರವಿಲ್ಲ ಇದನ್ನು ನೀವುಗಮನದಲ್ಲಿಟ್ಟುಕೊಳ್ಳಬೇಕು. ಇಷ್ಟೆಲ್ಲಾ ಆಗಿ ಕೂಡ ಈಗ ಏನು ಹೇಳಿದ್ದಾರೆ ಎಂದರೆ. ಈ ಪದ್ಧತಿಯನ್ನು ನಾವು ಜಾರಿಗೆ ತರಬೇಕಾದಗೆ ಕೇಂದ್ರ ಸರ್ಕಾರದವರು ಈ ಪದ್ಧತಿಯನ್ನು

ಜಾರಿಗೆ ತರುವುದರಿಂದ ಒಳ್ಳೆಯದಿದೆ ಎಂದು ಹೇಳಿಬಿಟ್ಟರು ಅಂತ ಆಹಾರ ಇಲಾಖೆಯ ಡೈರೆಕ್ಟರ್ ಒಂದು ಕಡೆ ಹೇಳಿದ್ದಾರೆ. ನನಗೆ ತಿಳಿದಹಾಗೆ ಕೇಂದ್ರ ಸರ್ಕಾರದವರು, ನೀವು ಇದೇ ಪದ್ಧತಿಯಲ್ಲಿ ಭತ್ತ ವಸೂಲು ಮಾಡಬೇಕೆಂದು ಸಲಹೆ ಕೊಡಬಹುದೇ ಹೊರತು ಅವರು ನಿಮಗೆ ಈ ಪದ್ಧತಿಯನ್ನು ನೀವು ಕಡ್ಡಾಯವಾಗಿ ಒಪ್ಪಿಕೊಳ್ಳಲೇಬೇಕು ಎಂದು ಹೇಳುವ ಅಧಿಕಾರ ಇಲ್ಲ. ನಾವು ಬಿಟ್ಟಮೇಲೆ, ನೀವು ಬಂದ ಮೇಲೆ ಈ ಒಂದು ಅಧಿಕಾರ ಅವರಿಂದ ಬಂತೋ ಏನೋ ನನಗೆ ಗೊತ್ತಿಲ್ಲ. No State is under the obligation, in a sense, that we should obey all their orders. ಅವರು ನಿಮ್ಮನ್ನು ಯಾವರೀತಿ ಹೆದರಿಸಬಹುದು ಎಂದರೆ 'ನೀವು ನಾವು ಹೇಳುವ ರೀತಿಯಲ್ಲಿ ಲೆವಿ ಪದ್ಧತಿಯನ್ನು ಜಾರಿಗೆ ತರದೇ ಹೋದರೆ ನಾವು ನಿಮಗೆ ಕೊಡುತ್ತಿದ್ದಂತ ಅಕ್ಕಿಯನ್ನು ನಿಲ್ಲಿಸಿಬಿಡುತ್ತೇವೆ' ಎಂದು ಹೇಳಬಹುದು. ನಾವು ಹಿಂದೆ ಈ ಫುಡ್ ಕಾರ್ಪೊರೇಷನ್ ಮಾಡಿದಾಗ ಇದೇರೀತಿ ಹೇಳಿದರು. ನಾವು ಭತ್ತಕ್ಕೆ ೧೦ ರೂಪಾಯಿ ಜಾಸ್ತಿ ಕೊಡುತ್ತೇವೆ ಎಂದು ಹೇಳಿದಾಗ ಅವರು 'ನಾವು ನಿಮಗೆ ಕೊಡತಕ್ಕಂಥ ಅಕ್ಕಿಯನ್ನು ನಿಲ್ಲಿಸಿಬಿಡುತ್ತೇವೆ ಎಂದು ಹೇಳಿದರು. ಆಗ ನಾನು ಹೇಳಿದೆ–ನೀವು ಅಕ್ಕಿ ಕೊಡುವುದನ್ನು ನಿಲ್ಲಿಸಿಬಿಡಿ, ನಿಮ್ಮ ಅಕ್ಕಿ ನಮಗೆ ಬೇಡ' ಎಂದು ಹೇಳಿದೆ. ಈ ಬಗ್ಗೆ ನೀವು ಹಿಂದಿನ ಲೆಕ್ಕವನ್ನು ತೆಗೆಸಿ ನೋಡಿ, ಗೊತ್ತಾಗುತ್ತದೆ. ಆಮೇಲೆ ಕೇಂದ್ರದವರು ೩–೪ ವರ್ಷ ಅಕ್ಕಿಯನ್ನು ಕೊಡಲೇ ಇಲ್ಲ. ನಾನು ಕೇಳಲೂ ಇಲ್ಲ. 'ನಾವೇ ಮ್ಯಾನೇಜ್ ಮಾಡಿಕೊಳ್ಳುತ್ತೇವೆ' ಅಂತ ಹೇಳಿದೆವು. ಈಗೇನೋ ಅವರು ನಿಮಗೆ ಕೊಡುತ್ತಿದ್ದಾರೆ. ಒಂದು ಸಾರಿ ಅವರು ಸಡನ್ ಆಗಿ ನಿಲ್ಲಿಸಿಬಿಟ್ಟರು, ನಿಮ್ಮ ಮಿನಿಸ್ಟರು 'ಇಲ್ಲ, ಇಲ್ಲ ನಮಗೆ ಬಹಳ ತೊಂದರೆಯಾಗಿದೆ, ನೀವು ನಿಲ್ಲಿಸಕೂಡದು' ಎಂದು ಏನೋ ಕೇಳಿಕೊಂಡರು. ಅದೇ ಏನಾದರೂ ಆಗಲಿ. ಆಮೇಲೆ ಈ ಇಂಡಕ್ಟಿವ್ ಕಟ್ ಅದೂ ಇದೆ. ಮತ್ತೆ ೧೯೮೦–೮೧ರಲ್ಲಿ ಈ ಫುಡ್ ಕೋಟಾ ಇದೆ. ಕೇಂದ್ರ ಸರ್ಕಾರದವರು ಈ ಬಗ್ಗೆ ಇಂಡಕ್ಟೀಟ್ ಆಗಿ ಮಾಡಿಬಿಟ್ಟಿದ್ದಾರೆ ಎಂದು ಹೇಳಿದ್ದಾರೆ, ಇದು ಈ ಸರ್ಕಾರದ ಹೇಳಿಕೆ. ಇದಕ್ಕೋಸ್ಕರ ಇವರು ಏನು ವಾದ ತೆಗೆದರು ಎಂದರೆ, ಈ ಹೊಸ ಲೆವಿ ಪದ್ಧತಿ ನಮ್ಮದಲ್ಲ. ಕೇಂದ್ರದವರು ಹೀಗೆ ಮಾಡಿದ್ದರಿಂದ ಎಲ್ಲಾ ಯೂನಿಫಾರಂ ಆಗಿ ಇರಲಿ ಎಂದು ನಾವು ಮಾಡಿದ್ದೇವೆ ಎಂದು ಹೇಳಿದ್ದಾರೆ ನಾನು ನಿಮ್ಮನ್ನು ಕೇಳುತ್ತೇನೆ, ನಿಮ್ಮ ಪದ್ಧತಿಯನ್ನು ಅವರು ಏತಕ್ಕೆ ಅಡಾಪ್ಟ್ ಮಾಡಿಕೊಳ್ಳಬಾರದು ಅಂತ. ಕಲ್ಕತ್ತದಲ್ಲಿ ಮತ್ತು ವೆಸ್ಟ್ ಬೆಂಗಾಲ್‌ನಲ್ಲಿ ಹೋದಸಾರಿ ಇದೇ ಮಿಲ್ ಮಾಲೀಕರಿಂದ ತೆಗೆದುಕೊಳ್ಳತಕ್ಕಂಥ ಪದ್ಧತಿಯನ್ನು ಜಾರಿಗೆ ತಂದು ಅದು ಸರಿಯಾಗಿ ವರ್ಕ್‌ಔಟ್ ಆಗುವುದಿಲ್ಲವೆಂದು ಕಂಡುಬಂದಾಗ ಅವರು ಅದನ್ನು ಬದಲಾಯಿಸಿದ್ದಾರೆ. ನೀವು ೪–೬ ವರ್ಷಗಳಿಂದ ಜಾರಿಯಲ್ಲಿದ್ದಂತಹ ಪದ್ಧತಿಯನ್ನು ತಪ್ಪಿಸಿ ರೈತರಿಗೆ ಒಂದಕ್ಕೆ ನಾಲ್ಕರಷ್ಟು ಕಿರುಕುಳವನ್ನು ಉಂಟು ಮಾಡಿ ಈ ಹೊಸ ಪದ್ಧತಿಯನ್ನು ಕೇಂದ್ರದವರು ಹೇಳಿದರು ಅಂತ ಹೇಳಿ ನೀವೇಕೆ ಅದನ್ನು ಒಪ್ಪಬೇಕು? ಇವರು ನಿಮಗೆ ಹೇಳಿರಬಹುದು. ಆದರೆ ನನಗೆ ಗೊತ್ತಿರುವ ಹಾಗೆ ಈ ಲೆವಿ ಪದ್ಧತಿ ಯಾವರೀತಿ ಇರಬೇಕು ಅಂತ ಯಾವ ಕಾನ್‌ಸ್ಟಿಟ್ಯೂಷನ್‌ನಲ್ಲೂ ಹೇಳಿಲ್ಲ. ಕೇಂದ್ರ ಸರ್ಕಾರದವರು ನಿಮ್ಮ ಮೇಲೆ ಅದನ್ನು ಹೇರುವುದಕ್ಕೆ ಯಾವ ಅಧಿಕಾರವೂ ಇಲ್ಲ. ಇದು ನನಗೆ ಸ್ಪಷ್ಟವಾಗಿ ಗೊತ್ತಿದೆ ಈ ಬಗ್ಗೆ ಯಾವುದಾದರೂ ಹೊಸ ಆರ್ಡರ್ ಇದ್ದರೆ ದಯವಿಟ್ಟು ಅದನ್ನು ನನಗೆ ತೋರಿಸಿ, ಹಾಗೇನಾದರೂ ಇದ್ದರೆ ಅದು ನನಗೆ ಗೊತ್ತಿಲ್ಲ. ನೀವು ಕೇಂದ್ರದವರ ಹೆಸರು ಹೇಳಿ ನಮ್ಮ ಪದ್ಧತಿಯನ್ನು ತಪ್ಪಿಸಿ ಅವರ ಪದ್ಧತಿಯನ್ನು ಅನುಸರಿಸಿಕೊಂಡು ಇದರಲ್ಲಿ ಅವರ ಜವಾಬಾರಿ ಕೂಡಾ ಇದೆ ಎಂದು ಹೇಳುವುದು ಸೂಕ್ಷ್ಮವಾದ ವಿಚಾರವಲ್ಲ ಹಾಗೂ ಅದು ನಿಜವಾದ ವಿಚಾರವೂ ಅಲ್ಲ. ಈ ಕಾರಣಗಳಿಂದ ನಾನು ಈ ಸರ್ಕಾರದಲ್ಲಿ ಒಂದು ಮನವಿ ಮಾಡಿಕೊಳ್ಳುತ್ತೇನೆ. ನಾನು ಈ ಬಗ್ಗೆ ಏನು ಹೇಳಬೇಕು ಅಂತ ಇದ್ದೇನೆ ಎಂದರೆ ನೀವೇನು ಈಗ ಹೊಸ ಪದ್ಧತಿಯನ್ನು ಜಾರಿಗೆ ತಂದಿದ್ದೀರಿ. ಅದರಿಂದ ರೈತರಿಗೆ ನಾನಾ ರೀತಿಯಲ್ಲಿ ಕಿರುಕುಳ ಕೊಡುತ್ತಾ ಇರುವುದರ ಜೊತೆಗೆ ಕಷ್ಟದಲ್ಲಿದ್ದಂತಹವರು ಯಾರ್ಯಾರು ಆತುರಾತುರವಾಗಿ ಮಾರಾಟ ಮಾಡಬೇಕೆಂದು ಇದ್ದರೋ ಅವರಿಗೆ ನಿಮ್ಮ ಲೆವಿಯನ್ನು ಕೊಟ್ಟು ಹೆಚ್ಚಿಗೆ ಇರತಕ್ಕಂಥಾದ್ದನ್ನು ಮಾರಿಕೊಳ್ಳುವುದಕ್ಕೆ ಅವಕಾಶವಾಗುತ್ತಾ ಇಲ್ಲ. ಅಲ್ಲದೇ ೧ ಎಕರೆ ಇರತಕ್ಕಂಥವರು ಲೆವಿ ಕೊಡಬೇಕಾಗಿರಲಿಲ್ಲ. ಸ್ವಲ್ಪ ನೀರಾವರಿ ಜಮೀನು ಇರತಕ್ಕಂಥವರು ಕೊಡಬೇಕಾಗಿರಲಿಲ್ಲ. ಮಳೆಗಾಲದಲ್ಲಿ ಮಳೆಯ ಆಧಾರದಿಂದ ಬೆಳೆಯುತಕ್ಕಂಥವರು ಲೆವಿಯನ್ನು ಕೊಡಬೇಕಾಗಿರಲಿಲ್ಲ. ಈಗ ಅವರೆಲ್ಲಾ ಲೆವಿ ಕೊಡಬೇಕಾದ ತರಹ ನೀವು ಮಾಡಿಬಿಟ್ಟಿದ್ದೀರಿ. ಇದೇ ನೀವು ಮಾಡಿರುವ ತಪ್ಪು. ರೈತರಿಗೆಲ್ಲಾ ನೀವು ಬಹಳ ಒಳ್ಳೆಯ ರೀತಿಯಲ್ಲಿ ಸಹಾಯ ಮಾಡಿರುವುದು ಏನೆಂದರೆ ಲೆವಿ ಕೊಡದೇ ಇದ್ದವನೂ ಕೊಡುವಹಾಗೆ ಮಾಡಿಬಿಟ್ಟಿದ್ದೀರಿ. ಅವನು ಸುಖವಾಗಿ ೫ ಕ್ವಿಂಟಾಲ್ ಅಥವಾ ೬ ಕ್ವಿಂಟಾಲ್

ಭತ್ತವನ್ನು ಕೊಟ್ಟುಬಿಟ್ಟು ಬಾಕಿಯುದನ್ನು ಮಾರಿಕೊಳ್ಳುತ್ತಿದ್ದುದನ್ನು ತಪ್ಪಿಸಿದ್ದೀರಿ. ಅವನು ಇವತ್ತು ೫೦ ಪರ್ಸೆಂಟ್ ಕೂಡಾ ಕೊಡುತ್ತಾ ಇಲ್ಲ. ಈ ಮಿಲ್ ಮುಖಾಂತರ ನೀವು ತೆಗೆದುಕೊಳ್ಳತಕ್ಕಂಥ ವ್ಯವಸ್ಥೆ ಮಾಡಿದ್ದೀರಿ. ಅವರೆಲ್ಲಾ ಇವತ್ತು ಮಿಲ್‌ನವರ ಕೈಯಲ್ಲಿ ಸಿಕ್ಕಿಹಾಕಿಕೊಂಡಿದ್ದಾರೆ. ಅವರು ಅವರನ್ನೆಲ್ಲಾ ಭೇಟಿಯಾಡುತ್ತಿದ್ದಾರೆ. ಒಂದು ಕಡೆ ೧೫–೨೦ ರೂಪಾಯಿಗಳನ್ನು ಕೊಟ್ಟು ಅಕ್ಕಿ ಮಾಡಿಸ ಬೇಕು, ಮತ್ತೊಂದು ಕಡೆ ಅದನ್ನು ತೆಗೆದುಕೊಂಡು ಹೋಗಿ ಅವನು ಹೇಳಿದಹಾಗೆ ಕೊಡಬೇಕು. ಅವನು ಮಾರಾಟ ಮಾಡುವುದಕ್ಕೆ ಇನ್ನೊಂದು ಕಡೆ ಮಾರ್ಕೆಟ್ ಇಲ್ಲ. ಟ್ರೇಡರ್ಸ್ ಯಾರೂ ಅನೇಕಕಡೆ ಬರುವು ದಿಲ್ಲ. ಇವತ್ತು ಈ ರೈತ ಕಷ್ಟದಲ್ಲಿದ್ದಾನೆ. ಇವತ್ತಿನದಿವಸ ಅವನು ತನ್ನಲ್ಲಿದ್ದಂತಹ ಅಲ್ಪಸ್ವಲ್ಪವನ್ನು ಹೆಚ್ಚಿಗೆ ಬೆಲೆಗೆ ಮಾರಿಕೊಳ್ಳುವುದಕ್ಕೆ ಅವಕಾಶ ಇಲ್ಲದಹಾಗೆ ಮಾಡಿಬಿಟ್ಟಿದ್ದೀರಿ. ಈ ಕಾರಣದಿಂದ ನಿಮ್ಮ ಪದ್ಧತಿಯುನ್ನು ನೀವೇನು ಜಾರಿಗೆ ಕೊಟ್ಟಿದ್ದೀರಿ ಅದರಿಂದ ರೈತರಿಗೆ ಬಹಳ ಕಿರುಕುಳ ಉಂಟಾಗಿದೆ. ಒಂದುವೇಳೆ ರೈತರಿಗೆ ಯಾವ ಕಿರುಕುಳವೂ ಇಲ್ಲವೆಂದು ಹೇಳುವವರು ಇದ್ದರೆ ಬಹುಶಃ ಆ ಒಂದು ಸಣ್ಣ ವರ್ಗವೂ ಇರಬಹುದು. ನಾನು ಇಲ್ಲ ಎಂದು ಹೇಳುವುದಿಲ್ಲ. ಕೆಲವರು ನನ್ನ ಹತ್ತಿರ ಬಂದು 'ನಿಮ್ಮ ಪದ್ಧತಿ ಬಹಳ ಚೆನ್ನಾಗಿ ಇದೆ' ಎಂದು ಹೇಳಿದ್ದಾರೆ. ಇದನ್ನು ನಾನು ಮುಚ್ಚುಮರೆ ಮಾಡುವುದಿಲ್ಲ. ಅವರು ಯಾರು ಎಂದು ನನಗೆ ಗೊತ್ತಿದೆ. ನಿಮಗೆ ಗೊತ್ತಿಲ್ಲದಿದ್ದರೆ ನೀವು ಕೇಳಿ ತಿಳಿದುಕೊಳ್ಳಿ. ಅವರೆಲ್ಲಾ ನಮ್ಮಂತಹ ರೈತರು. ನೀವು ಯಾವ ಪದ್ಧತಿಯನ್ನು ಜಾರಿಗೆ ತಂದರೂ ಕೂಡ 'ನನ್ನ ಭತ್ತವನ್ನು ನಾನು ಎಷ್ಟಕ್ಕೆ ಮಾರಬೇಕು, ಯಾವಾಗ ಭತ್ತವನ್ನು ಮಾರಬೇಕು' ಎನ್ನತಕ್ಕಂಥಾದ್ದು ಅವರಿಗೆ ಚೆನ್ನಾಗಿ ಗೊತ್ತಿದೆ. ಅವರಿಗೆ ಇವತ್ತು ಕಷ್ಟವೂ ಇಲ್ಲ, ಯಾವ ದರ್ದು ಕೂಡಾ ಇಲ್ಲ. ಆದರೆ ಕಷ್ಟ ಬಂದಿರುವುದು ಯಾರಿಗೆ ಎಂದರೆ. ಯಾರು ಬಹಳ ಮಂದಿ ಜನ ಇಮ್ಮೀಡಿಯಟ್ ಆಗಿ ಮಾರ್ಕೆಟ್‌ನಲ್ಲಿ ಮಾರುತ್ತಿದ್ದರು ಅವರಿಗೆ ಮತ್ತು ಈ ಸರ್ಪ್ಲಸ್ ಹೋಲ್ಡರ್ಸ್ ಅಲ್ಲದಿದ್ದವರು ಯಾರು ೮೦ ಪರ್ಸೆಂಟ್‌ನಷ್ಟು ಜನ ಇದ್ದಾರೆ ಅವರಿಗೆ ಇವತ್ತು ಕಷ್ಟ ಬಂದಿದೆ. ಇನ್ನು ೨೦ ಭಾಗದ ಜನರು ಸುಖವಾಗಿ ಇದ್ದಾರೆ. ಅವರು ಏನೂ ಇವತ್ತು ಅಲ್ಲಾಡುತ್ತಾ ಇಲ್ಲ. ಇವತ್ತು ೧೦–೧೨ ರೂಪಾಯಿಗಳವರೆಗೆ ಈ ಮಿಲ್‌ಗಳಲ್ಲೂ ದರವನ್ನು ಹೆಚ್ಚಿಸಿಬಿಟ್ಟಿದ್ದಾರೆ. ಅದೂ ಅಲ್ಲದೇ ೩ ತಿಂಗಳಿಗೆ ಒಟ್ಟಿಗೇ ತೆಗೆದುಕೊಳ್ಳಬಹುದು ಎಂದು ಸಹ ನೀವು ಮಾಡಿದ್ದೀರಿ. ನಾನು ಏನು ಮಾಡುತ್ತೇನೆ ಎಂದರೆ ೧೨ ಕ್ವಿಂಟಾಲ್ ಭತ್ತವನ್ನು ಒಂದೇ ಸಾರಿ ತೆಗೆದು ಕೊಂಡು ಹೋಗುತ್ತೇನೆ. ಒಂದೇ ಸಾರಿ ಅದನ್ನು ಅಕ್ಕಿ ಮಾಡಿಸಿಬಿಡುತ್ತೇನೆ. ಅವರಿಗೆ ೪ ರೂಪಾಯಿ ಅಥವಾ ೧೦ ರೂಪಾಯಿಯನ್ನೋ ಕೊಟ್ಟುಬಿಡುತ್ತೇನೆ, ಅದನ್ನೆಲ್ಲಾ ತೆಗೆದುಕೊಂಡು ಬಂದು ಮನೆಯಲ್ಲಿ ಹಾಕಿಬಿಡುತ್ತೇನೆ. ಇನ್ನು ೬ ತಿಂಗಳ ಹೊತ್ತಿಗೆ ನಿಮ್ಮ ಪದ್ಧತಿ ಏನೇನು ಆಗುತ್ತದೆ ಎಂಬುದನ್ನು ನೋಡಿ ಕೊಳ್ಳೋಣ ಎಂದು ಹೇಳಿ, ಅಲ್ಲಿಯುವರೆಗೆ ನನ್ನ ಮನೆಯಲ್ಲಿ ಭತ್ತವೂ ಇರುತ್ತದೆ, ಅಕ್ಕಿಯೂ ಬಂದಿರುತ್ತೆ ನನ್ನಂತಹವರು ಬಹಳ ಮಂದಿಗೆ ಈ ಸುಖ. ಆದರೆ ಬಾಕಿಯುವರಿಗೆ ಬಂದಿದೆ ಕಷ್ಟ. ಇವತ್ತು ನೀವು ಈ ಪದ್ಧತಿಯನ್ನು ಕೈಬಿಡಿ ಎಂದು ನಾನು ನಿಮಗೆ ಹೇಳುವುದಕ್ಕೆ ಹೋದರೆ ಕಷ್ಟವಾಗುತ್ತದೆ. ಏಕೆಂದರೆ ನೀವು ಸುಮಾರು ದೂರ ಹೊರಟುಹೋಗಿದ್ದೀರಿ. ಆದ್ದರಿಂದ ನೀವು ಪುನಃ ಹೋಗಿ ಲೆವಿ ಕೊಡಿ ಎಂದು ಕೇಳು ವುದಕ್ಕೆ ನಿಮ್ಮ ಕೈಯಲ್ಲಿ ಆಗುವುದೂ ಇಲ್ಲ. ಅದು ಸಾಧ್ಯವೂ ಇಲ್ಲ. ಹಾಗಾದರೆ ನಾನು ಇದನ್ನು ಏತಕ್ಕೆ ಹೇಳಬೇಕಾಯಿತು? ಇದನ್ನು ಹೇಳುವುದಕ್ಕೆ ಇಷ್ಟೇ ಕಾರಣ. ಈ ಸಾರಿ ನೀವು ಅದು ಒಳ್ಳೆಯದೋ ಕೆಟ್ಟದೋ ಅದನ್ನು ಮಾಡಿಬಿಟ್ಟಿದ್ದೀರಿ. ಅದರಿಂದ ಎಷ್ಟರಮಟ್ಟಿಗೆ ಅನುಕೂಲವಾಯಿತು ಎಂಬುದನ್ನು ನೀವು ಹೇಳಬೇಕು, ಏಕೆಂದರೆ ನನ್ನ ಹತ್ತಿರ ಫಿಗರ್ಸ್ ಇಲ್ಲ, ಅನುಕೂಲವಾಗಿದೆಯೋ ಬಿಟ್ಟಿದೆಯೋ ಅದನ್ನು ನೀವು ಹೇಳಬೇಕು. ಆದರೆ ನನಗೆ ತಿಳಿದಿರುವಂತೆ ಈ ನಿಮ್ಮ ಪದ್ಧತಿಯಿಂದ ರೈತರಿಗೆ ಕಿರುಕುಳ ಆಗಿದೆ. ಇನ್ನು ಮೇಲಾದರೂ ಕೂಡ ಇದನ್ನು ಪುನರ್‌ವಿಮರ್ಶೆ ಮಾಡುವ ಸಂದರ್ಭ ಬಂದರೆ ನೀವು ಪುನರ್‌ವಿಮರ್ಶೆ ಮಾಡತಕ್ಕಂಥಾದ್ದು ಸೂಕ್ತ. ಇದನ್ನು ಪುನರ್‌ವಿಮರ್ಶೆ ಮಾಡದೇ ಹೀಗೆಯೇ ಮುಂದು ವರಿಸಿಕೊಂಡು ಹೋಗುವುದಾದರೆ ಅದರಿಂದ ಅನರ್ಥ ಜಾಸ್ತಿಯಾಗುತ್ತದೆ. ರೈತರಿಗೆ ಇನ್ನೂ ಮಹಾ ಕಿರುಕುಳ ಉಂಟಾಗುತ್ತದೆ. ಹಿಂದೆ ರೈತರಿಗೆ ಯಾವ ಕಿರುಕುಳವೂ ಇರಲಿಲ್ಲ. ಅವರಿಗೆ ಈ ಪದ್ಧತಿ ಹೊಂದಿ ಕೊಂಡಿದ್ದರು.

† ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ ಮಾನ್ಯ ಮಂತ್ರಿಗಳು ತಂದಿರತಕ್ಕಂತಹ ತಿದ್ದುಪಡಿ ಮಸೂದೆಯ ಬಗ್ಗೆ ಮಾನ್ಯ ಮಾಜಿ ಮುಖ್ಯಮಂತ್ರಿಗಳಾದ ಶ್ರೀಮಾನ್ ಡಿ ದೇವರಾಜ ಅರಸ್‌ರವರು ಸಮರ್ಪಕವಾಗಿ ಮಾತನಾಡಿದ್ದಾರೆ. ಆದರೂ ಸಹ ನಾನೂ ಕೂಡ ಕೆಲವು ವಿಚಾರ ಗಳನ್ನು ಹೇಳಲು ಇಷ್ಟಪಡುತ್ತೇನೆ. ಮತ್ತು ನಾನು ಮಾತನಾಡುವುದಕ್ಕೆ ಮೊದಲು ಒಂದೆರಡು

ಕ್ಲಾರಿಫಿಕೇಷನ್ಸ್ ಕೇಳುತ್ತೇನೆ. ಇದಕ್ಕೆ ಸರ್ಕಾರದವರು ಉತ್ತರವನ್ನು ಕೊಟ್ಟರೆ ನಾನು ಹೆಚ್ಚು ಮಾತನಾಡುವ ಅವಶ್ಯಕವಿರುವುದಿಲ್ಲ. ಮೊದಲನೇಯದಾಗಿ ಸರ್ಕಾರದವರು ಈ ಹೊಸ ಲೆವಿ ಪದ್ಧತಿಯನ್ನು ಜಾರಿಗೆ ತಂದ ಮೇಲೆ ಎಷ್ಟು ಅಕ್ಕಿಯನ್ನು ಸಂಗ್ರಹಣೆ ಮಾಡಿದ್ದೀರಿ ? ಎರಡನೇಯದಾಗಿ ಮಿಲ್‌ಗಳ ಮಾಲೀಕರು ಸರ್ಕಾರಕ್ಕೆ ೫೦ ಪರ್ಸೆಂಟ್ ಕೊಡಬೇಕೆಂದು ನಿಗದಿ ಮಾಡಿದ್ದೀರಿ. ಆದರೆ ಇದಕ್ಕೆ ತಾವು ಏನಾದರೂ ಅಗ್ರಿಮೆಂಟ್ ಮಾಡಿಕೊಂಡಿದ್ದೀರಾ ?

ಶ್ರೀ ಡಿ. ದೇವರಾಜ ಅರಸ್.—ಈ ಲೆವಿ ಪದ್ಧತಿ ಒಂದು ರೀತಿಯಲ್ಲಿ ಅನಾಮಲಿಸ್‌ಯಾಗಿದೆ. ಏತಕ್ಕೆಂದರೆ ಬೆಂಗಳೂರಿನಲ್ಲಿ ಒಂದು ಕೆ.ಜಿ. ಅಕ್ಕಿ ೪-೫೦ ಪೈಸೆಗಳಾಗಿದೆ. ಅದೇ ಓಪನ್ ಮಾರುಕಟ್ಟೆಯಲ್ಲಿ ಒಂದು ಕ್ವಿಂಟಾಲ್ ಅಕ್ಕಿ ೧೪೯–೧೬೦ ರೂಪಾಯಿಗಳು ಅದನ್ನು ತೆಗೆದುಕೊಂಡು ಹೋಗಿ ೧೭೫–೨೨೫ ರೂಪಾಯಿಗಳಿಗೆ ಮಾರಾಟ ಮಾಡಬಹುದು. ಬೆಂಗಳೂರಿನಲ್ಲಿ ಅಲ್ಲದೆ ಇನ್ನೂ ಬೇರೆ ಬೇರೆ ಕಡೆಗಳಲ್ಲಿ ಒಂದು ಕೆ.ಜಿ. ಅಕ್ಕಿ ಸುಮಾರು ೩-೫೦ ಪೈಸೆಗಳಿಂತ ಕಡಿಮೆ ಬೆಲೆಗೆ ಸಿಗುವುದಿಲ್ಲ. ಇದರಿಂದ ಏನಾಗಿದೆ ಎಂದರೆ ರೈತನಿಗೆ ಸರಿಯಾದ ಬೆಲೆ ಸಿಗುವುದಿಲ್ಲ. ಕನ್‌ಜೂಮರ್ಸ್‌ಗೂ ಸಹಾ ಕಡಿಮೆ ಬೆಲೆಗೆ ಅಕ್ಕಿ ಸಿಗುವುದಿಲ್ಲ.

SRI MANIK RAO PATIL.—Sir, till to-day approximately we have Procured about 1 lakh tonnes of rice.

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ ನಮ್ಮ ರಾಜ್ಯದಲ್ಲಿ ಸುಮಾರು ೩೨ ಲಕ್ಷ ೫೦ ಸಾವಿರ ಟನ್ ಬತ್ತವನ್ನು ಸಂಗ್ರಹಣೆ ಮಾಡುತ್ತೇವೆ ಎಂದು ಸರ್ಕಾರ ಪುಸ್ತಕದಲ್ಲಿ ಹೇಳಿದೆ. ಸರ್ಕಾರ ತನ್ನ ನೀತಿಯಲ್ಲಿ ಹೇಳಿರುವಂತೆ ೨ ಲಕ್ಷ ಟನ್ ಅಕ್ಕಿಯನ್ನು ಸಂಗ್ರಹಣೆಯನ್ನು ಮಾಡಿದ್ದೇವೆ ಎಂದು. ಮತ್ತು ಮಿಲ್‌ಗಳಿಂದ ಸುಮಾರು ೫೦ ಪರ್ಸೆಂಟ್ ಬತ್ತವನ್ನು ತೆಗೆದುಕೊಂಡು ರೈತರಿಂದ ಲೆವಿ ವಸೂಲು ಮಾಡುವ ಪದ್ಧತಿಯನ್ನು ಕೈಬಿಟ್ಟಿದ್ದೀರಿ. ಆದರೆ ಈಗ ನಾವು ೧೯೭೨ರ ಫೆಬ್ರುವರಿ ತಿಂಗಳಿನಲ್ಲಿ ಇದ್ದೇವೆ. ಇನ್ನು ಒಂದು ತಿಂಗಳಿನಲ್ಲಿ ಈ ವರ್ಷದ ಲೆವಿ ವಸೂಲಿ ಮುಗಿಯುತ್ತದೆ. ಆದರೆ ಸರ್ಕಾರದವರು ಇದುವರೆವಿಗೂ ಶೇಕರಣೆ ಮಾಡಿರುವ ಲೆವಿ ಮಾತ್ರ ಒಂದು ಲಕ್ಷ ಟನ್. ಇನ್ನೂ ಸ್ವಲ್ಪ ಲೆವಿಯನ್ನು ಸಂಗ್ರಹಣೆ ಮಾಡಿದರೆ ಸುಮಾರು ೨ ಲಕ್ಷ ಟನ್ ಲೆವಿಯನ್ನು ತಾವು ಸಂಗ್ರಹಣೆ ಮಾಡುತ್ತೀರಿ. ಆದರೆ ತಮ್ಮ ಹೇಳಿಕೆಯ ಪ್ರಕಾರದ ಗುರಿಯನ್ನು ನೋಡಿದರೆ ಸುಮಾರು ೨೦ ಲಕ್ಷ ಟನ್‌ಗಳಲ್ಲಿ ೧೦ ಲಕ್ಷ ಟನ್ ಅಕ್ಕಿಯನ್ನು ಶೇಕರಣೆ ಮಾಡಲೇಬೇಕು.

MR. SPEAKER.—That is for both kharif and rabi:

ಶ್ರೀ ಎಸ್.ಆರ್. ಬೊಮ್ಮಾಯಿ.—ಸರ್ಕಾರದ ಗುರಿ ೨೦ ಲಕ್ಷ ಟನ್ ಸಂಗ್ರಹಣೆ ಮಾಡುತ್ತೇವೆ ಎಂದು ಇರುವಾಗ ಕನಿಷ್ಠ ಪಕ್ಷ ಅದರಲ್ಲಿ ೫೦ ಪರ್ಸೆಂಟ್ ಎಂದರೂ ಸಹ ೧೦ ಲಕ್ಷ ಟನ್ ಕಲೆಕ್ಟ್ ಮಾಡಿರಬೇಕು. ಆಗ ನಿಮ್ಮ ಸರ್ಕಾರದ ನೀತಿಯನ್ನು ಚಾಚು ತಪ್ಪದೆ ಪಾಲಿಸಿದ್ದೀರಿ ಎಂದು ನಾವು ತಿಳಿದುಕೊಳ್ಳಬಹುದು. ಈಗ ಮಿಲ್‌ಗಳಿಗೆ ಎಷ್ಟು ಬತ್ತ ಬರುತ್ತದೆ ಎನ್ನುವುದಕ್ಕೆ ಮೀಟರ್‌ಗಳು ಏನಾದರೂ ಹಾಕಿದ್ದೀರಾ. ರೈತರ ಹತ್ತಿರ ತಾವು ಲೆವಿ ವಸೂಲು ಮಾಡಬೇಕಾದರೆ ಅವರ ರೇಕಾರ್ಡ್ ಆಫ್ ರೈಟ್ಸ್ ಆಧಾರದ ಮೇಲೆ ಲೆವಿ ವಸೂಲು ಮಾಡುತಾರೆ. ಆದರೆ ಮಿಲ್‌ಗಳಿಂದ ಲೆವಿಯನ್ನು ಯಾವ ಆಧಾರದ ಮೇಲೆ ತಾವು ವಸೂಲು ಮಾಡುತ್ತೀರಿ ? ಮತ್ತು ಮಿಲ್‌ಗಳಲ್ಲಿ ಲೆವಿಯನ್ನು ವಸೂಲು ಮಾಡುವುದಕ್ಕೆ ಅಧಿಕಾರಿಗಳನ್ನು ಇಟ್ಟಿರುತ್ತೀರಿ. ಮತ್ತು ಫುಡ್ ಇನ್ಸ್‌ಪೆಕ್ಟರ್ಸ್ ಇಟ್ಟಿದ್ದೇವೆ ಎಂದು ತಾವು ಹೇಳಬಹುದು. ಮತ್ತು ಈ ಲೆವಿಯನ್ನು ಸರ್ಕಾರದವರು ಕೆಲವು ಜಿಲ್ಲೆಗಳಲ್ಲಿ ಮಾತ್ರ ವಸೂಲು ಮಾಡುತ್ತಿದ್ದಾರೆ. ಕೆಲವು ಜಿಲ್ಲೆಗಳಲ್ಲಿ ವಸೂಲು ಮಾಡುತ್ತಿಲ್ಲ. ಉದಾಹರಣೆಗೆ ಹೇಳುವುದಾದರೆ ಮಂಡ್ಯ ಜಿಲ್ಲೆಯಲ್ಲಿ ಬತ್ತವನ್ನು ಹೆಚ್ಚಾಗಿ ಬೆಳೆಯುತ್ತಾರೆ ಅಲ್ಲಿ ಲೆವಿಯನ್ನು ಇನ್ನೂ ವಸೂಲು ಮಾಡಲಿಲ್ಲ. ಎಂದು ನಾನು ಸರ್ಕಾರದ ಮೇಲೆ ಅಪಾದನೆ ಮಾಡಬೇಕಾಗಿದೆ. ಅದು ಏನೆಂದರೆ ಧಾರವಾಡದಲ್ಲಿ ಫುಡ್ ಡೈರೆಕ್ಟರ್ ಮತ್ತು ಧಾರವಾಡದ ಜಿಲ್ಲಾಧಿಕಾರಿಗಳು ಮತ್ತು ಮಿಲ್ ಮಾಲೀಕರು ಎಲ್ಲಾ ಸೇರಿ ಒಂದು ಒಪ್ಪಂದವನ್ನು ಮಾಡಿಕೊಂಡಿದ್ದಾರೆ. ಇದರಿಂದ ಸಾರ್ವಜನಿಕರಿಗೆ ಅಧಿಕಾರಿಗಳ ಮೇಲೆ ಒಂದು ರೀತಿಯ ಅನುಮಾನ ಬಂದಿದೆ. ಅಧಿಕಾರಿಗಳು ಮಿಲ್ ಮಾಲಿಕರ ಸಭೆಯಲ್ಲಿ ಹೋಗುವಂತಹ ಅವಶ್ಯಕತೆಯಾದರೂ ಏನು ಎಂದು ನಾನು ಈ ಸಂದರ್ಭದಲ್ಲಿ ಕೇಳಬಯಸುತ್ತೇನೆ.

೫-೫೦ ಪಿ.ಎಂ.

ಅಲ್ಲಿ ನೂರಾರು ಮಿಲ್‌ಗಳಿವೆ, ಅಲ್ಲಿ ಈ ಮಿಲ್ ಮಾಲೀಕರ ಜೊತೆಗೆ ಒಪ್ಪಂದ ಆಗಿದೆ. ಈ ಲೆಕ್ಕದ ಪ್ರಕಾರ ಒಂದೂವರೆ ಲಕ್ಷ ಟನ್ ತಾವು ವಸೂಲು ಮಾಡಬೇಕು ಎಂದು ಒಪ್ಪಂದ ಮಾಡಿಕೊಂಡಿದ್ದೀರಿ. ಆದರೆ ೨೨,೫೦೦ ಕ್ವಿಂಟಾಲಿಗೆ ಒಪ್ಪಂದವಾಗಿದೆ. ಇದನ್ನು ಕೊಟ್ಟ ಮೇಲೆ ಹೆಚ್ಚು ಆದದ್ದನ್ನು ಅವರು ಬೇರೆ ಕಡೆಗೆ ಒಯ್ಯಲಿಕ್ಕೆ ಪರವಾನಗಿ ಕೊಟ್ಟಿದೀರಿ. ಈ ರಾಜ್ಯದಲ್ಲಿ ಮಾರತಕ್ಕಂಥಾದ್ದಕ್ಕೆ ಮತ್ತು ಬೇರೆ ರಾಜ್ಯಕ್ಕೆ ಕೂಡ ಒಯ್ಯಲಿಕ್ಕೆ ಅಪ್ಪಣೆ ಕೊಡಿಸಿದ್ದೀರಿ. ಈ ಒಪ್ಪಂದ ಆಗಿಲ್ಲ ಎಂದು ಹೇಳುವುದಾದರೆ, ನಾವು ನಿಮ್ಮ ಡೆಪ್ಯುಟಿ ಕಮಿಷನರನ್ನು, ಫುಡ್ ಇನ್‌ಸ್ಪೆಕ್ಟರನ್ನು ವಿಚಾರಮಾಡಿ ಕೇಳಿ. ನೀವು ಅಧಿಕಾರಿಗಳಿಗೆ ಒಂದು ಹೇಳುತ್ತೀರಿ, ಸಾರ್ವಜನಿಕರಿಗೆ ಒಂದು ಹೇಳುತ್ತೀರಿ, ಈ ಸಭೆಗೆ ಏಕೆ ಒಂದು ಹೇಳುತ್ತೀರಿ. ಸಭೆ ನಡೆದಂಥ ತಾರೀಖು, ಸ್ಥಳ, ಮತ್ತು ಎಷ್ಟು ವಸೂಲು ಮಾಡಿದ್ದು ಇದೆಲ್ಲಾ ನಿಮ್ಮ ಕಡೆ ಇದೆ. ನಿಮ್ಮ ಡೆಪ್ಯುಟಿ ಕಮಿಷನರ್ ಕಡೆಯಿಂದ ಆ ಸಭೆ ಆಗಿಲ್ಲ ಎಂದು ರಿಪೋರ್ಟ್ ತೆಗೆದುಕೊಳ್ಳಿ. ಏಕೆ ಈ ರೀತಿ ಮೋಸ ಮಾಡುತ್ತಿದ್ದೀರಿ ಎಂದು ನಾನು ಕೇಳುತ್ತಾ ಇದ್ದೇನೆ ಸರ್ಕಾರಕ್ಕೆ ನಾಚಿಕೆ ಬರಬೇಕು. ತಾವು ಅಧಿಕಾರಿಗಳನ್ನು ಬಲಿ ಕೊಡಲಿಕ್ಕೆ ಹೋಗುತ್ತಾ ಇದ್ದೀರಿ.

ಶ್ರೀ ಮಾಣಿಕ್‌ರಾವ್ ಪಾಟೀಲ್.—ಮೀಟಿಂಗ್ ಕರೆದು ಪ್ರೊಕ್ಯೂರ್‌ಮೆಂಟ್ ಸ್ಪೀಡ್‌ಅಪ್ ಮಾಡುವುದಕ್ಕೆ ಸಲಹೆ ಕೊಟ್ಟರೆ ಏನು ನಾಚಿಕೆಪಡುವ ಮಾತು.

SRI S.R. BOMMAI.—This agreement is openly done.

SRI MANIK RAO PATIL —It is not a regimented society we are living in, wherein they want to procure with forces of law. We will have to find out all things to seek cooperation from the mills and the farmers. Simply because some of the officers have called a meeting to gear up the machinery and reach the target, you are attributing motive.

ಶ್ರೀ ಎಸ್.ಆರ್. ಬೊಮ್ಮಾಯಿ.—ಅಧಿಕಾರಿಗಳ ಸಭೆಯನ್ನು ಯಾವಾಗಲೂ ಕರೆಯಬೇಕಾಗುತ್ತದೆ, ಸ್ಪೀಡ್ ಅಪ್ ಮಾಡಬೇಕಾಗುತ್ತದೆ, ಅದನ್ನು ನಾನು ಇಲ್ಲ ಎಂದು ಹೇಳುವುದಿಲ್ಲ. ಈ ಅಗ್ರಿಮೆಂಟ್ ಅನ್ ಅಫಿಷಿಯಲ್ ಮತ್ತು ಓರಲ್ ಅಗ್ರಿಮೆಂಟ್, ಇದರ ಬಗ್ಗೆ ನಾನು ಹೇಳುವುದು. ಇವತ್ತು ಹೊರಗೆ ಹೋಗತಕ್ಕ ಅಕ್ಕಿ ಏನಿದೆ ಅದರ ಬಗ್ಗೆ ಎಷ್ಟು ಪರ್ಮಿಟ್ ಕೊಟ್ಟಿದ್ದೀರಿ ಎನ್ನುವುದರ ಲೆಕ್ಕ ಕೊಡಿ. ಪ್ರತಿನಿತ್ಯ ಶಿವಮೊಗ್ಗ ಜಿಲ್ಲೆಯಿಂದ ಧಾರವಾಡ ಜಿಲ್ಲೆಯಿಂದ, ಬೇರೆ ಬೇರೆ ಬಾರ್ಡರ್‌ನಲ್ಲಿರತಕ್ಕ ಜಿಲ್ಲೆಗಳಿಂದ ಎಷ್ಟು ಟ್ರಕ್‌ಗಳು ಮಹಾರಾಷ್ಟ್ರಕ್ಕೆ ಹೋಗುತ್ತಾ ಇದೆ, ಗೋವಾಕ್ಕೆ ಹೋಗುತ್ತಾ ಇದೆ, ಕೇರಳಕ್ಕೆ ಹೋಗುತ್ತಾ ಇದೆ ಎನ್ನುವ ಲೆಕ್ಕ ಇದೆಯೋ ನಿಮ್ಮ ಹತ್ತಿರ

SRI MANIK RAO PATIL.—We are issuing permit.

ಶ್ರೀ ಎಸ್.ಆರ್. ಬೊಮ್ಮಾಯಿ.—ಎಷ್ಟು ಪರ್ಮಿಟ್ ಇಷ್ಯು ಮಾಡಿದ್ದೀರಿ ಎನ್ನುವ ಲೆಕ್ಕ ಕೇಳುತ್ತೇನೆ. ಒಂದೇ ಪರ್ಮಿಟ್ ತೆಗೆದುಕೊಂಡು, ಆ ಒಂದೇ ಪರ್ಮಿಟ್‌ನಲ್ಲಿ ಒಬ್ಬ ವ್ಯಾಪಾರಿ ೬ ಟ್ರಿಪ್ ೮ ಟ್ರಿಪ್ ಹೊಡೆಯುತ್ತಾ ಇದ್ದಾನೆ 6 times it goes with the same permit. ಒಂದು ಸಲ ಅಕ್ಕಿ ಹೋದರೆ ಒಂದು ಲೋಡಿಗೆ ಅವನಿಗೆ ೬೦೦೦ ರೂಪಾಯಿ ಲಾಭ ಇದೆ. ಅಲ್ಲಿ ಇಲ್ಲಿ ಒಂದು ಸಾವಿರ, ಎರಡು ಸಾವಿರ ಕೊಡುತ್ತಾನೆ. ನೀವು ಮಿಲ್ ಆದಂಥ ಅಕ್ಕಿಯ ಲೆಕ್ಕ ಕೊಡಿ. ಒಂದು ಲಕ್ಷ ಟನ್ ವಸೂಲು ಮಾಡಿದ್ದೀರಿ ಅಂದರೆ ಸರ್ಕಾರ ಯಾವ ದಿಕ್ಕಿನಲ್ಲಿ ನಡೆಯುತ್ತಾ ಇದೆ ಸ್ವಾಮಿ. ೨೦ ಲಕ್ಷ ಟನ್ ಮಿಲ್ ಆಗಿ ಅಕ್ಕಿ ಬರುತ್ತದೆ. ಇದುವರೆಗೆ ೧೦-೧೫ ಲಕ್ಷ ಟನ್ ಅಕ್ಕಿ ಮಿಲ್ ಆಗಿದೆ. ನಿಮ್ಮ ವಸೂಲಿ, ನಿಮ್ಮ ಶೇಖರಣೆ ಎಷ್ಟು ಕಡಿಮೆಯಾಗುತ್ತಾ ಇದೆ. ನೀವು ಹಾನಗಲ್ ತಾಲ್ಲೂಕಿನಲ್ಲಿ ಒಂದೂವರೆ ಲಕ್ಷ ಟನ್ ವಸೂಲು ಮಾಡುವುದು ಬಿಟ್ಟು ೨೨ ಸಾವಿರ ಟನ್‌ಗೆ ಏಕೆ ಒಪ್ಪಿಕೊಂಡಿದ್ದೀರಿ. ಅವರು ಓಪನ್ ಆಗಿ ಹೇಳಿದ್ದಾರೆ, ಇಲ್ಲ ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಈ ತಿಳುವಳಿಕೆಯನ್ನು ಮಿಲ್‌ನವರಿಗೆ ಕೊಟ್ಟಿದ್ದೀರಿ. ಈ ಪ್ರಕಾರ ಅವರು ತಮಗೆ ಕೊಟ್ಟಿದ್ದಾರೆ ಉಳಿದಿದ್ದನ್ನು ಮಾರಾಟ ಮಾಡುತ್ತಾ ಇದ್ದಾರೆ, ಮತ್ತು ಬೇರೆ ರಾಜ್ಯಕ್ಕೆ ಕಳಿಸುತ್ತಾ ಇದ್ದಾರೆ. ನಾನು ಈ ಸಂದರ್ಭದಲ್ಲಿ ಈ ಸರ್ಕಾರದ ಮೇಲೆ ಮತ್ತು ಈ ಮಂತ್ರಿಗಳ

ಮೇಲೆ ಇನ್ನೊಂದು ಆಪಾದನೆಯನ್ನು ಬಹಳ ಜವಾಬ್ದಾರಿಯಿಂದ ಮಾಡುತ್ತಾ ಇದ್ದೇನೆ. ಏನೆಂದರೆ, ಈ ಮಿಲ್‌ನಲ್ಲಿ ಕಡಿಮೆ ಕೊಡತಕ್ಕಂಥಾದ್ದಕ್ಕೆ ಒಪ್ಪಂದ ಮಾಡಿಕೊಳ್ಳಲಿಕ್ಕೆ ಕಾರಣವೇನೆಂದರೆ, ಪ್ರತಿಯೊಂದು ಮಿಲ್‌ನಿಂದ ಆ ಮಿಲ್ಲಿನ ಒಂದು ಉತ್ಪಾದನಾ ಶಕ್ತಿಯ ಮೇಲೆ ಸರ್ಕಾರಕ್ಕೆ ಕೂಡ ಇಷ್ಟು ಹಣ ಕೊಡತಕ್ಕಂಥಾದ್ದು ಎಂದು ಮಾತಾಗಿದೆ.

SRI MANIK RAO PATIL.—Don't be irresponsible. If you have got guts, you tell this outside. There must be some limit for it. Just because you have got a privilege to speak anything here, don't go on levelling such allegation.

## INTERRUPTIONS

By virtue of having the privilege of being a member, it does not mean you can do character assassination. You speak this outside the House I will see in the Court of Law what is going to happen. Don't think we people care of footpath. We are also having social status......

MR. SPEAKER.—Let us not take it personally.

SRI MANIK RAO PATIL.—Why should he make personal allegation against me ? Are we going to Mill Owners ? We have got better jobs to do.

MR. SPEAKER.—The right of reply is there for you.

SRI MANIK RAO PATIL.—I was promptly listening to what the hon. member was saying. He said that some officers have called a meeting with the understanding of the Mills to fix up the quota. I have no objection I will reply to it. But he goes on making allegation without any foundation......

MR. SPEAKER.—If there are any personal allegations, you have got the right of reply but don't get yourself excited.

ಶ್ರೀ ಡಿ. ದೇವರಾಜ ಅರಸ್.—ಅಷ್ಟೇ ಅಲ್ಲ, ತಾವು ಮಾನ್ಯ ಮಂತ್ರಿಗಳಿಗೆ ಸರಿಯಾಗಿ ಒಂದು ತಿಳುವಳಿಕೆ ಕೊಡಬೇಕಾಗುತ್ತದೆ. ಈಗ ಸದಸ್ಯರು ಮಂತ್ರಿಗಳ ಮೇಲೆ ಒಂದು ಚಾರ್ಜ್ ಮಾಡಿದ್ದಾರೆ, ಅವರು ಇದರ ಪಾಲು ತೆಗೆದುಕೊಳ್ಳುತ್ತಾ ಇದ್ದಾರೆ. ಇವರು ಮಿಲ್ ಮಾಲೀಕರು ಒಂದಾಗಿದ್ದಾರೆ. ಅದಕ್ಕೆ ಆಧಾರ ಕೊಡುತ್ತೇನೆ ಎಂದು ಹೇಳಿದರು. ಮಿಲ್ ಮಾಲೀಕರಿಗೆ ಹೊರಗಡೆ ತೆಗೆದುಕೊಂಡು ಹೋಗುವುದಕ್ಕೆ ಪರ್ಮಿಟ್ ಇಷ್ಯೂ ಮಾಡುತ್ತಾ ಇದ್ದಾರೆ, ಬೆಂಗಳೂರಿಗೆ ತರುವುದಕ್ಕೆ ಇಷ್ಯೂ ಮಾಡುತ್ತಾ ಇದ್ದಾರೆ ಎನ್ನುವುದು ಜನಜನಿತವಾಗಿ ಗೊತ್ತಿರುವ ಮಾತು. ಒಂದು ಪರ್ಮಿಟ್‌ನಲ್ಲಿ ನಾಲ್ಕೈದಾರು ಟ್ರಿಪ್ಪುಗಳನ್ನು ಮಾಡುತ್ತಾ ಇರತಕ್ಕಂಥಾದ್ದನ್ನು ನಾನು ಎಲ್ಲಿಗೆ ಬೇಕಾದರೂ ಕರೆದು ಕೊಂಡು ಹೋಗುತ್ತೇನೆ, ಬೇಕಾದರೆ ತೋರಿಸಿಕೊಡಿ ಎಂದು ತೋರಿಸಿಕೊಡುತ್ತೇನೆ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ ಅವರಿಗೆ ಗೊತ್ತಿರುವ ರೀತಿಯಲ್ಲಿ ಇವರಿಂದ ಇಷ್ಟಿಷ್ಟು ಹಣ ವಸೂಲುವಾಡ ಲಾಗಿದೆ, ಸರ್ಕಾರಕ್ಕೂ ಹೋಗುತ್ತಾ ಇದೆ ಮಂತ್ರಿಗಳಿಗೂ ಹೋಗುತ್ತಾ ಇದೆ ಎಂದು ನನಗೆ ಗೊತ್ತಿದೆ ಯೆಂದು ಹೇಳುತ್ತಿದ್ದಾರೆ. ಮಂತ್ರಿಗಳಿಗೆ ಅದು ಸರಿಯಿಲ್ಲ ಎನ್ನುವುದಾದರೆ ಆ ಚಾರ್ಜನ್ನು ರೆಫ್ಯೂಟ್ ಮಾಡುವುದಕ್ಕೆ ಅವಕಾಶವಿದೆ. ಆದರೆ ಇವರು ಹುಲಿ ಮೈಮೇಲೆ ಬಿದ್ದಹಾಗೆ ಏಕ್‌ದಂ ಏಕೆ ಬೀಳುತ್ತಿದ್ದಾರೆ, ಅದು ಸರಿಯಲ್ಲ. He may be young and energetic. Being a Minister you have to take all this.

ಶ್ರೀ ಮಾಣಿಕ್ ರಾವ್ ಪಾಟೀಲ್.—ಮಂತ್ರಿ ಹೋಗಿ ಮಿಲ್‌ನಿಂದ ಕಲೆಕ್ಟ್ ಮಾಡುತ್ತಾರೆ. ಅಂದರೆ ಏನು ಸ್ವಾಮಿ. You are also a seasoned Parliamentarian for the last 20 years now. I don't deny your privileges. But there must be some limit.

ಶ್ರೀ ಡಿ. ದೇವರಾಜ ಅರಸ್.—ನನ್ನನ್ನೇ ನೀವು ಎಗ್ಸಾಂಪಲ್ ಕ್ಟೋಟ್ ಮಾಡುವುದಾದರೆ, ನನ್ನ ಮೇಲೆ ಮಾಡಿರುವ ಚಾರ್ಜ್ ೮ ವರ್ಷಗಳಿಂದ ಎಷ್ಟೆಷ್ಟಿವೆ ಎನ್ನುವುದು ಮಾನ್ಯ ಅಧ್ಯಕ್ಷರಿಗೆ ಗೊತ್ತಿದೆ. ಸ್ವಲ್ಪ ಹಳಬರಾಗಿರುವವರಿಗೆ ಗೊತ್ತಿದೆ. ನಿಮಗೂ ಗೊತ್ತಿರುವುದೇನೋ ನನಗೆ ಗೊತ್ತಿಲ್ಲ. ಆದರೂ ನಿಮ್ಮ ಹಾಗೆ ನಾನು ಯಾರ ಮೇಲೂ ಬೀಳುವುದಕ್ಕೆ ಹೋಗಲಿಲ್ಲ. ದಯಮಾಡಿ ನನ್ನನ್ನೇ ನೀವು ಅನುಸರಿಸುವುದಾದರೆ, ನೀವು ಯುವಕರಿದ್ದೀರಿ, ಸಂತೋಷ. ಇದನ್ನು ಸಮಾಧಾನವಾಗಿ ತೆಗೆದುಕೊಂಡು ಮಾತನಾಡಿ. ನಾನು ರೆಫ್ಯೂಟ್ ಮಾಡುತ್ತೇನೆ, ನೀವು ಪ್ರೂವ್ ಮಾಡಿ ಎಂದು ಕೇಳಿ ಏನಂತೆ. ಒಂದು ವೇಳೆ ಅವರು ಪ್ರೂವ್ ಮಾಡಲಿಲ್ಲ ಅಂದರೆ ಅವರ ಮಾತು ತಪ್ಪಾಯಿತು, ಪ್ರೂವ್ ಮಾಡುತ್ತೇನೆಂದು ಅವರು ಹೇಳಿದರೆ ನಿಮ್ಮ ಮೇಲೆ ಜವಾಬ್ದಾರಿ ಆಯಿತು. ಅದಕ್ಕೆ ಕೋಪ ಏಕೆ ಮಾಡಿಕೊಳ್ಳುತ್ತೀರಿ. ನೀವು ಹೀಗೆ ಕೋಪ ಮಾಡಿಕೊಂಡು ಹೋದರೆ ಏನೋ ಇದೆ ಎಂದು ಇನ್ನೂ ಅನುಮಾನ ಬರುತ್ತದೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ಮಂತ್ರಿಗಳು ಇರ್ರೆಸ್ಪಾನ್ಸಿಬಲ್ ಆಗಿ ನನಗೆ ಹೇಳಿದರು.

MR. SPEAKER.—Please substantiate your charges if you have.

ಶ್ರೀ ಎಸ್.ಆರ್. ಬೊಮ್ಮಾಯಿ.—ಅಲ್ಲ. ಅವರು ಈ ಮಾತನ್ನು ಹೇಳಿದ್ದಾರೆ, ನಾನು ಹೇಳುವುದಲ್ಲ. ವೈಯುಕ್ತಿಕವಾಗಿ, ಸ್ಪಷ್ಟವಾಗಿ ನಿಮಗೆ ತಿಳಿಸಬಯಸುತ್ತೇನೆ. ಮಾನ್ಯ ಮಾಣಿಕರಾವ್ ಪಾಟೀಲರ ಬಗ್ಗೆ ಆಗಲಿ, ಅವರ ಶ್ರೀಮಂತಿಕೆ ಬಗ್ಗೆ ಆಗಲಿ ನನಗೆ ಗೊತ್ತಿದೆ. ಅವರು ಒಂದು ದೊಡ್ಡ ಮನೆತನದಿಂದ ಬಂದವರು, ರಾಜಕಾರಿಣಿಯಾದವರು, ಸಮಾಜಸೇವೆ ಮಾಡುವುದಕ್ಕೆ ಬಂದವರು. ಇವತ್ತು ಅವರ ಬಗ್ಗೆ ನಾನು ವೈಯುಕ್ತಿಕವಾಗಿ ಟೀಕೆ ಮಾಡುತ್ತಾ ಇಲ್ಲ. Not as Mr Manik Rao patil, but as a Minister, ಟೀಕೆ ಮಾಡುತ್ತಿದ್ದೇನೆ. ಅದರಲ್ಲಿ ತಪ್ಪಿದ್ದರೆ ವಾಪಸ್ ತೆಗೆದುಕೊಳ್ಳಲಿಕ್ಕೆ ನಾನು ತಯಾರಿದ್ದೇನೆ. ನಾನೂ ಸ್ವಲ್ಪ ದಿವಸ ಶಾಸಕನಾಗಿದ್ದೇನೆ. ನಾನೂ ಒಂದು ಮನೆತನದಿಂದ ಬಂದಿದ್ದೇನೆ, ನನಗೂ ಅರ್ಧ ಮಣ ಆಸ್ತಿ ಇದೆ, ನಾನು ವಕೀಲಿ ವೃತ್ತಿ ಮಾಡಿದ್ದೇನೆ. ಇದರಲ್ಲಿ ಶ್ರೀಮಂತಿಕೆ ಮಾತಲ್ಲ.

ಶ್ರೀಮಂತರಾಗಿದ್ದರೆ ಭ್ರಷ್ಟರಾಗುವುದಿಲ್ಲ ಬಡವರಾಗಿದ್ದರೆ ಭ್ರಷ್ಟರಾಗುವುದಿಲ್ಲವೆಂದು ಏನೂ ಇಲ್ಲ, ಅದಕ್ಕೆ ಜಾತಿ, ಅಂತಸ್ತು ಏನೂ ಇಲ್ಲ. ಅದು ಬೇರೆ ವಿಚಾರ. ನಾನು ಹೇಳುವುದನ್ನು ತಾವು ಸ್ವಲ್ಪ ದಯವಿಟ್ಟು ಕೇಳಿ. ನಾನು ಇಲ್ಲಿ ಹೇಳುವಾಗ ಜವಾಬ್ದಾರಿಯಿಂದಲೇ ಹೇಳುತ್ತಿದ್ದೇನೆ. ಇವತ್ತು ಹಣ ಸರ್ಕಾರಕ್ಕೆ, ಮಂತ್ರಿಗಳ ಪಕ್ಷಕ್ಕೆ ಕೊಡತಕ್ಕ ರೀತಿಯಲ್ಲಿ ಕಲಕ್ಷನ್ ಆಗುತ್ತಿದೆ. ಅದು ನಿಮಗೆ ಮುಟ್ಟಿದೆಯೊ ಇಲ್ಲವೋ ಗೊತ್ತಿಲ್ಲ ಈ ಆಪಾದನೆಗಳನ್ನು ಮಾಡುವಾಗ ನಾನು ಅದನ್ನು ಸಿದ್ಧ ಮಾಡುವುದಕ್ಕೆ ತಯಾರಿದ್ದೇನೆ. ಪ್ರತಿಯೊಂದು ಮಿಲ್ ಮಾಲೀಕರಿಂದಲೂ ಹಣ ಶೇಖರಣೆ ಮಾಡಿದ್ದಾರೆ......

ಶ್ರೀ ಜಿ. ಬಿ. ಶಂಕರ್ ರಾವ್.—ಯಾರು ಯಾರೋ ಹೇಳಿದ್ದನ್ನು ನೀವು ಏತಕ್ಕೆ ಕೇಳುತ್ತೀರಾ?

ಶ್ರೀ ಎಸ್.ಆರ್. ಬೊಮ್ಮಾಯಿ.—ಇದು ಒಂದು ಹೊಸ ರೀತಿಯಲ್ಲಿ ನಡೆದಿದೆ. ಇದನ್ನು ತಡೆಗಟ್ಟಬೇಕಾಗುತ್ತದೆ. ನಿಮ್ಮ ಶಿಕ್ಷಣ ಕ್ಷೇತ್ರದಲ್ಲಿ ಸೀಟುಕೊಡುವುದಕ್ಕೆ ಇಷ್ಟು ದುಡ್ಡು, ಭತ್ತಕ್ಕೆ ಪರ್ಮಿಟ್ ಕೊಡುವಾಗ ಇಷ್ಟು ದುಡ್ಡು, ಸೀಮೆಂಟ್‌ಗೆ ಪರ್ಮಿಟ್ ಕೊಡುವಾಗ ದುಡ್ಡು, ಅದು ಬೇರೆ ವಿಚಾರ ಅದರ ಬಗ್ಗೆ ಆ ಮೇಲೆ ವಿಚಾರ ಮಾಡೋಣ. ಅಧ್ಯಕ್ಷರೇ, ನಾನು ಈ ಮಾತನ್ನು ಹೇಳುವಾಗ ಬಹಳ ಜವಾಬ್ದಾರಿಯಿಂದ ಹೇಳುತ್ತಿದ್ದೇನೆ. ಸ್ವಾಮಿ, ಈಗಾಗಲೇ ಈ ರೀತಿ ಹಣ ಶೇಖರಣೆ ಮಾಡಿ ಪರ್ಮಿಟ್‌ನ್ನು ಕೊಡುತ್ತಿದ್ದಾರೆ. ೧ ಲಕ್ಷದಷ್ಟು ಖರ್ಚು ಮಾಡಿ ಶೇಖರಣೆ ಮಾಡುವುದಕ್ಕೆ ಕಾರಣವೇನು? ರಾಜ್ಯದಲ್ಲಿ ಇದುವರೆಗೂ ಎಷ್ಟು ಅಕ್ಕಿ ಮಿಲ್‌ನಿಂದ ಹೊರಗೆ ಬಂದಿದೆ? ಅದರ ಲೆಕ್ಕ ಕೊಡಿ. ಆದುದರಿಂದ ನೀವು ಲೀಗಲ್ ಆಗಿ ಪರ್ಮಿಟ್ ಎಷ್ಟು ಕೊಟ್ಟಿದ್ದೀರಿ? ಅದರ ಲೆಕ್ಕ ಕೊಡಿ ಎರಡನ್ನೂ ಕೂಡಿಸಿದರೆ ಗೊತ್ತಾಗುತ್ತದೆ. ಈ ರಾಜ್ಯದಲ್ಲಿ ಇದುವರೆಗೂ ಮಿಲ್‌ನಿಂದ ಆದಂಥ ಅಕ್ಕಿ ಎಷ್ಟು? ಸರ್ಕಾರ ಶೇಖರಣೆ ಮಾಡಿದ್ದು ಎಷ್ಟು? ಪರ್ಮಿಟ್ ಕೊಟ್ಟಿದ್ದು ಎಷ್ಟು? ಉಳಿದದ್ದು ಎಲ್ಲಿ ಹೋಯಿತು? ಎಲ್ಲಿಗಾದರೂ ಹೋಗಬೇಕಲ್ಲ ಅದು ಹೋಗಬೇಕಾದರೆ ೫೦ ಪರ್ಸೆಂಟ್ ಕೊಟ್ಟೇ ಹೋಗಬೇಕಾಗುತ್ತದೆ.

ಈ ರೀತಿಯಾಗಿ ಕಳ್ಳ ರೀತಿಯಿಂದ ಹಣ ಶೇಖರಣೆಯಾಗುತ್ತಿದೆ. ಬನ್ನಿ ಸ್ವಾಮಿ ನನ್ನ ಜೊತೆಗೆ, ನಾನು ಹೇಳಿದಲ್ಲಿ ಕೂತುಕೊಂಡು ನೋಡೋಣ. ಪ್ರತಿ ರಾತ್ರಿ ಶಿವಮೊಗ್ಗದಿಂದ ಎಷ್ಟೆಷ್ಟು ಲೋಡ್ ಕೇರಳಕ್ಕೆ ಹೋಗುತ್ತಿದೆ ಎಂಬುದನ್ನು ಲೆಕ್ಕ ಹಾಕಿ ಆ ಮೇಲೆ ನಿಮಗೇ ಗೊತ್ತಾಗುತ್ತದೆ. ಆದಕ್ಕೇ ಸ್ವಾಮಿ, ನಾನು ಹೇಳುತ್ತಿರುವುದು ನಾನು ಈ ಆಪಾದನೆಗಳನ್ನು ಮಾಡುವಾಗ ಅದನ್ನು ಪ್ರೂವ್ ಮಾಡುವುದಕ್ಕೂ ಸಿದ್ಧ ನಿದ್ದೇನೆ ಆದಕ್ಕಾಗಿ ನಿಮ್ಮ ಪಕ್ಷದವರ ಶಾಸಕರ ಸಮಿತಿಯನ್ನು ಮಾಡಿ ಆ ಸಮಿತಿಯ ಮುಂದೆ ನಾವು ಸಾಕ್ಷಿ ಪುರಾವೆಗಳನ್ನು ಒದಗಿಸುವುದಕ್ಕೆ ಸಿದ್ಧನಿದ್ದೇನೆ. ಸಿದ್ಧ ಮಾಡಿದರೆ ಅವರು ಏನು ಕ್ರಮತೆಗೆದುಕೊಳ್ಳುತ್ತಾರೋ ತೆಗೆದುಕೊಳ್ಳಲಿ, ನಾನು ಸಿದ್ಧ ಮಾಡದಿದ್ದರೆ ರಾಜೀನಾಮೆ ಕೊಟ್ಟು ಸಾರ್ವಜನಿಕ ಜೀವನದಿಂದ ನಿವೃತ್ತಿಯಾಗುತ್ತೇನೆ. ಕೆಲವರು ಪುಸ್ತಕದಲ್ಲಿ ಖರ್ಚು ಹಾಕಿದ್ದಾರೆ.

ಶ್ರೀ ಮಾಣಿಕ್ ರಾವ್ ಪಾಟೀಲ್.--ಶ್ರೀ ಬೊಮ್ಮಾಯಿ‌ರವರಿಗೆ ೧ ಸಾವಿರ ಕೊಟ್ಟಿದ್ದೇನೆಂದು ಲೆಕ್ಕ ಹಾಕಿ ಬಿಟ್ಟರೆ...... does it mean that you have accepted the money?

ಶ್ರೀ ಎಸ್. ಆರ್. ಬೊಮ್ಮಾಯಿ.---ಅದು ಕೊಟ್ಟಿದರೆ ಖರ್ಚು ಹಾಕಿರುತ್ತಾರೆ ಅದು ಸರಿಯೋ ತಪ್ಪೋ ಎಂದು ಈಗ ಹೇಳುವುದಕ್ಕಾಗುವುದಿಲ್ಲ... ಅದಕ್ಕೆ ಒಂದು ಸಮಿತಿಯನ್ನು ನೇಮಕ ಮಾಡಿ ಅದರ ಮುಂದೆ ನಾನು ಎಲ್ಲಾ ಸಾಕ್ಷಿ ಪುರಾವೆಗಳನ್ನು ಒದಗಿಸುತ್ತೇನೆ. ಅದಕ್ಕೆ ಬೇಕಾದರೆ ಮಂತ್ರಿಗಳವರು ಒಪ್ಪಿಗೆ ಕೊಟ್ಟರೆ ನಾನು ಸಿದ್ಧನಿದ್ದೇನೆ. ನಾನು ಬೇಜವಾಬ್ದಾರಿಯಿಂದ ಹೇಳುವುದಿಲ್ಲ, ಏನು ಹೇಳಬೇಕು ಬಿಡಬೇಕು ಎನ್ನುವ ಬಗ್ಗೆ ನಮಗೂ ಅಷ್ಟೇ ಜವಾಬ್ದಾರಿ ಇದೆ. ಇವತ್ತು ರಾಜ್ಯದಲ್ಲಿ ಈ ಪದ್ಧತಿಯಿಂದ ಕಳ್ಳಪೇಟೆ ಕದೀಮರಿಗೆ ಸರ್ಕಾರ ಸರಕಾಗಿದೆ. ಅವರ ಜೊತೆಯಲ್ಲಿ ಸಹಕಾರ ನೀಡುತ್ತಿದ್ದಾರೆಂದು ಹೇಳುತ್ತಿದ್ದಾರೆ, ಅಧಿಕಾರಿಗಳೂ ಸಹ ಸಹಕಾರ ನೀಡುತ್ತಿದ್ದಾರೆ ಎಂದು ಹೇಳುತ್ತಿದ್ದಾರೆ. ಹೀಗಾಗಿ ಇವತ್ತು ರೈತ ಬೆಳೆದ ಬೆಳೆಗೆ ಸರಿಯಾದ ಬೆಲೆಯೇ ಸಿಕ್ಕಿಲ್ಲ, ಇದರ ಬಗ್ಗೆ ಮಾನ್ಯ ಶ್ರೀ ಅರಸ್ ರವರ ಹೇಳಿದರು. ಅವನು ಕೈಗೆ ಬಂದ ಹಾಗೆ ಮಾರಾಟ ಮಾಡಿ ಬಿಟ್ಟ. ಕ್ವಿಂಟಾಲ್‌ಗೆ ೧೩೦, ೧೨೫,೧೪೦ ಹೀಗೆ ಇನ್ನು ಕೆಲವರಿಗೆ ೧೨೦, ೧೩೦ ರೂ.ಗಳು ಮಾತ್ರ ಸಿಕ್ಕಿದೆ. ಆದರೆ ಇವತ್ತು ಶ್ರೀಮಂತ ರೈತರು ಯಾರಿದ್ದಾರೆ ಅವರೂ ಇನ್ನೂ ಮಾರಿಕೊಂಡಿಲ್ಲ ಹಾಗೆಯೇ ಇಟ್ಟುಕೊಂಡಿದ್ದಾರೆ ಅವರು ಬಹಳ ಬುದ್ಧಿವಂತರು, ಇವತ್ತು ಸರ್ಕಾರದ ಸಡಿಲಿಕೆಯ ನೀತಿಯಿಂದಾಗಿ ಅವರಿಗೆ ಹೆಚ್ಚಿನ ಲಾಭವಾಗುತ್ತಿದೆ. ಬಡವರೆಲ್ಲಾ ಸತ್ತು ಹೋದರು, ಈ ನೀತಿ ಏತಕ್ಕೆ ಅನುಸರಿಸುತ್ತಿದ್ದೀರಿ? ಇದರಿಂದ ಏನು ಲಾಭವಾಗಿದೆ? ನೀವು ಇನ್ನೂ ೫ ಲಕ್ಷ ಟನ್ ವಸೂಲಿ ಮಾಡಿ ಬೆಂಗಳೂರು ನಗರದ ಜನತೆಗೆ ಮತ್ತು ಹುಬ್ಬಳ್ಳಿ ಧಾರವಾಡದ ಜನತೆಗೆ ಕಡಿಮೆ ಬೆಲೆಯಲ್ಲಿ ಅಕ್ಕಿಯನ್ನು ಕೊಟ್ಟಿದ್ದರೆ ನಮಗೆ ಬಹಳ ಸಂತೋಷವಾಗುತ್ತಿತ್ತು, ಆಗ ಖಂಡಿತವಾಗಿಯೂ ನಿಮ್ಮ ಕಾರ್ಯವನ್ನು ನಾವು ಸ್ವಾಗತ ಮಾಡುತ್ತಿದ್ದೆವು. ಆದರೆ ಇವತ್ತು ನಿಮ್ಮ ನೀತಿಯಿಂದಾಗಿ ಮಿಲ್ ಮಾಲೀಕರು ರಾತ್ರಿ ಹಗಲು ಮಿಲ್ ಮಾಡಿದರು, ಪವರ್ ಕನ್‌ಸಂಪ್‌ಷನ್ ಇದ್ದರೂ ಅವರಿಗೆ ಅದು ಏನೂ ಅಪ್ಲೈ ಆಗಲಿಲ್ಲ, ಪೋಲೀಸಿನವರಿದ್ದರೂ ಅದರಿಂದ ಅವರಿಗೇನೂ ತೊಂದರೆಯಾಗಲಿಲ್ಲ, ಅವರು ಮಿಲ್ ಮಾಡಿ ಮಾರಾಟ ಮಾಡಿಕೊಳ್ಳುತ್ತಿದ್ದಾರೆ. ಇವತ್ತು ಯಾರೇ ಅಧಿಕಾರಿಕ್ಕೆ ಬರಲಿ. ಈ ವಿಚಾರದಲ್ಲಿ ನಿಷ್ಪಕ್ಷಪಾತವಾಗಿ ವ್ಯವಹಾರವನ್ನು ನಡೆಸುವುದರಲ್ಲಿ ಅಧಿಕಾರಿಗಳಲ್ಲಿಯಾಗಲೀ ಇಲ್ಲವೇ, ರಾಜಕಾರಣಿಗಳಲ್ಲಿಯಾಗಲೀ ಇಲ್ಲವೇ ಮಾಲೀಕರುಗಳಲ್ಲಿಯಾಗಲೀ ಇಲ್ಲವೆಂದು ಹೇಳುತ್ತೇನೆ. ಇದು ನಡೆಯುತ್ತಲೇ ಇದೆ. ಇವತ್ತು ಏನು ಅಗ್ರಿಮೆಂಟ್ ಆಗಿದೆ ಅದು ಇಡೀ ರಾಜ್ಯದ್ಯಾಂತ ಅನ್ವಯಿಸುವ ಹಾಗ ಆಗಿದೆ ಅದಕ್ಕಾಗಿ ಸಭೆಗಳನ್ನು ಕರೆದಿದ್ದಾರೆ, It is a clandestine understanding between the Government and the mill-owners ..... ಆಫೀಸರ್ಸ್, ಡೆಪ್ಯುಟಿ ಕಮೀಷನರ್‌ಗಳು, ಫುಡ್ ಡೈರೆಕ್ಟರ್‌ಗಳು ಎಲ್ಲರನ್ನೂ ಕರೆಸಿ ಮೀಟಿಂಗ್ ಮಾಡಿದಾರೆ ಇದು ಎಲ್ಲಾ ಕಡೆಗೂ ಆಗಿದೆ. ನೀವು ಸಭೆಗಳನ್ನು ಮಾಡಿದ್ದು ಸರಿ ತಪ್ಪು ಎಂದು ಹೇಳುವುದಿಲ್ಲ ಆದರೆ ಈ ಮಿತಿಯಾಗಿ ಮೀಟಿಂಗ್ ಮಾಡಿ ಇವತ್ತು ಅಧಿಕಾರಿಗಳ ಕೈಯನ್ನು ಏತಕ್ಕೆ ಕಟ್ಟಿ ಹಾಕುತ್ತಿದ್ದೀರಿ, ಇದರಲ್ಲಿ ಅಧಿಕಾರಿಗಳೊಂದಿಗೆ ಏನೋ ತಿಳಿವಳಿಕೆ ಮಾಡಿಕೊಂಡಿದ್ದೀರಿ ಎಂದು. ಗೊತ್ತಾಗತ್ತದೆ. ನಾನು ಕೂಡ ಎಂ.ಎಲ್.ಎ. ಆಗಿ ೧೦-೧೫ ವರ್ಷಗಳಿಂದ ಇರುವುದರಿಂದ ನನಗೂ ಅನುಭವ ಇದೆ, ಈ ಪದ್ಧತಿಯಂತೆ ಹಿಂದೆ ಡೆಪ್ಯುಟಿ ಕಮೀಷನರ್‌ರವರು ಮಿಲ್ ಮಾಲೀಕರನ್ನು ಮತ್ತು ರೈತರ ಪ್ರತಿನಿಧಿಗಳನ್ನು ಕರೆದು ಸಭೆಗಳನ್ನು ನಡೆಸಿದ್ದೇವೆ. ರೈತರಿಂದ ಎಷ್ಟು ಲೆವಿಯನ್ನು ವಸೂಲಿ ಮಾಡಬೇಕು ಬಿಡಬೇಕು ಎನ್ನುವಬಗ್ಗೆ ಸಭೆಗಳನ್ನು ನಡೆಸಬೇಕಾಗುತ್ತದೆ ಇಲ್ಲವೆಂದು ಅಲ್ಲ ಹಿಂದೆ ನಾವು ಕೂಡ ಇದೇ ರೀತಿ ಮಿಲ್ ಮಾಲೀಕರೊಂದಿಗೆ ಒಂದು ತಿಳುವಳಿಕೆಗೆ ಮಾಡಿಕೊಂಡೆವು ಅದರಂತೆ ಆಗ ಆಯಿತು. ಆದುದರಿಂದ ಒಂದೊಂದು ಸಾರಿ ಎಷ್ಟು

ಅವಶ್ಯಕವಾಗಿ ವಸೂಲಿ ಮಾಡಬೇಕು ಎನ್ನುವ ಬಗ್ಗೆ ಒಪ್ಪಂದ ಮಾಡಿಕೊಳ್ಳಬೇಕಾಗುತ್ತದೆ ಅದು ಸೂಕ್ತ ಇಲ್ಲವೆಂದು ಹೇಳುವುದಿಲ್ಲ. ಆದರೆ ಇದರಲ್ಲಿ ಏನಾಯಿತು ಎಂದರೆ ಸರ್ಕಾರ ಮಿಲ್ ಪಾಯಿಂಟ್‌ನಿಂದ ವಸೂಲಿ ಮಾಡದೇ ಓಪನ್ ಮಾರ್ಕೆಟ್ ನಿಂದ ಖರೀದಿ ಮಾಡಿದರು ಎಂದು ಇಟ್ಟುಕೊಳ್ಳಿ, ಇವತ್ತು ಫೈನ್ ರೈಸ್ ಟನ್ನಿಗೆ ೨೦೭ ರೂಪಾಯಿ ಇದೆ, ಕೋರ್ಸ್ ಅಕ್ಕಿ ೧೯೪–೧೯೮ ರೂ.ಗಳು ಇದೆ ನೀವು ಓಪನ್ ಮಾರ್ಕೆಟ್‌ನಲ್ಲಿ ಖರೀದಿ ಮಾಡಿ......

MR. SPEAKER.—Now, it is 6.05 p.m.

SRI S.R BOMMAI.—I am concluding. This being a very important subject I am speaking...... ೨ ಲಕ್ಷ ಟನ್ ಅಕ್ಕಿಗೆ ೩ ಕೋಟಿಗಿಂತ ಹೆಚ್ಚಿಗೆ ಕೊಡಬೇಕಾಗುತ್ತದೆ. ೩–೪ ತಿಂಗಳ ಹಿಂದೆ ಅಕ್ಕಿ ರೇಟ್ ಏನಿತ್ತು ಅದರ ಪ್ರಕಾರ ಕೊಂಡು ಕೊಂಡಿದ್ದರೆ ಹೆಚ್ಚಿಗೆ ಕೊಟ್ಟು ಕೊಳ್ಳಬೇಕಾದ ಅವಶ್ಯಕತೆ ಇರುತ್ತಿರಲಿಲ್ಲ. ೨೦೦ ರೂ. ಬೆಲೆ ಬಾಳುವಂಥಾದ್ದಕ್ಕೆ ೨೧೦–೨೨೦ ರೂ. ಕೊಟ್ಟಿದ್ದೀರಿ ಇದರಿಂದ ಚಿಕ್ಕ ರೈತರಿಗೆ ೩೦ ಕೋಟಿ ಅನ್ಯಾಯವಾಗಿದೆ. ಕಡಿಮೆ ಬೆಲೆ ರೈತರು ಮಾರಿಕೊಂಡಿರುವುದರಿಂದ ಅವರು ಒಟ್ಟು ೩೦ ಕೋಟಿ ಕಳೆದುಕೊಂಡಿದ್ದಾರೆ ಇವತ್ತು ಅದು ಸರ್ಕಾರಕ್ಕೂ ಬಂದಿಲ್ಲ—ಆದುದರಿಂದ ಇದು ಯಾವ ನೀತಿ ಸ್ವಾಮಿ? ಇದು ಯಾವ ನೀತಿ ಎಂದು ಕೇಳುತ್ತೇನೆ? ಇನ್ನೊಂದು ಸ್ವಾಮಿ, ಇವತ್ತು ನೀವು ಬೆಂಗಳೂರಿನಲ್ಲಿ ಅಕ್ಕಿ ಮಾರಾಟ ಮಾಡುತ್ತಿರುವುದು ನಿಮ್ಮ ಲೆವಿ ಪ್ರೈಜ್ ಏನಿದೆ ಫೈನ್ ರೈಸ್ ೩ ರೂ. ೭ ಪೈಸೆ ಕೋರ್ಸ್ ಅಕ್ಕಿ ೨ ರೂ. ೪೦ ಪೈಸೆ ಇದೆ ತಾವು ಖರೀದಿ ಮಾಡಿರುವುದು ಕೋರ್ಸ್ ಅಕ್ಕಿ ೧.೯೪, ೧.೯೮ ಫೈನ್ ರೈಸ್ ೨ ರೂ. ೨೦ ಪೈಸೆ ಇದೆ. ಮಾರಾಟ ಮಾಡುವುದು ೩–೦೭ ಪೈಸೆ ಅಂದರೆ ಒಂದು ಕೆ.ಜಿ.ಗೆ ನಿಮ್ಮ ಲಾಭ ಒಂದು ರೂಪಾಯಿ. ಒಂದು ಕ್ವಿಂಟಾಲಿಗೆ ೧೦೦ ರೂಪಾಯಿ ಲಾಭ. ಸರ್ಕಾರ ಲೆವಿ ಪದ್ಧತಿಯನ್ನು ತಂದದ್ದು ಏತಕ್ಕೆ? ಗ್ರಾಹಕರೇನಿದ್ದಾರೆ ಅವರಿಗೆ ಯೋಗ್ಯ ಬೆಲೆಗೆ ಮಾರಾಟ ಮಾಡುವುದಕ್ಕೆ. ನೀವು ವಸೂಲ್ಮಾಡುವ ಲೆವಿ ಬತ್ತದ ಜೊತೆಗೆ ನಿಮಗೆ ಕೇಂದ್ರದಿಂದ ಕೂಡ ಅಕ್ಕಿ ಬರುತ್ತದೆ, ಅದು ಸಹ ಕಡಿಮೆ ದರದಲ್ಲಿ ಬರುತ್ತದೆ ರಾಜ್ಯಕ್ಕೆ ಬರತಕ್ಕ ಅಕ್ಕಿ ಬೆಲೆಯನ್ನು ಲೆಕ್ಕಾಚಾರ ಹಾಕಿದರೆ ಬೆಂಗಳೂರು ಮತ್ತು ಬೇರೆ ಬೇರೆ ನಗರಗಳಲ್ಲಿ ೨.೨೦ ಪೈಸೆಗೆ ಒಂದು ಕೆ.ಜಿ. ಅಕ್ಕಿಯನ್ನು ಕೊಡಬೇಕಾಗುತ್ತದೆ. ಅದರೂ ೧೦–೨೦ ಪರ್ಸೆಂಟ್ ಲಾಭ ಬರುತ್ತದೆ. ಆದರೆ ನೀವು ಪಡೆಯುತ್ತಿರುವ ಲಾಭವಾದರೂ ಏನು, ಆ ಕಡೆ ರೈತರ ತಲೆ ಹೊಡೆಯುತ್ತಿದ್ದೀರಿ, ಈ ಕಡೆ ಗ್ರಾಹಕನನ್ನು ಶೋಷಿಸುತ್ತಿದ್ದೀರಿ. ಇದು ರೈತರ ಸರ್ಕಾರ, ಬಡವರ ಸರ್ಕಾರ, ಇದು ಒಂದೇ ನಿದರ್ಶನ ಸಾಕು, ಸರ್ಕಾರ ಶ್ರೀ ಸಾಮಾನ್ಯನ ಹಿತಕ್ಕಾಗಿ ಎಷ್ಟರ ಮಟ್ಟಿಗೆ ಕೆಲಸ ಮಾಡುತ್ತಿದೆ ಎಂಬುದನ್ನು ತೋರಿಸುವುದಕ್ಕೆ. ಇದು ಭ್ರಷ್ಟ ವ್ಯಾಪಾರಿಗಳಿಗೆ, ಅಧಿಕಾರಿಗಳಿಗೆ, ರಾಜಕಾರಣಿಗಳಿಗೆ ಹಾಗೂ ಕಂಟ್ರಾಕ್ಟರುಗಳಿಗೆ ರಕ್ಷಣ ಕೊಡತಕ್ಕ ಸರ್ಕಾರ. ಈ ಮಾತನ್ನು ನಾನು ಹೇಳುವಾಗ ತಾವು ಆಳವಾಗಿ ಆಲೋಚನೆ ಮಾಡಬೇಕು. ನಾನು ಆ ವ್ಯಕ್ತಿ, ಈ ವ್ಯಕ್ತಿ ಎಂದು ವೈಯುಕ್ತಿಕವಾಗಿ ಯಾರನ್ನೂ ಕುರಿತು ಆಪಾದನೆ ಮಾಡುತ್ತಿಲ್ಲ. ಸರ್ಕಾರದ ಅಧಿಕಾರಿಗಳು, ವ್ಯಾಪಾರಿಗಳು ಮತ್ತಿತರರೆಲ್ಲ ಕೂಡಿ ಈ ಕೆಲಸವಾಗುತ್ತಿದೆ ಆದರೆ ಎಲ್ಲ ಅಧಿಕಾರಿಗಳು ಅಂಥವರಲ್ಲ, ಎಲ್ಲ ವ್ಯಾಪಾರಿಗಳು ಅಂಥವರಲ್ಲ, ಸರ್ಕಾರದಲ್ಲಿರುವವರೆಲ್ಲರೂ ಅಂಥವರೆಂದು ಅಲ್ಲ. ಒಳ್ಳೆಯವರೂ ಇದ್ದಾರೆ. ಕೆಲವರು ಇಂಥ ಕೃತ್ಯಗಳಲ್ಲಿ ತೊಡಗಿ ದುರುಪಯೋಗ ಮಾಡುತ್ತಿದ್ದಾರೆ. ಇವತ್ತಿನ ದಿವಸ, ರಾಜ್ಯದ ಅಕ್ಕಿ ಹೊರಗಡೆ ಹೋಗುತ್ತಿರುವುದರಿಂದ ಬಡ ರೈತರಿಗೆ ಮತ್ತು ಗ್ರಾಹಕರಿಗೆ ತುಂಬ ತೊಂದರೆಯಾಗುತ್ತಿದೆ. ಆದುದರಿಂದ ಇದನ್ನು ದಯವಿಟ್ಟು ಕೈಬಿಡಿ ಎಂದು ಒತ್ತಾಯಿಸುತ್ತಾ, ಹಿಂದೆ ಇದ್ದಂತಹ ಲೆವಿ ಪದ್ಧತಿಯಲ್ಲ ಏನಾದರೂ ತಿದ್ದುಪಡಿ ಮಾಡಿ ರೈತನಿಗೂ ಮತ್ತು ಗ್ರಾಹಕನಿಗೂ ಒಳ್ಳೆಯದಾಗುವಂತ ಸರ್ಕಾರದವರು ಒಂದು ನೀತಿಯನ್ನು ರೂಪಿಸಬೇಕೆಂದು ಒತ್ತಾಯ ಮಾಡುತ್ತೇನೆ. ಇವತ್ತಿನ ಹೊಸ ನೀತಿಯಿಂದ ಸರ್ಕಾರಕ್ಕೂ ನಷ್ಟ, ರೈತನಿಗೂ ನಷ್ಟ ಮತ್ತು ಗ್ರಾಹಕನಿಗೂ ನಷ್ಟ. ಆದ್ದರಿಂದ, ಈ ಬಗ್ಗೆ ದಯವಿಟ್ಟು ಆಲೋಚಿಸಿ ಎಂದು ಹೇಳುತ್ತಾ, ಪ್ರಜೆಗಳು ಕೊಟ್ಟ ಭತ್ತ ಅಥವಾ ಅಕ್ಕಿಯನ್ನು ಆಯಾಯ ಜಿಲ್ಲೆಗಳಲ್ಲಿ ಸಂಗ್ರಹಣೆ ಮಾಡಿ ಅಲ್ಲಲ್ಲಿ ಗ್ರಾಹಕರಿಗೆ ಕೊಡುವ ವ್ಯವಸ್ಥೆ ಮಾಡಿದರೆ ಬೇಕಾದಷ್ಟು ಅನುಕೂಲವಾಗುತ್ತದೆ. ನಿಮ್ಮ ಒಂದು ಲೆಕ್ಕದ ಪ್ರಕಾರವೇ ಹೇಳುವುದಾದರೆ, ಸಾಗಾಣಿಕೆಯ ಖರ್ಚು ಒಂದು ಕ್ವಿಂಟಾಲಿಗೆ ೧೨ ರೂಪಾಯಿ ಬರುತ್ತದೆ. ರೈತನಿಂದ ಕೊಂಡು ಗ್ರಾಹಕನಿಗೆ ಕೊಡುವವರೆಗೆ ಒಂದು ಕ್ವಿಂಟಾಲ್ ಅಕ್ಕಿಗೆ ೪೧ ರೂಪಾಯಿ ಖರ್ಚು ಬರುತ್ತದೆ. ಸಾಗಾಣಿಕೆಗಾಗಿ ಇಷ್ಟೊಂದು

ಹಣ ಖರ್ಚು ಮಾಡಿದರೆ ಆದರಿಂದ ರೈತನಿಗೂ ಲಾಭವಿಲ್ಲ ಮತ್ತು ಗ್ರಾಹಕನಿಗೂ ಲಾಭವಿಲ್ಲ. ಇದರ ಬಗ್ಗೆ ಸಂಪೂರ್ಣ ವಿಚಾರಣೆಯಾಗಬೇಕು. ಅವಶ್ಯಕವಿದ್ದರೆ ನಮ್ಮನ್ನು ಕರೆದು ಸಲಹೆಗಳನ್ನು ತೆಗೆದುಕೊಳ್ಳಿ. ಒಟ್ಟಿನಲ್ಲಿ, ಮುಂದಿನ ವರ್ಷ ಬರುವುದರೊಳಗಾದರೂ ಸರಿಯಾದ ಲೆವಿ ನೀತಿಯನ್ನು ರೂಪಿಸಬೇಕೆಂದು ಒತಾಯಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಜೆ. ಹೆಚ್. ಪಟೇಲ್ (ಚನ್ನಗಿರಿ).—ಸನ್ಮಾನ್ಯ ಅಧ್ಯಕ್ಷರೇ, ನಾನು ಸ್ವತಃ ಅನುಭವಿಸಿರತಕ್ಕ ಕೆಲವು ಘಟನೆಗಳ ಆಧಾರದ ಮೇಲೆ ಸರ್ಕಾರದ ನೀತಿ ಎಲ್ಲಿ ತಪ್ಪಿದೆ ಎಂಬುದನ್ನು ಹೇಳುತ್ತೇನೆ; ಅದನ್ನು ನೀವು ಹುಡುಕಿಕೊಳ್ಳುತ್ತಾ ಹೋಗಿ. ಕಳೆದ ಸಾರಿ ಒಂದು ಕ್ವಿಂಟಾಲ್ ಭತ್ತವನ್ನು ೧೬೦ ರಿಂದ ೧೮೦ ರೂಪಾಯಿಗಳವರೆಗೆ ರೈತರು ಮಾರಿದ್ದಾರೆ. ಆಗಲೂ ಅಕ್ಕಿಯ ಬೆಲೆ ಮಾರುಕಟ್ಟೆಯಲ್ಲಿ ಕೆ.ಜಿ. ಒಂದಕ್ಕೆ ೩–೨೫ ಪೈಸೆಗಿಂತ ಜಾಸ್ತಿ ಆಗಲಿಲ್ಲ. ನೀವು ಕ್ವಿಂಟಾಲ್ ಒಂದಕ್ಕೆ ೧೨೫ ರೂಪಾಯಿಗಳ ಹಾಗೆ ೨ ಲಕ್ಷ ಟನ್ ಬತ್ತವನ್ನು ಕೊಂಡು ಹೊರಗಡೆಯವರಿಗೆ ಕೊಡುತ್ತೇವೆಂದು ಹೇಳುತ್ತಿದ್ದೀರಿ. ನಾನು ಲೆವಿ ಪದ್ಧತಿಯನ್ನು ಆಗಲಿ ಅಥವಾ ನೀತಿಯನ್ನಾಗಲಿ ವಿರೋಧ ಮಾಡುತ್ತಿಲ್ಲ. ಆದರೆ ಧಾನ್ಯವನ್ನು ಬೆಳೆಯದೆ ಇರುವ ಜನರಿಗೆ ಏನಾದರೂ ಒಂದು ಸಹಾಯವನ್ನು ಸರ್ಕಾರ ಮಾಡಬೇಕಾಗುತ್ತದೆ. ಮತ್ತು ಬೆಳೆದವರು ತ್ಯಾಗ ಮಾಡಬೇಕಾಗುತ್ತದೆ. ನಮ್ಮ ಭದ್ರಾ ಅಣೆಕಟ್ಟು ಪ್ರದೇಶದಲ್ಲಿ ಎಕರೆಯೊಂದಕ್ಕೆ ಸುಮಾರು ೧೫-೨೦ ಕ್ವಿಂಟಾಲ್ ಭತ್ತವನ್ನು ಬೆಳೆಯುತ್ತಾರೆ; ವರ್ಷಕ್ಕೆ ೨ ಬೆಳೆ ಅಂದರೆ ಕನಿಷ್ಟ ೩೫ ಕ್ವಿಂಟಾಲ್ ಭತ್ತವನ್ನು ಬೆಳೆಯುತ್ತಾರೆ. ಕನಿಷ್ಟ ಒಂದು ಎಕರೆಯಲ್ಲಿ ಬೆಳೆ ಬೆಳೆಯುವುದಕ್ಕೆ ಎಷ್ಟು ಖರ್ಚು ತಗಲುತ್ತದೆ ಮತ್ತು ಅದರಿಂದ ಎಷ್ಟು ವರಮಾನ ಬರುತ್ತದೆಂಬುದನ್ನು ಪರಿಶೀಲನೆ ಮಾಡಿ ಭತ್ತಕ್ಕೆ ಒಂದು ಯೋಗ್ಯ ಬೆಲೆಯನ್ನು ಗೊತ್ತು ಮಾಡುವ ಸಲುವಾಗಿ 'ಬಂಗಾರಪ್ಪ ಸಮಿತಿ' ಎಂದು ಒಂದು ಸಮಿತಿಯನ್ನು ಮಾಡಲಾಗಿತ್ತು. ಆ ಸಮಿತಿಯವರು ಎಲ್ಲ ಲೆಕ್ಕಾಚಾರ ಹಾಕಿ ಒಂದು ಕ್ವಿಂಟಾಲ್ ಭತ್ತಕ್ಕೆ ೧೫೦ ರೂಪಾಯಿಗಳನ್ನು ಕೊಡಬೇಕೆಂದು ಒಂದು ತೀರ್ಮಾನಕ್ಕೆ ಬಂದಿದ್ದರು. ನೀವು ೧೫೦ ರೂಪಾಯಿಗಳನ್ನು ಒಂದು ಕ್ವಿಂಟಾಲ್ ಭತ್ತಕ್ಕೆ ಕೊಟ್ಟರೆ ಅದರಲ್ಲಿ ೬೭½ ಕೆ.ಜಿ. ಅಕ್ಕಿ ಬರುತ್ತದೆ. ನೀವು ಈಗ ಮಾರುತ್ತಿರುವುದು ಕೆ.ಜಿ. ಒಂದಕ್ಕೆ ೩.೦೭ ಪೈಸೆಯಂತೆ. ಆದರೆ ನೀವು ಈಗ ರೈತನಿಗೆ ಕೊಡುತ್ತಿರುವುದು ಕ್ವಿಂಟಾಲ್ ಭತ್ತಕ್ಕೆ ೧೨೫ ರೂಪಾಯಿ. ಈಗ ನೀವು ಕೊಳ್ಳುವುದು ಎಲ್ಲಿ ಮತ್ತು ಮಾರುವುದು ಎಲ್ಲಿ? ಈ ಮಧ್ಯದ ಅಂತರ ಏನಿದೆ ಇದನ್ನು ಗಮನಿಸಬೇಕು. ಒಂದು ವೇಳೆ ನೀವು ಲೆವಿ ವಸೂಲ್ಮಾಡದಿದ್ದು ರೈತ ಚನ್ನಾಗಿ ಬೆಳೆ ಬೆಳೆದಾಗ ಆರ್ಥಿಕ ನೀತಿಯ ಆಧಾರದ ಮೇಲೆ ಕೆಲವು ಸಾರಿ ಲೆವಿ ಬೆಲೆಗಿಂತ ಮಾರುಕಟ್ಟೆಯ ಬೆಲೆ ಕಡಿಮೆ ಇರುತ್ತದೆ. ಹೋದ ವರ್ಷ ರಾಗಿ ಬೆಳೆ ಚನ್ನಾಗಿ ಬಂತು. ಆಗ ಮಾರುಕಟ್ಟೆಯ ಬೆಲೆ ಕ್ವಿಂಟಾಲ್ ರಾಗಿಗೆ ೬೫ ರೂಪಾಯಿ ಇತ್ತು ಲೆವಿ ಬೆಲೆ ೯೧ ರೂಪಾಯಿ ಇತ್ತು. ಆಗ ಯಾರೂ ರಾಗಿಯನ್ನು ಕೊಂಡುಕೊಳ್ಳದೆ ದುಡ್ಡು ಇಲ್ಲ, ಚೀಲ ಇಲ್ಲ, ಗೋಡೌನ್ ಇಲ್ಲವೆಂದು ಲೆವಿಗೆ ಸಂಬಂಧಪಟ್ಟ ಅಧಿಕಾರಿಗಳು ಹೇಳುದ್ದರು. ಆ ಸಂದರ್ಭದಲ್ಲಿ ರೈತರೆಲ್ಲ ಹೋಗಿ ವರ್ತಕರಿಗೆ ರಾಗಿಯನ್ನು ಮಾರಾಟ ಮಾಡಿದ ಮೇಲೆ ವರ್ತಕರು ತಹಶೀಲ್ದಾರರಿಗೆ ಲಂಚ ಕೊಟ್ಟು ರೈತರ ಸರ್ಟಿಫಿಕೇಟ್ ತೆಗೆದುಕೊಂಡು ೬೫ ರೂಪಾಯಿಗೆ ಒಂದು ಕ್ವಿಂಟಾಲ್‌ನಂತೆ ಕೊಂಡ ರಾಗಿಯನ್ನು ೯೧ ರೂಪಾಯಿಗೆ ಸರ್ಕಾರಕ್ಕೆ ಮಾರಾಟ ಮಾಡಿದರು. ಆದೇ ರೀತಿ ಹೋದ ವರ್ಷ ೧೮೦ ರೂಪಾಯಿಗೆ ಒಂದು ಕ್ವಿಂಟಾಲ್ ಭತ್ತವನ್ನು ಮಾರಿದ್ದಾರೆ. ಆದರೆ ಹೊರಗಡೆ ಅಕ್ಕಿ ಧಾರಣೆ ಏರಲಿಲ್ಲ.

೬–೨೦ ಪಿ. ಎಂ.

ಹೋದ ವರ್ಷ ಒಂದು ಕ್ವಿಂಟಾಲ್ ಪಾಡಿಗೆ ೧೮೦ ರೂ. ಇತ್ತು. ಆದರೆ ನಿಮಗೆ ಹೊರಗಡೆ ಆ ಧಾರಣೆ ಇರಲಿಲ್ಲ. ಈ ವರ್ಷ ತಮಗೇ ಗೊತ್ತಿರುವ ಹಾಗೆ ಬೆಲೆಯೂ ಕಡಿಮೆಯಾಯಿತು, ಇಳುವರಿಯೂ ಕಡಿಮೆಯಾಯಿತು. ಹೊಸ ಲೆವಿ ರೇಟಿನಿಂದಾಗಿ ಇವತ್ತು ಏನಾಗಿದೆ ಎಂದರೆ ಹಿಂದಿನ ಲೆವಿ ರೇಟ್ ಏನಿತ್ತು ಅದನ್ನು ನಾವು ಒಪ್ಪಿಕೊಳ್ಳುತ್ತೇವೆ, ಶ್ರೀಮಾನ್ ದೇವರಾಜ್ ಅರಸ್‌ರವರ ಸರ್ಕಾರ ಇದ್ದಾಗ ಏನು ಲೆವಿ ನೀತಿ ಇತ್ತು ಎಂದರೆ ರೆವಿನ್ಯೂ ಇನ್ಸ್‌ಪೆಕ್ಟರ್, ತಹಶೀಲ್ದಾರುಗಳು ಕಣಕ್ಕೆ ನುಗ್ಗಿ ಗಲಾಟೆ ಮಾಡಿ ಜಬರ್‌ದಸ್ತ್ ಮಾಡಿ ಲೆವಿಯನ್ನು ವಸೂಲಿ ಮಾಡುತ್ತಿದ್ದರು. ಆದರೆ ದೊಡ್ಡವರ ಮನೆಗೆ ಹೊಲಕ್ಕೆ ಹೋಗುತ್ತಿರಲಿಲ್ಲ, ಅವರವರೇ ಅಡ್ಜಸ್ಟ್ ಮಾಡಿಕೊಂಡು ೧೦೦ ಕ್ವಿಂಟಾಲ್, ೨೦೦ ಕ್ವಿಂಟಾಲ್ ಕೊಡುತ್ತೇನೆಂದು ಹೇಳಿದರೆ, ಅವನು ಕೊಟ್ಟಷ್ಟೇ ತೆಗೆದುಕೊಂಡು ಹೋಗಿ ಬಿಡುತ್ತಿದ್ದರು.

ಅವನು ಕೊಡುತ್ತಿದ್ದ ಚಿಲ್ಲರೆ ಹಣಕ್ಕೆ ಸಮಾಧಾನ ಮಾಡಿಕೊಂಡು ಅಡ್ಜಸ್ಟ್ ಮಾಡಿಕೊಂಡು ಹೋಗುತ್ತಿದ್ದರು. ಅಂದರೆ ಕಿರುಕುಳ ಇತ್ತು ಇರಲಿಲ್ಲವೆಂದು ಅಲ್ಲ, ಆದರೆ ನಿಮ್ಮ ನೀತಿ ಇವತ್ತು ಏನಾಗಿದೆ ಎಂದರೆ ಬಡವರ ಮನೆಗಳಿಗೆ ನುಗ್ಗದೇ, ಅವರ ಕಣಕ್ಕೆ ನುಗ್ಗದೇ ಹೊರ ನೋಟಕ್ಕೇನೂ ಬಹಳ ಚೆನ್ನಾಗಿ ಕಾಣುತ್ತಿದೆ. ರೈತರ ಮನೆಗಳಿಗೆ, ಹೊಲಕ್ಕೆ ಯಾವ ಆಫೀಸರ್‌ಗಳೂ ಬರುವ ಹಾಗೇ ಇಲ್ಲ ಎಲ್ಲಾ ರೈತರು ಮಿಲ್ ಮಾಲೀಕರ ಹತ್ತಿರ ಹೋಗಿ ಕೊಡುವುದು, ಆಫೀಸರ್‌ಗಳು ಏನಿದ್ದರೂ ಮಿಲ್ ಮಾಲೀಕರಿಂದ ವಸೂಲಿ ಮಾಡತಕ್ಕದ್ದು ಎಂದು ಮಾಡಿದಿರಿ. ಕಣದ ಲೆವಲ್‌ನಲ್ಲಿ ಹೂಡಿದರೆ ಸಾಕಾಗುವುದಿಲ್ಲವೆಂದು ಹೇಳಿ ಮಿಲ್ ಮಾಲೀಕರುಗಳಿಂದ ಅವರ ಲೆವಲ್‌ನಲ್ಲಿ ಹೂಡಿದರೆ ಹೆಚ್ಚು ಸಿಗುತ್ತದೆಂದು ನಿಮಗೆ ಗೊತ್ತಾಯಿತು. ನಮಗೆ ಇವತ್ತು ಉದಾಹರಣೆಗೆ ಹೇಳಬೇಕೆಂದರೆ ಚನ್ನಗಿರಿ ತಾಲ್ಲೂಕಿನವರು ಭತ್ತ ಬೆಳೆದದ್ದನ್ನು ತೆಗೆದುಕೊಂಡು ಹೋಗಿ ಶಿವಮೊಗ್ಗದಲ್ಲಿ ಮಾರುವುದಕ್ಕಾಗುವುದಿಲ್ಲ ಬಹಳ ದೂರವಿದೆ, ಅದಕ್ಕೆ ಅವರು ದಾವಣಗೆರೆಗೆ ಬಂದು ಮಾರಾಟ ಮಾಡಬೇಕು. ದಾವಣಗೆರೆ ಅಲ್ಲಿಂದ ೧೦-೧೧ ಮೈಲಿ ಆಗುತ್ತದೆ ಅಲ್ಲಿಗೆ ತೆಗೆದುಕೊಂಡು ಹೋಗಿ ಮಾರಾಟ ಮಾಡಬೇಕಾದರೂ ಪರ್ಮಿಟ್ ಬೇಕು, ಅಲ್ಲಿ ಮಧ್ಯೆದಲ್ಲಿ ಒಂದು ಗೇಟ್ ಬೇರೆ ಹಾಕಿದ್ದೀರಿ. ಅಂದರೆ ಅಂತರ ರಾಜ್ಯ ಸಾಗಾಣಿಕೆ ನಿರ್ಬಂಧವನ್ನು ಮಾಡಿದ್ದೀರಿ. ಅಂದರೆ ಮತ್ತೆ ಅದೇ ಪ್ರಕಾರ ತಹಶೀಲ್ದಾರರನ್ನು ರೆವಿನ್ಯೂ ಇನ್ಸ್‌ಪೆಕ್ಟರ್‌ಗಳನ್ನು ಛೂ ಬಿಟ್ಟಿದ್ದೀರಿ ನಮ್ಮ ಮೇಲೆ. ಮಿಲ್ ಮಾಲೀಕರ ಹತ್ತಿರ ಹೋದರೆ ಅವರು ಕ್ವಿಂಟಾಲ್‌ಗೆ ೧೮೦ ರೂ.ಗಳ ಕೊಂಡುಕೊಂಡರೂ ಹಾಗೆ ಹಳೇ ಲೆಕ್ಕಾಚಾರ ಹಾಕಿಕೊಳ್ಳುತ್ತಾನೆ, ಮಾನ್ಯ ಶ್ರೀ ಬೊಮ್ಮಾಯಿರವರು ಹೇಳಿದ ರೀತಿಯಲ್ಲಿ, ಮಿಕ್ಕ ಹಣವನ್ನು ಶ್ರೀ ಮಾಣಿಕ್ ರಾವ್ ಪಾಟೀಲ್‌ರವರಿಗೆ ಕೊಟ್ಟಿದ್ದಾರೆ, ಬಿಟ್ಟಿದ್ದಾರೆಂಗು ನಾನು ಹೇಳುವುದಿಲ್ಲ. ರೈತ ವರ್ತಕರ ಹತ್ತಿರ ಹಣ ಸಾಲ ತೆಗೆದುಕೊಂಡಿರುತ್ತಾನೆ ಅದಕ್ಕೆ ಅವನು ಅವರ ಹತ್ತಿರ ಪ್ಯಾಡಿ ತೆಗೆದುಕೊಂಡು ಹೋದರೆ ಅವನು ಕ್ವಿಂಟಾಲಿಗೆ ೧೮೦ ರೂ.ಗಳ ಹಾಗೆ ಲೆಕ್ಕ ಹಾಕಿ ಹಿಂದಿನದನ್ನು ಹಿಡಿದುಕೊಂಡು ೧೫೦-೧೮೦ ರೂ.ಗಳ ಹಾಗೆ ಕೊಂಡುಕೊಳ್ಳುತ್ತಾನೆ. ಸರ್ಕಾರದ ಇವತ್ತಿನ ನೀತಿಯಿಂದಾಗಿ ಎಷ್ಟೋ ಬಡ ರೈತರು ಸತ್ತು ಹೋಗಿದ್ದಾರೆ. ಅಧ್ಯಕ್ಷರೇ ನಿಮ್ಮ ಕಡೆ ಭತ್ತ ಜಾಸ್ತಿ ಬೆಳೆಯುತ್ತಾರೋ ಇಲ್ಲವೋ ಗೊತ್ತಿಲ್ಲ, ನಮ್ಮಲ್ಲಿ ಭತ್ತವನ್ನು ಜಾಸ್ತಿ ಬೆಳೆಯುತ್ತಾರೆ. ನಮ್ಮ ಶಿವಮೊಗ್ಗದಲ್ಲಿ ಏನಾಗಿದೆ ಎಂದರೆ ಒಂದು ಎಕರೆಗೆ ೧೫-೨೦ ಕ್ವಿಂಟಾಲ್ ಭತ್ತ ಬೆಳೆಯುತ್ತಾರೆ ಆದರೆ ಅವರು ಅದನ್ನು ಮಿಲ್‌ಗೆ ಅವನೇ ನೇರವಾಗಿ ಒಯ್ಯುವುದಿಲ್ಲ. ಅಲ್ಲಿ ಹಳ್ಳಿಯಲ್ಲಿಯೇ ಒಬ್ಬ ಮಿಲ್‌ನ ಏಜೆಂಟ್ ಇರುತ್ತಾನೆ. ಆ ಏಜೆಂಟ್ ಆ ಬಡ ರೈತರಿಗೆ ಅಡ್ವಾನ್ಸ್ ಕೊಟ್ಟು ಬಿಟ್ಟಿರುತ್ತಾನೆ. ಏತಕ್ಕೆಂದರೆ ರೈತ ಬೀಜ ಗೊಬ್ಬರ, ಮುಂತಾದವುಗಳನ್ನು ಕೊಂಡುಕೊಳ್ಳಬೇಕೆಂದರೆ ದುಡ್ಡು ಯಾರು ಕೊಡಬೇಕು? ಇವತ್ತು ನಮ್ಮ ರಾಜ್ಯದಲ್ಲಿ ತೋಟಗಾರರು, ಪ್ಲಾಂಟರ್ಸ್‌ಗಳೇನೋ ಸಾಲವಿಲ್ಲದೆ ತರಬಹುದು, ಅವರೂ ಕೂಡ ಔಷಧಿ, ಗೊಬ್ಬರವನ್ನು ಸಾಲ ಮಾಡಿಯೇ ತಂದಿರುತ್ತಾರೆ, ಆದುದರಿಂದ ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ ಸಾಲ ಮಾಡಿಯೇ ಬದುಕಬೇಕಾಗಿರುತ್ತದೆ ಅಂಥಾ ಸ್ಥಿತಿ ಇದೆ, ಅದಕ್ಕೆ ಸಣ್ಣ ರೈತನಾದವನು ಏನು ಮಾಡಬೇಕು ಮಾಣಿಕ್ಯ ರಾವ್ ಪಾಟೀಲ್‌ರವರಂಥವರ ಹತ್ತಿರನೋ ಇಲ್ಲ ಜೆ. ಎಚ್. ಪಟೇಲ್‌ರವರಂಥವರ ಹತ್ತಿರನೋ ಹೋಗಿ ಕ್ವಿಂಟಾಲ್‌ಗೆ ೧೨೦ ರೂ.ಗಳ ಹಾಗೆ ಅಡ್ವಾನ್ಸ್ ಪಡೆದುಕೊಂಡು ಬಂದಿರುತ್ತಾನೆ.

ಶ್ರೀ. ಮಾಣಿಕ ರಾವ್ ಪಾಟೀಲ್.—ಈಗ ತಾನೇ ನಿಮ್ಮ ನಾಯಕರಾದ ಶ್ರೀಮಾನ್ ದೇವರಾಜ್ ಅರಸ್‌ರವರು ಹೇಳಿದರು. ಈ ರಾಜ್ಯದಲ್ಲಿ ದೊಡ್ಡ ರೈತರೇನಿದ್ದಾರೆ ಅವರಿಗೆ ಅನುಕೂಲವಾಗುವ ರೀತಿಯಲ್ಲಿ ಈ ಲೆವಿ ಪಾಲಿಸಿ ಮಾಡಿದ್ದೀರಿ ಎಂದು ಹೇಳಿದರು, ಈಗ ತಾವು ಹೇಳುತ್ತಿದ್ದೀರಿ, ದೊಡ್ಡ ರೈತನಾದರೂ ಸಾಲ ಮಾಡಿ ತರಬೇಕಾಗುತ್ತದೆಂದು ಇದರಲ್ಲಿ ಯಾವುದು ಸರಿ?

ಶ್ರೀ ಜೆ. ಎಚ್. ಪಟೇಲ್.—ತಾವು ಈ ಪ್ರಶ್ನೆ ಕೇಳುತ್ತೀರಿ ಎಂದು ನನಗೆ ಗೊತ್ತಿತ್ತು. ದೊಡ್ಡ ರೈತ ಎಂದರೆ ಸಾಲ ತೆಗೆದುಕೊಂಡು ಬಂದ ಹಾಗೆ ಮಾಡಿ ಪುನಃ ವಾಪಸ್ಸು ಕೊಟ್ಟ ಹಾಗೆ ಮಾಡಲೇಬೇಕಾಗುತ್ತದೆ. ಈಗ ಉದಾಹರಣೆಗೆ ಟಾಟಾ ಬಿರ್ಲಾರವರು ಬ್ಯಾಂಕ್‌ನಿಂದ ಸಾಲ ತೆಗೆದುಕೊಂಡು ಬರುವುದಿಲ್ಲವೇನು? ಅವರಿಗೇನು ಬಡವರೆಂದು ಹೇಳುತ್ತೀರೋ? ಬಡವ ತಾನು ಬೆಳೆದಂಥ ಪದಾರ್ಥವನ್ನು ೪-೬ ತಿಂಗಳ ಮಟ್ಟಿಗೆ ಇಟ್ಟುಕೊಂಡಿರುತ್ತಾನೆ ಆ ಮೇಲೆ ಅವನು ತನ್ನ ಸಂಸಾರವನ್ನು ನಿಭಾಯಿಸುವುದಕ್ಕೆ ಅಲ್ಲಿ ಇಲ್ಲಿ ವರ್ತಕರಿಂದ ಸಾಲ ಮಾಡಿಕೊಂಡಿರುತ್ತಾನೆ. ಒಂದು ೫ ರೂ. ಜಾಸ್ತಿ ಯಾರು ಕೊಡುತ್ತೇವೆಂದು ಹೇಳುತ್ತಾರೋ ಅವನಿಗೆ ಅವನು ಮಾರಾಟ ಮಾಡಿಕೊಂಡು ಬಿಡುತ್ತಾನೆ. ಹೀಗಾಗಿ

ಆ ವರ್ತಕನಿಗೆ ೪ ತಿಂಗಳೊಳಗಾಗಿ ಒಂದು ಕ್ವಿಂಟಾಲ್‌ಗೆ ೫೦ ರಿಂದ ೬೦ ರೂ. ಗಳವರೆಗೆ ಲಾಭವಾಗಿರುತ್ತದೆ. ಆದುದರಿಂದ ಇವತ್ತು ನಿಮ್ಮ ಲೆವಿ ವಿಧಿಸಿರತಕ್ಕ ನೀತಿ ಏನಿದೆ ಇದರಿಂದ ಯಾರಿಗೆ ಅನುಕೂಲವಾಗಿದೆ? ಇದೊಂದು ವಿಷಮ ಚಕ್ರವ್ಯೂಹವಾಗಿದೆ. ನಮ್ಮ ಅರ್ಥ ಶಾಸ್ತ್ರಜ್ಞರ ಪ್ರಕಾರ ಕನಿಷ್ಟ ಪಕ್ಷ ಒಂದು ವರ್ಷಕ್ಕೆ ಒಂದು ಸಾವಿರ ಕೋಟಿ ರೂ. ಗಳನ್ನು ರೈತರ ಪಾಕೆಟ್‌ನಿಂದ ಅವರಿಗೆ ಗೊತ್ತಿಲ್ಲದೇ ಸರ್ಕಾರ ತೆಗೆದುಕೊಳ್ಳುತ್ತಿದೆ. ಇದಕ್ಕೆ ಇಂಗ್ಲೀಷ್‌ನಲ್ಲಿ ಒಂದು ಗಾದೆ ಹೇಳುತ್ತಾರೆ. Small pocket picker is punished but the biggest pocket picker is let free.

Government which picks minimum of Rs. 1,000 crores per year from the packets of the farmers is rewarded. ನಿಮ್ಮ ನೀತಿಯಿಂದ ಏನಾಗಿದೆ ಎಂದರೆ ಲೆವಿಯನ್ನು ತಹಶೀಲ್ದಾರರು ಮತ್ತು ರೆವಿನ್ಯೂ ಇನ್ಸ್‌ಪೆಕ್ಟರ್‌ಗಳು ವಸೂಲಿ ಮಾಡುವ ಬದಲು ಬದಲಿ ವ್ಯವಸ್ಥೆ ಮಾಡಿ ನೀವು ಹಣ ವಸೂಲಿ ಮಾಡುವುದಕ್ಕೆ ವ್ಯವಸ್ಥೆ ಮಾಡಿದ ಹಾಗಾಗಿದೆ. ಇದು ಏನಾಗಿದೆ ಬಹುಶಃ ನಿಮ್ಮ ಹೆಸರಿನಲ್ಲಿ ಹಣವನ್ನು ಕಲೆಕ್ಟ್ ಮಾಡಿರುವವರು ಯುವಕ ಮೋಳಕ್ಕೆ ಕೊಟ್ಟಿರಬಹುದು, ನಿಮಗೆ ಕೊಟ್ಟಿರುವುದಿಲ್ಲ ಅಂಥಾದ್ದಕ್ಕೆಲ್ಲಾ ಕೊಡಬೇಕಾಗುತ್ತದೆಯಲ್ಲಾ, ಅಲ್ಲಿಗೆ ಕೊಟ್ಟಿರಬಹುದು. ೨ ದಿವಸಕ್ಕೆ ಒಂದೂವರೆ ಕೋಟಿ ಖರ್ಚು ಮಾಡಬೇಕಾದರೆ ಇಂಥಾದ್ದನ್ನೆಲ್ಲಾ ಮಾಡಬೇಕಾದರೆ ಎಲ್ಲಿಯಿಂದಲಾದರೂ ಹಣವನ್ನು ಕಲೆಕ್ಟ್ ಮಾಡಲೇ ಬೇಕಲ್ಲಾ... ಪಿ.ಡಬ್ಲ್ಯು.ಡಿ. ಯವರೂ ಹೇಳುತ್ತಾರೆ... ನಾವು ಸರ್ಕಾರಕ್ಕೆ ಕೊಟ್ಟಿದ್ದೇವೆಂದು ತಾವು ಬೇಕಾದರೆ ಈಗಿಂದೀಗಲೇ ದಾವಣಗೆರೆಗೆ ಬನ್ನಿ ಸರ್ಕಾರಕ್ಕೆ ದುಡ್ಡು ಕೊಟ್ಟಿದ್ದೇವೆಂದು ಹೇಳುವವರು ಅಲ್ಲಿದ್ದಾರೆ. ಆದುದರಿಂದ ನಿಮಗೆ ವೈಜ್ಞಾನಿಕ ರೀತಿಯಲ್ಲಿ ಸಲಹೆ ಕೊಡುವುದಾದರೆ, ಓಪನ್ ಮಾರ್ಕೆಟ್‌ನಲ್ಲಿಯೇ ಭತ್ತವನ್ನು ಕೊಂಡುಕೊಳ್ಳಿ. ೧೫೦ ರೂ.ಗಳನ್ನು ಒಂದು ಕ್ವಿಂಟಾಲ್‌ಗೆ ಕೊಟ್ಟರೆ ೨ ಲಕ್ಷಕ್ಕೂ ಮೀರಿ ನೀವು ಸಂಗ್ರಹಿಸಬಹುದು. ಅದಕ್ಕೆ ನಿಮಗೆ ಸಾರಿಗೆ ವಗೈರೆ ಖರ್ಚು ಎಲ್ಲಾ ಸೇರಿ ೧೯.೬ ಬಿದ್ದರೆ ನೀವು ೨ ರೂ. ಗಳಿಂದ ೨.೯೦ ವರೆಗೆ ಮಾರಿದರೆ ಒಂದು ಕ್ವಿಂಟಾಲ್ ೧೫–೧೬ ರೂ.ಗಳ ಲಾಭ ಬರುತ್ತದೆ ನಿಮಗೇನೂ ಲುಕ್ಸಾನು ಆಗುವುದಿಲ್ಲ. ೧೫೫ ರೂ.ಗಳಿಗೆ ಏತಕ್ಕೆ ಕೊಳ್ಳುತ್ತೀರಿ? ಮಿಲ್ ಮಾಲೀಕರು ಏನು ಇವತ್ತು ಕಡಿಮೆ ಬೆಲೆಗೆ ಮಾರುವುದಿಲ್ಲ ಇದರಿಂದ ಬೆಳೆದಂಥ ರೈತನಿಗೆ ಅವನಿಗೆ ಖರ್ಚು ಆಗುವಷ್ಟು ಬೆಲೆಯನ್ನು ಕೊಡುತ್ತಿಲ್ಲ. ನಡುವೆ ಇರತಕ್ಕಂಥ ದೊಡ್ಡ ಯಂತ್ರವೇನಿದೆ ಅದು ರೆವಿನ್ಯೂ ಇನ್ಸ್‌ಪೆಕ್ಟರ್‌ವರಿಂದ ಹಿಡಿದು ತಹಶೀಲ್ದಾರ್‌ರವರಿಂದ ಹಿಡಿದು ಬೆಂಗಳೂರಿನಲ್ಲಿ ವಿಧಾನ ಸೌಧದಲ್ಲಿರತಕ್ಕ ಜನರವರೆಗೂ ಒಂದು ದೊಡ್ಡ ಕೊಳಾಯಿ ಇಟ್ಟುಕೊಂಡಿದ್ದಾರೆ. ಆ ಕೊಳಾಯಿಯಲ್ಲಿ ಹರಿದು ಬರುತ್ತಿದೆ. ಈ ಲೆವಿ ಎನ್ನುವುದು ಜನರನ್ನು ಸುಲಿಯುತಕ್ಕಂತಹ ಒಂದು ಯಂತ್ರವಾಗಿದೆ. ಅದನ್ನು ಮಾಡಬೇಡಿ. ನೀವು ಇದನ್ನು ಅನೌನ್ಸ್ ಮಾಡಿದಾಗ ನಾನು ಮಾನ್ಯ ದೇವರಾಜ ಅರಸ್ ಅವರ ಹತ್ತಿರ ಹೋಗಿ ಏನೋ ಒಂದು ಒಳ್ಳೆಯ ಕೆಲಸ ಮಾಡಿದ್ದಾರೆಂದು ಹೇಳಿದ್ದೆ. ಕಣಕ್ಕೇ ಬಂದು, ಮನೆಗೆ ಬಂದು ನುಗ್ಗಿ ವಸೂಲಿ ಮಾಡುವುದನ್ನು ತಪ್ಪಿಸಿದ್ದಾರೆಂದು ಕೊಂಡಿದ್ದೆವು. ಆದರೆ ಅದು ಆಗಲಿಲ್ಲ. ಏನೋ ಸೊಳ್ಳೆಯಿಂದ ಕಡಿಸಿಕೊಳ್ಳುವುದು ತಪ್ಪಿತೆಂದರೆ ಈಗ ಹುಲಿಯೇ ಮೈಮೇಲೆ ಬಿದ್ದಂತಾಗಿದೆ. ಇದು ಒಂದು ವೈಜ್ಞಾನಿಕ ರೀತಿಯಾದುದಲ್ಲ. ಇದರಿಂದ ವರ್ತಕರ ಸೇವೆ ಮಾಡುತ್ತಿದ್ದೀರಿ ನೀವು. ವರ್ತಕರು ಹೇಗೆ ಎಂಬುದು ನಿಮಗೆ ಗೊತ್ತಿದೆ. ದೇಶವೆಲ್ಲಾ ಸತ್ತಮೇಲೆ ಅವರು ಸಾಯುತ್ತಾರೆಯೇ ಹೊರತು ದೇಶ ಸಾಯುವವರೆಗೆ ಅವರು ಸಾಯುವುದಿಲ್ಲ ಅವರನ್ನು ನೀವು ಏಕೆ ಉಳಿಸುವುದಕ್ಕೆ ಹೋಗುತ್ತೀರಿ? ಇದಕ್ಕೇ ನಾನು ಒಂದು ಕೊನೆಯ ಮಾತನ್ನು ಹೇಳಬಯಸುತ್ತೇನೆ. ಇಲ್ಲಾ ನೀವು ಜನರ ಸುದ್ದಿ ಮಾತನಾಡಿ ಇಲ್ಲವೇ ಆ ವರ್ತಕರ ಸುದ್ದಿ ಮಾತನಾಡಿ. ಒಂದು ಸಾರಿ ಯಾರೋ ಒಬ್ಬ ಜಲಭಾದೆಯನ್ನು ತೀರಿಸಿಕೊಳ್ಳುತ್ತಾ ಕೋಕಾ ಕೋಲಾವನ್ನು ಕುಡಿಯುತ್ತಿದ್ದನಂತೆ. ಆಗ ನಮ್ಮಂತಹವರು ಒಬ್ಬರು ಆತನ ಬಳಿಗೆ ಹೋಗಿ, ಎರಡರಲ್ಲಿ ಒಂದನ್ನು ಮೊದಲು ಮಾಡಪ್ಪ. ಮೊದಲು ಜಲಭಾದೆ ತೀರಿಸಿಕೋ ಅಥವಾ ಕೋಕಾಕೋಲಾವನ್ನು ಮೊದಲು ಕುಡಿ ಎಂದು ಹೇಳಿದ್ದಕ್ಕೆ ಆತ ಎಲ್ಲಾ ಇಲ್ಲಾ ಎರಡನ್ನೂ ಒಟ್ಟಿಗೇ ಮಾಡುತ್ತೇನೆ ಎಂದನಂತೆ. ಆಗ ಆತ ಎರಡನ್ನೂ ಸೇರಿಸಿಯೇ ಮಾಡಿಕೋ ಎಂದು ಮುಂದೆ ಹೋದರಂತೆ ಸ್ವಾಮಿ. ಇಷ್ಟು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಚ್. ಗಂಗಾಧರನ್ (ಕೃಷ್ಣರಾಜ)—ಸನ್ಮಾನ್ಯ ಅಧ್ಯಕ್ಷರೆ, ಸಾಮಾನ್ಯವಾಗಿ ರೈತರಿಗೆ ಆಗಿರತಕ್ಕ ದುಷ್ಪರಿಣಾಮಗಳು ಏನು ಎಂಬುದನ್ನು ಚರ್ಚೆ ಮಾಡಬೇಕೆಂದು ಈ ವಿಷಯವನ್ನು ಎತ್ತಿಕೊಳ್ಳಲಾಗಿದೆ. ಬಹುಶಃ ಕಾನೂನಿನಲ್ಲಿ ಏನೇನು ದೋಷಗಳು ಆಗಿವೆಯೋ, ಕಾನೂನಿನ ಚಲಾವಣೆಯಲ್ಲಿ ಏನು ದೋಷ ಇದೆಯೋ ಎಂಬುದರ ಬಗ್ಗೆ ವಿಮರ್ಶೆ ಮಾಡಬೇಕಾಗಿದೆ. ಈ ಲೆವಿ ಪದ್ಧತಿಯನ್ನು ತರಲು ಎರಡು ಉದ್ದೇಶಗಳು ಇವೆ. 1ನೇದಾಗಿ ಬೆಳೆದ ರೈತರಿಗೆ ನಿಗಧಿಯಾದ ಬೆಲೆ ಸಿಗಬೇಕು ಹಾಗೂ ಎರಡನೆಯದಾಗಿ ಅದನ್ನು ಅನುಭವಿಸುವವರಿಗೂ ಹೆಚ್ಚಿನ ಬೆಲೆ ಆಗಬಾರದು ಎಂದು. ಎಂದರೆ ಪ್ರೈಸ್ ಕಂಟ್ರೋಲ್ ಆಗಬೇಕೆಂದು ಹೇಳಿ. ಈ ಒಂದು ಉದ್ದೇಶದಿಂದ ಈ ಲೆವಿಯನ್ನು ಜಾರಿಗೆ ತಂದರೋ ಅದರಲ್ಲಿ ಈಗ ಈ ವರ್ಷ ಒಂದು ಹೊಸ ಪದ್ಧತಿಯನ್ನು ತರಲಾಯಿತು. ಇದರ ಹಿಂದೆಯೂ ಒಂದು ಪದ್ಧತಿ ಇತ್ತು. ಈ ಎರಡೂ ಪದ್ಧತಿಗಳಿಂದ ಬಡರೈತರಿಗೆ ಏನಾದರೂ ಉಪಯೋಗವಾಗಿದೆಯೋ? ಇದನ್ನು ನಾವು ಇವತ್ತು ವಿಮರ್ಶೆ ಮಾಡಬೇಕಾಗಿದೆ. ಈ ಪದ್ಧತಿಯನ್ನು ಜಾರಿಗೆ ತಂದಾಗ ಕಾನೂನು ಬದ್ಧವಾಗಿ ಬಡರೈತರ ಮನೆ ಬಾಗಿಲಿಗೆ ಹೋಗದೇ, ಬಡರೈತರನ್ನು ಮುಟ್ಟದೇ ಬರೀ ಮಿಲ್‌ನ ಬಾಗಿಲಿನಲ್ಲಿ ಕುಳಿತುಕೊಂಡು ವಸೂಲಿ ಮಾಡಿದ್ದರೆ ಯಾರಿಗೂ ತೊಂದರೆ ಆಗುತ್ತಾ ಇರಲಿಲ್ಲ. ಆದರೆ ಏನು ಕಾನೂನನ್ನು ಮಾಡಿದ್ದಾರೋ ಅದನ್ನು ಇವರು ಅನುಸರಿಸಿಲ್ಲ. ಈಗಿನ ಲೆವಿ ಪದ್ಧತಿಗಿಂತ ಹಿಂದೆ ಇದ್ದ ಲೆವಿ ಪದ್ಧತಿಯೂ ಕೂಡಾ ಆರೋಪಗಳಿಂದ ಮುಕ್ತಿಯಾಗಿರಲಿಲ್ಲ. ಇದನ್ನು ತಾವು ಗಮನದಲ್ಲಿಟ್ಟುಕೊಳ್ಳಬೇಕು. ಸಾಮಾನ್ಯ ಜನರಿಗೆ ಕಿರುಕುಳ ಏನಾಗಿದೆ? ಈ ಕಿರುಕುಳ ಹಿಂದಿನ ಲೆವಿ ಪದ್ಧತಿಯಲ್ಲೂ ನಡೆದಿದೆ. ಎಂದರೆ ಅಂದಿನ ಪದ್ಧತಿಯಲ್ಲೂ ಕೂಡಾ ಅಧಿಕಾರಿಗಳು ಬಡವರಿಗೆ ತೊಂದರೆ ಕೊಟ್ಟಿದ್ದಾರೆ. 3 ಕ್ವಿಂಟಾಲ್ ಬೆಳೆದಂತಹ ಮನೆಯಲ್ಲೂ 2 ಕ್ವಿಂಟಾಲ್ ಧಾನ್ಯ ಪಡೆದುಕೊಂಡು ಕಿರುಕುಳ ಕೊಟ್ಟಿದ್ದಾರೆ, ಹಿಂಸೆ ಮಾಡಿದ್ದಾರೆ. ಈ ವರ್ಷ ಹೊಸ ಕಾನೂನು ಮಾಡಿ ಏನು ಮಾಡಿದಿರಿ ಧಾನ್ಯವನ್ನು ಮಿಲ್‌ನಲ್ಲಿ ಸಂಗ್ರಹಿಸುತ್ತೇವೆಂದು ಮಾಡಿದಿರಿ. ಆದರೆ ಅದು ಹಾಗೆ ಆಗಿಲ್ಲ, ಅಲ್ಲಿನ ಅಧಿಕಾರಿಗಳು ಹೇಳಿದ್ದಾರೆ, ತಹಶೀಲ್ದಾರರು ಹೇಳಿದ್ದಾರೆ. ನೀನು ಇವತ್ತು ಕಾನೂನನ್ನು ಹೇಳಿ ನನ್ನಿಂದ ತಪ್ಪಿಸಿಕೊಳ್ಳುವುದಾದರೆ ಅದೇಗೆ ಭತ್ತವನ್ನು ನೀನು ತೆಗೆದುಕೊಂಡು ಹೋಗುತ್ತೀಯೋ ನಾನು ನೋಡುತ್ತೇವೆಂದ ಹೇಳಿ ಒತ್ತಾಯಮಾಡಿ ಅವನ ಕಣದಲಿಯೇ ಧಾನ್ಯವನ್ನು ವಸೂಲು ಮಾಡಿದ್ದಾರೆ. ಇದನ್ನು ಹಿಂದಿನ ಪದ್ಧತಿಯಲ್ಲಿಯೂ ಮಾಡಿದ್ದೀರಿ. ಏನು ಲೆವಿ ಪದ್ಧತಿಯನ್ನು ಜಾರಿಗೆ ತಂದಿದ್ದೀರಿ ಅದು ಕಾನೂನಿಗೆ ಅನುಸರಣೆಯಾಗಿ ಯಾವಾಗಲೂ ಆಗಿಲ್ಲ. ಇದು ಬರೀ ಪುಸ್ತಕದ ಬದನೇಕಾಯಿಯಾಗಿದೆ. ಹೀಗಾಗಿ ರೈತ ಬಹಳ ತೊಂದರೆಯನ್ನು ಅನುಭವಿಸಿದ್ದಾನೆ. ಆತನಿಗಾದ ಕಿರುಕುಳದ ಬಗ್ಗೆ ನಾವು ಸಾಕಷ್ಟು ಚರ್ಚೆ ಮಾಡಿದ್ದೇವೆ ಹಿಂದಿನ ಪದ್ಧತಿಯಲ್ಲಿ ಎತ್ತಿದ ಆಹಾರ ಪದಾರ್ಥ ಹೊರದೇಶಕ್ಕೆ ಹೋಗಿಲ್ಲವೇ? ಭತ್ತ ಹೋಗುತ್ತಾ ಇರಲಿಲ್ಲವೇ? ಆವತ್ತು ಬ್ಲಾಕ್ ಮಾರ್ಕೆಟ್ ಮಾಡಿಲ್ಲವೆ? ಅವತ್ತೂ ಮಾಡಿದ್ದೀರಿ, ಇವತ್ತುಮಾಡಿದ್ದೀರಿಏಕೆ ಮಾಡಿದ್ದೀರಿ ಎಂದರೆ, ಅಧಿಕಾರಿಗಳ ಬಗ್ಗೆ ಸರ್ಕಾರ ತಮ್ಮ ಕಂಟ್ರೋಲ್‌ನಲ್ಲಿ ಇಟ್ಟುಕೊಂಡು ಅದಕ್ಕೆ ಅನುಗುಣವಾಗಿ ನಡಿಸಿಕೊಂಡು ಬಂದಿಲ್ಲ. ಅವರು ರೈತರ ಚರ್ಮ ಸುಲಿದಿದ್ದಾರೆ,ಹಿಂಸೆ ಕೊಟ್ಟಿದ್ದಾರೆ. ಅದಕ್ಕೇ ನಾವುಹೇಳುವುದು. ಈ ದೇಶದಲ್ಲಿ ಏನಾದರೂಆದಾಗ ಒಂದುಮಾತ ಹೇಳುತ್ತಾರೆ, ಯಾರ ಸಪೋರ್ಟು ಇಲ್ಲದೇ ಒಂದು ಗಿಡ ಬೆಳೆಯುತ್ತದೆ. ತೆಂಗಿನಮರಕ್ಕೆ ರೋಗ ಬರುತ್ತದೆ ಹಾಗೂ ಒಂದು ರೀತಿಯ ಹುಲ್ಲು ಬೆಳೆಯುತ್ತದೆ. ಇದಕ್ಕೆ ಅವರು ಕಾಂಗ್ರೆಸ್ ಹುಲ್ಲು ಎಂದೂ ಹಾಗೂ ಕಾಂಗ್ರೆಸ್ ರೋಗ ಎಂದು ಹೇಳುತ್ತಾರೆ. ಈ ಒಂದು ಲೆವಿ ಪದ್ಧತಿ ಏನಿದೆ ಇದು ಕಾಂಗ್ರೆಸ್ ಆಡಳಿತದಲ್ಲಿ ಬಂದಿದ್ದಾಗಿದೆ. ಆದು ಯಾವ ಕಾಂಗ್ರೆಸ್ಸೇ ಆಗಿರಬಹುದು. ಅದು ಎ,ಬಿ ಸಿ,ಡಿ,ಇ ಎಫ್,ಜಿ,ಎಚ್ ಯಾವುದೇ ಆಗಿರಬಹುದು. ಹಿಂದಿನ ಅಧಿಕಾರಿಗಳು ಕಾನೂನನ್ನು ಅನುಸರಿಸಿಲ್ಲ, ಒಂದು ಎಕರೆ ಇರವವರ ಹತ್ತಿರವೂ ವಸೂಲಿ ಮಾಡಿದ್ದಾರೆ. ಅರ್ಧ ಎಕರೆ ಇರುವವರ ಹತ್ತಿರವೂ ವಸೂಲಿ ಮಾಡಿದ್ದಾರೆ. ಈ ದಿನ ದೊಡ್ಡ ರೈತರ ಬಗ್ಗೆ ಇವರು ಆತಂಕ ಮಾಡೇ ಇಲ್ಲ. ಬ್ಲಾಕ್ ಮಾರ್ಕೆಟಿಯರ್ಸ್ ಬಗ್ಗೆ ಆತಂಕ ಮಾಡಿಲ್ಲ. ಆ ಪದ್ಧತಿಯಲ್ಲೂ ಕೂಡ ಕೊಂಡ ಬೆಲೆಯಲ್ಲಿ ಅನುಗುಣವಾಗಿ ಕಡಿಮೆ ಬೆಲೆಯಲ್ಲಿಸಾಮಾನ್ಯ ಊಟ ಮಾಡತಕ್ಕ ಜನರಿಗೆ ಕಡಿಮೆ ಬೆಲೆಗೆ ಅದನ್ನು ಒದಗಿಸಿಲ್ಲ. ಯಾವ ಸರ್ಕಾರವೂ ಒದಗಿಸಿಲ್ಲ. ಈ ದೇಶದಲ್ಲಿ ಲೆವಿ ಪದ್ಧತಿ ಬಂದಮೇಲೆ ಯಾವ ಯಾವ ಕಾಂಗ್ರೆಸ್ ಸರ್ಕಾರಗಳು ಬಂದವೋ ಅವುಗಳು ಯಾವ ರೈತರಿಗೂ ಸರಿಯಾದ ಬೆಲೆಯನ್ನು ಕೊಟ್ಟಿಲ್ಲ. ಕೊಂಡ ಬೆಲೆಗೆ ಅನುಗುಣವಾಗಿ ಕಡಿಮೆ ಲಾಭವಲ್ಲಿ ತಿನ್ನುವವನಿಗೆ ಅನ್ನ ಕೊಟ್ಟಿಲ್ಲ. ಹಿಂದೆ ಏನಾಯಿತೋ ಅದು ಇವತ್ತು ಕೂಡ ಆಗಿದೆ.

ಅಧ್ಯಕ್ಷರು'—ಸರ್ಕಾರದ ಹತ್ತಿರ ಬಫರ್ ಸ್ಟಾಕ್ ಬೇಡವೇ?

ಶ್ರೀ ಎಚ್. ಗಂಗಾಧರನ್.—ಬೇಕು. ಮಾರ್ಕೆಟ್‌ನಲ್ಲಿ ಅದನ್ನು ಕೊಂಡುಕೊಳ್ಳಲಿ. ರೈತರು ಬೆಳೆದಿದ್ದನ್ನು ನೀವು ಕಡಿಮೆ ಬೆಲೆಗೆ ಕೊಂಡು ಬೇರೆಯವರಿಗೆ ಕೊಡುವುದಕ್ಕೆ ಮಾಡುತ್ತಿದ್ದೀರಿ ನೀವು. ನೀವು ಕಬ್ಬಿಣವನ್ನು ಉತ್ಪಾದನೆ ಮಾಡಿ ಲೆವಿ ಮೂಲಕ ಕೊಂಡು ಅದನ್ನು ರೈತರಿಗೆ ಕಡಿಮೆ ಬೆಲೆಗೆ ಒದಗಿಸುತ್ತೀರಾ? ಅವರಿಗೆ ಬೇಕಾಗತಕ್ಕ ಸಿಮೆಂಟನ್ನು ಕೊಡುತ್ತಿದ್ದೀರಾ? ಸಕ್ಕರೆಯನ್ನು ಕೊಡುತ್ತಿದ್ದೀರಾ ಮಿಲ್ ಬಟ್ಟೆಗಳನ್ನು ಕಡಿಮೆ ಬೆಲೆಗೆ ಒದಗಿಸಿಕೊಡುತ್ತಿದ್ದೀರಾ? ಅವರಿಗೆ ಬೇಕಾಗಿರತಕ್ಕ ವಸ್ತುಗಳನ್ನು ಕೊಡುವುದಕ್ಕೆ ನೀವು ತಯಾರಿಲ್ಲ. ಆತನ ಹೆಂಡತಿ ಮಕ್ಕಳು ಬೆಳಿಗ್ಗೆಯಿಂದ ರಾತ್ರಿಯವರಿಗೆ ಬೆವರು ಸುರಿಸಿ ಮಳೆ ಬಿಸಿಲೆನ್ನದೆ ಜಮೀನಿನಲ್ಲಿ ನಿಂತು ಸಾಯುತ್ತಿದ್ದಾರೆ. ಈ ಲೆವಿ ಪದ್ಧತಿಯಿಂದ ನೀವು ಅವರ ಚರ್ಮ ಸುಲಿಯುವ ಪ್ರಯತ್ನ ಮಾಡುತ್ತಿದ್ದೀರಿ. ಬ್ಲಾಕ್‌ಮಾರ್ಕೆಟಿಯರ್ಸ್‌ಗೆ ಸಪೋರ್ಟ್ ಮಾಡಿಕೊಂಡು ಬಂದಿದ್ದೀರಿ. ಇದು ಇವತ್ತೇನೂ ಹೊಸದಲ್ಲ. ಆದರೆ ಇವತ್ತು ಇರತಕ್ಕಂತಹದ್ದು ಏನೆಂದರೆ, ನಿಮ್ಮ ಅಧಿಕಾರಿಗಳು ಕಾನೂನು ರೀತಿಯಲ್ಲಿ ನಡೆದುಕೊಂಡಿದ್ದಾರೆಯೇ? ಏಕೆ ರೈತರ ಮನೆ ಬಾಗಿಲಿಗೆ ವಸೂಲಿ ಮಾಡುವುದಕ್ಕೆ ಹೋಗಿದ್ದೀರಿ? ರೈತನ ಕಣದಿಂದ ಕೂಡಾ ಸಂಗ್ರಹ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೀರಿ. ಯಾಕೆ ಅವರಿಗೆ ಪರ್ಮಿಟ್ ಕೊಡುವುದಕ್ಕೆ ಅವಕಾಶ ಮಾಡಿಕೊಟ್ಟಿರಿ? ಅವನು ಸ್ವಾತಂತ್ರವಾಗಿ ತೆಗೆದುಕೊಂಡು ಹೋಗಬೇಕಾಗಿತ್ತು. ಅಧ್ಯಕ್ಷರೆ, ಹಿಂದಿನ ಪದ್ಧತಿ ಇದ್ದಾಗ ನಾನೇ ಬೆಳೆದ ೫ ಕ್ವಿಂಟಾಲಿನಲ್ಲಿ ಎರಡೂವರೆ ಕ್ವಿಂಟಾಲನ್ನು ಲೆವಿ ಕೊಟ್ಟು ಬಂದಿದ್ದೇನೆ. ಈಗ ಬೆಳೆಯುವುದನ್ನು ಬಿಟ್ಟಿದ್ದೇವೆ ಈಗ ಬೇರೆ ಕಡೆಯಿಂದ ತಿನ್ನುವುದಕ್ಕೆ ಕೊಂಡುಕೊಂಡು ಬರುವುದಕ್ಕೆ ಪರ್ಮಿಟ್ ಇಲ್ಲದೇ ಕೊಡುವುದಿಲ್ಲ ಎಂದು ಹೇಳುತ್ತಾರೆ. ನಂಜನಗೂಡಿನಿಂದ ಮೈಸೂರಿಗೆ ತರಬೇಕಾದರೆ ೧೦ ಕ್ವಿಂಟಾಲ್‌ಗೆ ಪರ್ಮಿಟ್ ಕೇಳಿದರೆ ೫ ಕ್ವಿಂಟಾಲ್ ಲೆವಿ ಕೊಡಬೇಕು ಎಂದು ಹೇಳುತ್ತಾರೆ. ಇದೂ ಬೆಳೆದವನಲ್ಲ, ಕೊಂಡುಕೊಳ್ಳುವವನು ಕೊಡಬೇಕಂತೆ, ಇದು ಯಾವ ನ್ಯಾಯ? ಬಡವರಿಗೆ ಉಪಕಾರ ಆಗುವ ಪದ್ಧತಿಯನ್ನು ತಂದಿದ್ದೀರಾ ಇದನ್ನು ಕೊಡಬೇಕೇ? ಸಪೋರ್ಟ್ ಪ್ರೈಸ್ ಕೊಡುವುದಕ್ಕೆ ಇದನ್ನು ತಂದಿದ್ದೇವೆಂದು ನೀವು ಹೇಳುತ್ತೀರಿ. ಈ ವಿಷಯದ ಬಗ್ಗೆ ಕಳೆದ ಅಧಿವೇಶನದಲ್ಲಿಯೇ ಗಲಾಟೆ ಆಗಿದೆ ಯಾವಾಗ ಬೆಲೆ ಬಿದ್ದಿತ್ತು ಆಗ ಕೊಳ್ಳಲು ಫೇರ್‌ಪ್ರೈಸ್ ಡಿಪೋ ಮಾಡಿದ್ದೇವೆಂದು ಹೇಳಿದಿರಿ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಕ್ಟೋಬರ್‌ನಲ್ಲಿ ಭತ್ತ ಕುಯಿಲಿಗೆ ಬಂತು. ನವೆಂಬರ್–ಡಿಸೆಂಬರ್‌ನಲ್ಲಿ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಒಂದು ಕಡೆಯೂ ಡಿಪೋವನ್ನು ಓಪನ್ ಮಾಡಲೇ ಇಲ್ಲ. ಒಂದು ಕಡೆ ಒಂದು ಕಾಳು ಕೊಳ್ಳುವುದಕ್ಕೆ ಡೆಪ್ಯುಟಿ ಕಮಿಷನರ್ ಮುಂದೆ ಬರಲಿಲ್ಲ. ಅವರಿಗೆ ಕೇಳಿದರೆ, ದುಡ್ಡು ಬಂದಿಲ್ಲ ಎಂದು ಹೇಳಿದರು. ನವೆಂಬರ್‌ನಲ್ಲಿ ಮೈಸೂರು ಜಿಲ್ಲೆಯಲ್ಲಿ ಇದು ಆಯಿತು ನವೆಂಬರ್ ಆಗಲಿ ಡಿಸೆಂಬರ್‌ನಲ್ಲಿ ಡಿಪೋಗಳು ಬರಲಿಲ್ಲ. ಜನವರಿಯಲ್ಲಿ ಲೆವಿಯನ್ನು ಕಲೆಕ್ಟ್ ಮಾಡುವುದಕ್ಕೆ ಆಗ ಪ್ರಾರಂಭ ಮಾಡಿದರು. ಯಾವಾಗ ಅಕ್ಟೋಬರ್ ನವೆಂಬರ್‌ನಲ್ಲಿ ಬೆಲೆ ಬಿದ್ದಿತ್ತು ಆಗ ಸರ್ಕಾರ ಸಪೋರ್ಟ್ ಪ್ರೈಸ್ ಕೊಡುವುದಕ್ಕೆ ಮುಂದೆ ಬರಲಿಲ್ಲ. ಆಗ ರೈತ ಕಡಿಮೆ ಬೆಲೆಗೆ ಮಾರಿದ. ಯಾರೋ ದುಡ್ಡಿದ್ದವರು ಕೊಂಡು ಸ್ಟಾಕ್ ಮಾಡಿಕೊಂಡರು. ಯಾವಾಗ ಭತ್ತವೆಲ್ಲಾ ಮುಗಿದುಹೋಗಿ ಸ್ವಲ್ಪ ಭತ್ತ ಉಳಿದಿತ್ತೋ ಆ ಸಮಯದಲ್ಲಿ ಲೆವಿ ವಸೂಲಿ ಮಾಡುವುದಕ್ಕೆ, ಸಪೋರ್ಟ್ ಪ್ರೈಸ್ ಕೊಡುತ್ತೇವೆಂದು ಹೇಳಿ ಮುಂದೆ ಬಂದರು ರೈತರಿಂದ ಹೊರಗಡೆಯವರು ೧೫೦ ರೂಪಾಯಿಗೆ ಕೊಂಡುಕೊಳ್ಳುವುದಕ್ಕೆ ತಯಾರುಲ್ಲಿದ್ದಾಗ ನೀವು ೧೨೫ ರೂಪಾಯಿ ಕೊಡುವುದಕ್ಕೆ ಡಿಪೋಗಳನ್ನು ಓಪನ್ ಮಾಡಿದಿರಿ. ಈ ರೀತಿಮಾಡಿದಿರಿ. ನಿಮ್ಮ ಕಾನೂನಿಗೆ ಅನುಗುಣವಾಗಿ ನೀವು ನಡೆದುಕೊಂಡಿದ್ದರೆ ರೈತ ನಿಮ್ಮ ಮುಂದೆ ಇವತ್ತು ಬರುತ್ತಾ ಇರಲಿಲ್ಲ. ನಿಮ್ಮ ಅಧಿಕಾರಿಗಳು ಎಂದೂ ಆ ರೀತಿ ನಡೆದುಕೊಂಡಿಲ್ಲ. ರೈತರಿಗೆ ಅನೇಕ ರೀತಿಯ ಕಿರುಕುಳವನ್ನು ಅವರು ಕೊಟ್ಟಿದ್ದಾರೆ. ಪೋಲೀಸಿನವರ ಸಹಾಯದಿಂದ ಕಿರುಕುಳ ಕೊಟ್ಟಿದ್ದಾರೆ, ದಿನಗಟ್ಟಲೇ ಪೋಲೀಸ್ ಠಾಣೆಯಲ್ಲಿ ರೈತರನ್ನು ಇಟ್ಟಿದ್ದಾರೆ. ಮಂತ್ರಿಗಳ ಗಮನಕ್ಕೆ ತಂದರೂ ಏನೂ ಪ್ರಯೋಜನವಾಗಲಿಲ್ಲ. ಕಾನೂನು ಮಾತ್ರ ಕೇವಲ ಪುಸ್ತಕದ ಬದನೇಕಾಯಿಯಾಗಿ ಉಳಿದಿದೆ. ರೈತರ ಮೇಲೆ ಆಗಿರುವ ಅನ್ಯಾಯದ ಬಗ್ಗೆ ಸರ್ಕಾರಕ್ಕೆ ಛೀಮಾರಿ ಮಾಡಬೇಕಾದದು ಅಗತ್ಯವಾಗಿದೆ. ರೈತರಿಗೆ ಉಪಕಾರ ಮಾಡುವ ಹೆಸರಿನಲ್ಲಿ, ಅನ್ಯಾಯದ ಪರಂಪರೆ ನಡೆಸುವುದು ಈ ಕಾಂಗ್ರೆಸ್ಸಿಗೆ ರಕ್ತಗತವಾಗಿಬಿಟ್ಟಿದೆ. ಈ ಲೆವಿ ಪದ್ಧತಿಯೇ ಸರಿಯಿಲ್ಲವೆಂದು ನಾನು ಹೇಳುತ್ತೇನೆ. ಇದರಿಂದ ರೈತನಿಗೆ ತೊಂದರೆಯೇ ವಿನಹಾ ಅನುಕೂಲವಂತೂ ಸಾಧ್ಯವಿಲ್ಲ. ಮಿಲ್‌ಗಳ ಮಾಲೀಕರುಗಳಿಗೆ ಕೋಟ್ಯಾಂತರ ಮಾಡಿಕೊಳ್ಳುವುದಕ್ಕೆ ಅನುಕೂಲವಾಗಿದೆ. ರೈತನಿಗೆ ಆಗುತ್ತಿರುವ ಅನ್ಯಾಯವನ್ನು ಅಪಚಾರವನ್ನು ತಪ್ಪಿಸದಿದ್ದರೆ ರೈತರ ಶಾಪಕ್ಕೆ ಗುರಿಯಾಗುತ್ತೀರಿ. ಲೆವಿ ಪದ್ಧತಿಯನ್ನು ರದ್ದು ಮಾಡಿ, ಹೊಸರೂಪ

ದಲ್ಲಿ ರೈತರಿಗೆ ಸಬ್ಸಿಡಿ ಕೊಟ್ಟು, ಬತ್ತ ಕೊಳ್ಳುವಂತ ವ್ಯವಸ್ಥೆ ಮಾಡಿದರೆ ರೈತರಿಗೆ ಅನುಕೂಲವಾಗುತ್ತದೆ ಹೇಳುತ್ತೇನೆ ಈ ಒಂದು ಕೆಲಸವನ್ನು ಸರ್ಕಾರದವರು ಮಾಡಿ, ರೈತರಿಗೆ ಕೊಡುವ ಕಿರುಕುಳವನ್ನು ತಪ್ಪಿಸಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಆತ್ಮಾನಂದ ಎಂ.ಎಸ್.—ಸ್ವಾಮಿ, ಪರಿಷ್ಕೃತ ಲೆವಿ ನೀತಿಯಿಂದ, ನಮ್ಮ ಜಿಲ್ಲೆಯ ರೈತಾಪಿ ಜನಕ್ಕೆ ಬಹಳ ತೊಂದರೆಯಾಗಿದೆ. ನಮ್ಮ ಜಿಲ್ಲೆಯ ಸದಸ್ಯರುಗಳೆಲ್ಲಾ ಒಂದು ಕಡೆ ಸೇರಿ, ಹಿಂದಿನ ಪದ್ಧತಿಯೇ ಅನುಕೂಲವಾಗಿತ್ತೆಂದು ತೀರ್ಮಾನ ಮಾಡಿ, ಅದನ್ನೇ ಮುಂದುವರಿಸಿಕೊಂಡು ಹೋಗಬೇಕೆಂದು ಸರ್ಕಾರಕ್ಕೆ ಒತ್ತಾಯ ಮಾಡಿದ್ದೇವೆ. ಮೈಸೂರಿನಲ್ಲಿ ನಡೆದ ಸಚಿವ ಸಂಪುಟದ ಸಭೆಯಲ್ಲಿ ಕೂಡ ಈ ವಿಷಯ ಪ್ರಸ್ತಾಪವಾಗಿದೆ, ಲೆವಿ ಪದ್ಧತಿಯನ್ನು ನಿಗದಿ ಮಾಡಬೇಕಾದರೆ, ಯಾವ ಆಧಾರದ ಮೇಲೆ ನಿಗದಿ ಮಾಡಬೇಕೆನ್ನುವುದು ಮುಖ್ಯ. ಯಾವ ಜಿಲ್ಲೆಯಲ್ಲಿ ಎಷ್ಟು ಪ್ರಮಾಣದ ಭತ್ತ ಬೆಳೆಯುತ್ತಾರೆಂಬುದನ್ನು ಗಮನದಲ್ಲಿಟ್ಟುಕೊಂಡು, ಅಲ್ಲಿನ ಅಂಕಿಸಂಖ್ಯೆಗಳನ್ನು ನೋಡಿಕೊಂಡು ನಿಗದಿ ಮಾಡಬೇಕು. ನಮ್ಮ ಜಿಲ್ಲೆ ಪ್ರಮುಖವಾಗಿ ಕಬ್ಬು ಬೆಳೆಯುತಕ್ಕ ಪ್ರದೇಶ, ನಮ್ಮ ಜಿಲ್ಲೆಯಲ್ಲಿರುವ ಮೂರು ಸಕ್ಕರೆ ಕಾರ್ಖಾನೆಗಳಲ್ಲದೆ, ನೆರೆ ಜಿಲ್ಲೆಯ ಎರಡು ಸಕ್ಕರೆ ಕಾರ್ಖಾನೆಗಳಿಗೂ ಕಬ್ಬನ್ನು ಸರಬರಾಜು ಮಾಡುತ್ತಿದ್ದೇವೆ. ಈ ಅಂಶವನ್ನು ಗಮನದಲ್ಲಿಟ್ಟುಕೊಂಡು ಲೆವಿ ನಿಗದಿ ಮಾಡಬೇಕೆಂದೂ, ಏಕಾಏಕಿ ನಿಗದಿ ಮಾಡಬಾರದೆಂದು ತಿಳಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಪಂಪಾಪತಿ.—ಮಾನ್ಯ ಅಧ್ಯಕ್ಷರೇ, ಲೆವಿ ಪದ್ಧತಿ ಬಗ್ಗೆ ಈಗಾಗಲೇ ನಮ್ಮ ನಾಯಕರೇ ಹೇಳಿದ್ದಾರೆ. ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಲೆವಿ ಪದ್ಧತಿಯಿಂದ ರೈತರಿಗಾಗಲೀ, ಕೊಳ್ಳುವವರಿಗಾಗಲೀ ಅನುಕೂಲವಾಗುವುದಿಲ್ಲ ರೈತರಿಗೆ ಸರಿಯಾದ ಬೆಲೆಯನ್ನು ಕೊಡಬೇಕೆಂಬುದನ್ನು ಸ್ವಾಭಾವಿಕವಾಗಿ ಎಲ್ಲರೂ ಹೇಳುತ್ತಾರೆ. ರೈತರಿಗೆ ಸರಿಯಾದಂತ ಬೆಲೆ ಕೊಟ್ಟು, ಕೊಳ್ಳುವವರಿಗೂ ಸೂಕ್ತವಾದಂತ ಬೆಲೆ ಇರಬೇಕಾದರೆ, ಸರ್ಕಾರವೇ ಸಗಟು ವ್ಯಾಪಾರವನ್ನು ಕೈಗೊಂಡರೆ ಮಾತ್ರ ಸಾಧ್ಯ. ಇಂಥ ಒಂದು ವ್ಯವಸ್ಥೆ ಮಾಡುವುದರಿಂದ ರೈತರಿಗೂ ನ್ಯಾಯವಾದ ಬೆಲೆ ಸಿಗುವಂತಾಗುತ್ತದೆ. ಕೊಳ್ಳತಕ್ಕವರಿಗೂ ನ್ಯಾಯ ಬೆಲೆ ಇರುತ್ತದೆ. ಇದರಿಂದ ಮಧ್ಯದಲ್ಲಿ ಇರುವಂತ ವ್ಯಾಪಾರಸ್ಥರಿಗೆ ಯಾವರೀತಿಯ ಲಾಭವೂ ಆಗುವುದಿಲ್ಲ. ಅಲ್ಲದೆ, ಲೆವಿ ಪದ್ಧತಿಯಲ್ಲಿ ಸಣ್ಣ ರೈತರಿಂದಲೇ ಬತ್ತ ಸಂಗ್ರಹಣೆ ಜಾಸ್ತಿಯಾಗುವುದು. ದೊಡ್ಡ ರೈತರು ಸಂಗ್ರಹ ಮಾಡಿ, ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಾರೆ. ಈಗ ಮಾಡಿರುವಂತ ಪದ್ಧತಿ ನಾಳೆಯಿಂದಲೇ ಜಾರಿಗೆ ಬರುವುದಕ್ಕಾಗುವುದಿಲ್ಲ. ಈಗಿನ ಪದ್ಧತಿಯಲ್ಲಿ ಬತ್ತ ಕೊಳ್ಳತಕ್ಕವರೂ ಲೆವಿ ಕೊಡಬೇಕೆಂದು ಮಾಡಿದ್ದೀರಿ. ಇದರಿಂದ ಮಂಡಕ್ಕಿ ಮತ್ತು ಅವಲಕ್ಕಿ ಮಾಡತಕ್ಕವರು ಏನು ಭತ್ತವನ್ನು ಕೊಳ್ಳುತ್ತಾರೆ, ಅವರು ಕೂಡ ಲೆವಿ ಕೊಡಬೇಕಾಗಿದೆ. ಮಂಡಕ್ಕಿ ಮತ್ತು ಅವಲಕ್ಕಿ ಊಟ ಮಾಡುವವರು ಯಾರು? ಅಡಿಗೆ ಮಾಡಿಕೊಂಡು ಊಟ ಮಾಡುವುದಕ್ಕೆ ಆಗದೇ ಇರತಕ್ಕ ಜನ ಮಂಡಕ್ಕಿ ತಿಂದು ಜೀವನ ಮಾಡುತ್ತಾರೆ. ನಮ್ಮ ದಾವಣಗೆರೆಯಲ್ಲಿ ಸಾವಿರಾರು ಚೀಲ ಮಂಡಕ್ಕಿ ತಯಾರು ಮಾಡುತ್ತಾರೆ. ಒಂದು ರೂಪಾಯಿ ಕೊಟ್ಟು ಊಟಮಾಡದೇ ಇರತಕ್ಕ ಜನ ೪ ಆಣೆ ಕೊಟ್ಟು ಮಂಡಕ್ಕಿ ಕೊಂಡು ತಿಂದು ಜೀವನ ಮಾಡುತ್ತಾರೆ. ಮಂಡಕ್ಕಿ ಮತ್ತು ಅವಲಕ್ಕಿ ಮಾಡುವವರು ಲೆವಿ ಕೊಟ್ಟರೆ ಸಾಮಾನ್ಯವಾಗಿ ಮಂಡಕ್ಕಿ ಮತ್ತು ಅವಲಕ್ಕಿ ಬೆಲೆಯನ್ನು ಜಾಸ್ತಿ ಮಾಡುತ್ತಾರೆ ಆದ್ದರಿಂದ ಮಂಡಕ್ಕಿ ಮತ್ತು ಅವಲಕ್ಕಿ ಮಾಡುವವರು ಕೊಳ್ಳತಕ್ಕ ಭತ್ತದ ಮೇಲಿನ ಲೆವಿಯನ್ನು ಕಡ್ಡಾಯವಾಗಿ ರದ್ದು ಮಾಡಬೇಕೆಂದೂ, ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಲೆವಿಯನ್ನು ನಿಲ್ಲಿಸುವುದಕ್ಕೆ ಆದೇಶಕೊಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಹತ್ತು ರೂಪಾಯಿ ಬೋನಸ್ ಕೊಡುತ್ತೇವೆಂದು ಆರ್ಡರ್ ಮಾಡಿದ್ದೀರಿ. ರೈತರಿಗೆ ಯಾವರೀತಿ ಕೊಡುತ್ತೀರಿ? ಬೆಂಬಲದ ಬೆಲೆ ಮೇರೆಗೆ ಎಷ್ಟು ಭತ್ತವನ್ನು ಖರೀದಿ ಮಾಡಿದ್ದೀರಿ? ದಯವಿಟ್ಟು ತಿಳಿಸಬೇಕು.

†SRI MANIK RAO PATIL.—Sir, eversince the Government has formulated a new Policy, some of the Members within the House and out side the house were and are very much agitating against the policy

adopted by the Government. I have explained by meeting the Members on a number of occasions, by attending the meetings at the District level and whenever delegations came to me representing hardship, I have explained the basic object of the policy and I have also tried to impress upon them that the Government of Karnataka is not the sole author of this policy. Before formulating this policy, we have to get concurrence from the Government of India. Therefore, I do not think that there is any scope for the Government of Karnataka to take a major initiative in formulating this policy. Sir, for the benefit of the Hon. Members of this House, I will read before this House the guidelines issued by the Government of India. This is the letter from the Hon. Minister of Agriculture, Rural Reconstruction and irrigation and CS, Government of India, New Delhi, dated 1st October, 1981 addressed to Shri R. Gundu Rao, Chief Minister, Government of Karnataka. It reads thus.

My Dear Sri Gundu Rao,

As you are aware, the Kharif procurement season is getting started shortly. With increase in the off take of foodgrains and considering the general food and price situation in the country, it is of urgent imporeance that maximum procurement of rice should be ensured for the Central Pool. It is essential that all-out efforts are directed by the Centre and the States in that direction, plugging all loopholes in the system and devising measures to step up procurement. Our Prime Minister has rightly attacked great importance to this and we should not fail in this respect. I need not emphasise that State like yours has a vital role play in the overall effort to enhance the total availability of foodgrains in the Central pool.

2. You will recall that last year also we had written to you urging upon the need to impose mill levy at adequate level and energising the procurement machinery. Though you had introduced levy on millers at 40% it was perhaps too late in the season. We also find that authorising the Food Corporation of India to collect levy has been very effectively done in some of other States and there is no reason why you should not also follow suit. We have reviewed the levy orders prevailing in the various States and a detailed telegram has been sent on the subject my Ministry vide No. so and so dated 19-9-1981. As already indicated in our message to the various State Governments, it is necessary to provide for levy on both millers and wholesalers Keeping in view the production prospects of your State. In view of

the good crop in your State, it should be desirable and possible for you to increase levy from 40 to 50%

3. Apart from imposing levy, you will have to keep a close and continuous watch on the mills to ensure that levy obligation is not avoided by the millers by manipulation of records or resorting to other malpractices. You may also take measures like limiting stock-holdings, banning or imposing restrictions on sale of rice from one wholesaler to another etc. It has been found that while modern mills and sellers etc. are covered by levy orders, the husking mills and hullers are not so covered thus providing scope for evasion of levy. In some of the States, these small units though indulging in trade getaway by certifying that they are doing only custom milling ( differently called as cooly or bani milling). It is necessary to ensure that even these units of certain capacity also pay a fixed quantity of levy though on a limited scale. We leave it to the State Government to examine this problem and provide certain measures to plug this loophole in the procurement programme.

4. While the general policy of the Government at present as not to impose restrictions on movement of rice. apprehensions have been expressed in certain quarters that in order to evade levy on mills, paddy may be moved by traders from one State to another. Though we do not expect substantial quantity of paddy to be moved out in this respect, there should however, be no loophole in the matter for such leakage. You may, therefore, consider imposing a ban on movement of paddy from your State to other States or impose a levy on such movement. In case, you find there is substantial movement of paddy outside the State, there will be no other go but to prevent large scale movement of such stocks.

5. May I request you to give your personal attention to this matter and quickly review the existing practice and formulate necessary draft levy orders, keeping in view the National policy. etc. etc."

Further sir, the Hon. Minister for Agriculture, Government of ndia has written a D.O. letter dated September 29, 1981 to our Hon. hief Minister from which I would like to quote the relevant ortions.

"As you are aware the Government of India have announced procurement price for common variety of paddy of Rs. 115 per quintal for 1981-82 Kharif season. The procurement price for other varieties of paddy. vie. fine and superfine, will be Rs. 119 and Rs. 123 per quintal respectively.

2. The Government of India have been fixing the support price for food grains after careful consideration every year. All relevant factors like the recommendations of the Agricultural Prices Commission alongwith the views of the State Governments, general economic situation and agricultural and economy are taken into account by the Government of India, in fixing the procurment price which is uniformly applicable in the country as a whole. However, of late, it has been found that some of States had offered higher prices in price support operations. Besides creating embarrassing situation, this leads to increase in price level which indirectly results in a higher drawal from the Government stocks apart from adding to the inflationary spiral. As any such step on the part of the State Governments is bound to jeopardise the food policy which is drawn up by the Government of India, in the interest of the Country as a whole, it has been the considered view of the Government of India that the States should not announce any higher support price different from the support price fixed by the Central Government. The Reserve Bank of India has also taken a a serious view of such a practice and indications are that it will decline to extend concessional credit to State Governments for financing procurement in violation of national procurement price policy.

